
"JANAPADA" Monthly - Oct 2017
"ಜನಪದ" ಮಾಸಿಕ – ಅಕ್ಟೋಬರ್ 2017

Page No. -52
RNI No. KAR/KAN/2010/20676


Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26




ವಾರ್ಷಿಕ ಚಂದಾ ರೂ.25/-

# ಜನಪದ

ಅಕ್ಟೋಬರ್ 2017





ನಿತ್ಯೋತ್ಸವ ಕವಿ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ 2017 ನೇ ಸಾಲಿನ ಮೈಸೂರು ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಹೆಚ್.ಸಿ. ಮಹದೇವಪ್ಪ ಅವರು ಉಪಸ್ಥಿತರಿದ್ದಾರೆ.



ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿಚಕ್ರ ವಾಹನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿತರಿಸಿದರು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಉಮಾಶ್ರೀ ಅವರು ಉಪಸ್ಥಿತರಿದ್ದಾರೆ.

ರಾಜಭವನದಲ್ಲಿ ರಾಜ್ಯ ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ ಪ್ರದಾನ ಮಾಡಿದ ಸಂದರ್ಭ. ರಾಜ್ಯಪಾಲರಾದ ವಜುಭಾಯಿ ವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ರಾಮಲಿಂಗಾರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ ಚಂದ್ರ ಕುಂಟಿಯಾ, ಪೊಲೀಸ್ ಮಹಾ ನಿರ್ದೇಶಕ ಆರ್.ಕೆ ದತ್ತ ಅವರು ಚಿತ್ರದಲ್ಲಿದ್ದಾರೆ.







05 ಕರ್ನಾಟಕದ ರಾಜ್‌ಘಾಟ್–ಅರಸೀಕೆರೆಯ ಕಸ್ತೂರಬಾ ಗಾಂಧಿ ಆಶ್ರಮ
• ಪ್ರೊ. ಜಿ. ಬಿ. ಶಿವರಾಜು

10 ಗಾಂಧೀಜಿ : ಶಿಸ್ತು ಮತ್ತು ಮಾನವೀಯ ಔದಾರ್ಯಗಳು
• ಖಾದ್ರಿ ಎಸ್ .ಅಚ್ಯುತನ್

14 ಖಾದಿಗೆ ಮಹತ್ವ ತಂದುಕೊಟ್ಟ ಗಾಂಧಿ
• ಜಿ.ರಾಮಕೃಷ್ಣ

17 ಗಾಂಧೀಜಿ ಅವರ ಬಾಲ್ಯ ದಿನಗಳು
• ವೇಮಗಲ್ ಸೋಮಶೇಖರ್

19 ಬೆಳಗಾವಿ ಜಿಲ್ಲೆಯಲ್ಲಿ ರಾಷ್ಟ್ರಪಿತರ ಹೆಜ್ಜೆ ಗುರುತುಗಳು
• ರಾಯನಗೌಡ ಪಾಟೀಲ

23 ಬಿಸರಳ್ಳಿಯಲ್ಲಿದೆ ಗಾಂಧೀಜಿ ಚಿತಾಭಸ್ಮ
• ಕುಬೇರ ಮಜ್ಜಿಗಿ

24 ಶಾಶ್ವತ ಅರ್ಥಶಾಸ್ತ್ರಕ್ಕೆ ಗಾಂಧೀಜಿ ಸಲಹೆಗಳು
• ಡಾ. ಸಂಗಮೇಶ ತಮ್ಮನಗೌಡ್ರ

26 ಲಾಲ್ ಬಹಾದ್ದೂರ್ ಶಾಸ್ತ್ರೀಜಿ –ಒಂದು ನೆನಪು
• ಹನುಮಂತ. ಮ. ದೇಶಕುಲಕರ್ಣಿ

29 ಮೋಡ ಬಿತ್ತನೆ ಮೂಲಕ ಮಳೆಯ ತರಿಸಿದ ಭಗೀರಥ ಪ್ರಯತ್ನ
• ವೇಣುಗೋಪಾಲ ಪಿ. ಎಂ

32 ಯಾದಗಿರಿಗೆ ಬೃಹತ್ ರೈಲ್ವೆ ಬೋಗಿ ಫ್ರೇಮ್ ತಯಾರಿಕಾ ಕಾರ್ಖಾನೆ
• ಸಿದ್ದೇಶ್ವರಪ್ಪ. ಜಿ .ಬಿ

35 ಕೆರೆ ತುಂಬಿಸಲಿರುವ ಬೆಂಗಳೂರು ತ್ಯಾಜ್ಯ ಸಂಸ್ಕರಿಸಿದ ನೀರು
• ಸಿ. ವಿ. ವೇದಾವತಿ

38 ಬಯಲು ಮುಕ್ತ ವಿಜಯಪುರಕ್ಕಾಗಿ ಬಾಲಕಿಯ ಅಭಿಯಾನ
• ಗುರುರಾಜ.ಬ.ಕನ್ನೂರ

40 ಉಪವಾಸ ಮಾಡಿ ಶೌಚಾಲಯ ಕಟ್ಟಿಸಿಕೊಂಡ ಶಾಲಾ ವಿದ್ಯಾರ್ಥಿಗಳು
• ತುಕಾರಾಂ ರಾವ್ ಬಿ.ವಿ

42 ಖಗೋಳ ಕೌತುಕ ಪರಿಚಯಿಸುವ ಸಂಚಾರಿ ತಾರಾಲಯ
• ಪೃಥ್ವಿ ವಿ.ಜಿ.

44 ಪರಿಸರ ಸ್ನೇಹಿ ದೀಪಾವಳಿ ಆಚರಿಸೋಣ ಬನ್ನಿ
• ಸಿ. ರೂಪ

46 ಫಕೀರವ್ವ ಕುಟುಂಬದ ಬಾಗಿಲು ತೆರೆದ : ಪಶುಭಾಗ್ಯ
• ತುಕಾರಾಂ ರಾವ್ ಬಿ.ವಿ

50 ಡೋಂಗ್ರಿ ಜನರ ಬದುಕಿನಾಸರೆ – ತೂಗುಸೇತುವೆ
• ಹಿಮಂತರಾಜು ಜಿ



ಪ್ರಧಾನ ಸಂಪಾದಕರು
ಡಾ. ಪಿ. ಎಸ್. ಹರ್ಷ, ಐ.ಪಿ.ಎಸ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

# ಓದುಗರಿಂದ...

ಆರ್ಥಿಕವಾಗಿ ಅತೀ ಹಿಂದುಳಿದ ಬಡವರನ್ನು ಲಕ್ಷ್ಯದಲ್ಲಿಟ್ಟುಕೊಂಡು ಸದ್ಯದ ರಾಜ್ಯ ಸರ್ಕಾರ ಉತ್ತಮ ಯೋಜನೆಗಳನ್ನು ರೂಪಿಸಿ ಕ್ರಿಯಾಗೊಳಿಸುತ್ತಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಭಿನಂದನೆಗಳು.

ಬೆಂಗಳೂರಿನಾದ್ಯಂತ ತೆರೆಯುತ್ತಿರುವ "ಇಂದಿರಾ ಕ್ಯಾಂಟೀನ್" ಇತಿಹಾಸದಲ್ಲಿಯೇ ಇರದ ಒಂದು ಯೋಜನೆಯಾಗಿದೆ . ಇದು ಸ್ವಾಗತಾರ್ಹ. ಮೂರುವರೆ ಲಕ್ಷ ಹೂಗಳಿಂದ ತಯಾರುಗೊಂಡಿರುವ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ "ಜ್ಞಾನ ಪೀಠ "ಪ್ರಶಸ್ತಿ ತನ್ನದಾಗಿಸಿಕೊಂಡಿರುವ ಕುಪ್ಪಳ್ಳಿ ವೆಂಕಟಪ್ಪನವರ ಮಗ ಪುಟ್ಟಪ್ಪನವರ ಮನೆ ತುಂಬಾ ಸುಂದರವಾಗಿತ್ತು.

ಹಾಗೆಯೇ ನಮ್ಮ ನಡೆದಾಡುವ ವೃತ್ತಿರಂಗ ಭೂಮಿ ಏಣಗಿ ಬಾಳಪ್ಪನವರ ಸಾವಿನ ಸುದ್ದಿ ಓದಿ ಮನಸ್ಸಿಗೆ ತುಂಬಾ ಘಾಸಿಯಾಯಿತು.

**ರಮೇಶ್ .ಕಿ. ಸಣಕಲ್ಲಗೌಡ್ರ,**
ಬಾಗಲಕೋಟೆ

ಸೆಪ್ಟೆಂಬರ್ ಜನಪದ ಮಾಸ ಪತ್ರಿಕೆಯಲ್ಲಿ ಈ ವರ್ಷ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಸಾವಿರಾರು ಹೂವುಗಳಿಂದ ನಿರ್ಮಿಸಿದ್ದ ರಾಷ್ಟ್ರಕವಿ ಕುವೆಂಪು ಅವರ ಕುಪ್ಪಳ್ಳಿಯ ಮನೆಯ ತದ್ರೂಪಿ ಪ್ರತಿಯ ಛಾಯಾಚಿತ್ರ ತುಂಬಾ ಸೊಗಸಾಗಿದೆ. ವಿವಿಧ ಕೋನಗಳಿಂದ ತೆಗೆದಿರುವ ಇನ್ನಷ್ಟು ಚಿತ್ರಗಳನ್ನು ಹಾಕಿದ್ದರೆ ಪ್ರತ್ಯಕ್ಷವಾಗಿ ನೋಡಲಾಗಿಲ್ಲದವರಿಗೆ ಅನುಕೂಲವಾಗುತಿತ್ತು. ಮತ್ತು ಇನ್ನೂ ಸೊಗಸಾಗಿರುತಿತ್ತು ಎನಿಸಿತು.

**ವೀರಣ್ಣ, ಬೆಳಗಾವಿ**




ಸೆಪ್ಟೆಂಬರ್ 2017 ರ ಜನಪದ ಸಂಚಿಕೆಯ ಮುಖಪುಟದಲ್ಲಿ "ಇಂದಿರಾ ಕ್ಯಾಂಟೀನ್ ಬೆಂಗಳೂರು ಇತಿಹಾಸದಲ್ಲಿ ಮೈಲಿಗಲ್ಲು" ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ಲೇಖನವು ಸಂಪೂರ್ಣ ಮಾಹಿತಿಯೊಂದಿಗೆ ಮತ್ತು ಉತ್ತಮ ಛಾಯಾಚಿತ್ರಗಳೊಂದಿಗೆ ಚೆನ್ನಾಗಿ ಮೂಡಿ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರವು ಕಡಿಮೆ ವೇತನಕ್ಕೆ ದುಡಿಯುವ ಶ್ರಮಿಕರಿಗೆ ಕಡಿಮೆ ದರದಲ್ಲಿ ಉಪಾಹಾರ, ಮತ್ತು ಎರಡು ಹೊತ್ತಿನ ಊಟ ಸಿಗುವಂತೆ ಮಾಡುವ ಮೂಲಕ ತುಂಬಾ ಒಳ್ಳೆಯ ಕೆಲಸ ಮಾಡಿದೆ.

ಸರ್ಕಾರದ ಬಹು ಮುಖ್ಯವಾದ ಈ ಯೋಜನೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಪ್ರಕಟಿಸಲಾಗಿರುವ ಈ ಲೇಖನ ಅತ್ಯುತ್ತಮವಾಗಿದೆ ಎಂದರೆ ತಪ್ಪಾಗಲಾರದು. ಇಂತಹ ಲೇಖನಗಳನ್ನು ಇನ್ನು ಹೆಚ್ಚು ಹೆಚ್ಚಾಗಿ ಪ್ರಕಟಿಸಿದಲ್ಲಿ ಸರ್ಕಾರದ ಸಾಧನೆಯನ್ನು ಜನರಿಗೆ ತಲುಪಿಸಿದಂತಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

**ಮಮತಾ ಎಂ. ಎನ್, ಮೈಸೂರು**

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

"ಶ್ರೀ ಚಾಮರಾಚೇಂದ್ರ ಮೃಗಾಲಯಕ್ಕೆ 125 ರ ಸಂಭ್ರಮ" ಲೇಖನವನ್ನು ಓದಿ ಮೈಸೂರು ನಿವಾಸಿಯಾಗಿರುವ ನನಗೆ ತುಂಬಾ ಹೆಮ್ಮೆ ಎನಿಸಿತು. ಲೇಖಕರು ಲೇಖನದಲ್ಲಿ ನಮ್ಮ ಮೈಸೂರು ಮೃಗಾಲಯದ ಸಂಕ್ಷಿಪ್ತ ಮಾಹಿತಿಯನ್ನು ಓದುಗರಿಗೆ ಒದಗಿಸಿಕೊಟ್ಟಿದ್ದಾರೆ. ವಿವಿಧ ಊರುಗಳಲ್ಲಿ ನೆಲೆಸಿರುವ ನಮ್ಮ ನೆಂಟರಿಷ್ಟರು ಬೇಸಿಗೆ ರಜೆ ಕಳೆಯಲು ಬಂದಾಗ ತಪ್ಪದೇ ಮಕ್ಕಳೊಂದಿಗೆ ಮೃಗಾಲಯಕ್ಕೆ ಭೇಟಿ ಕೊಡುವುದು ರೂಢಿಯಾಗಿಬಿಟ್ಟಿತ್ತು.

ಆದರೆ ಬೇರೆ ಬೇರೆ ಸ್ಥಳಗಳಲ್ಲಿ ನನ್ನ ಮಕ್ಕಳು ನೆಲೆಸಿರುವುದರಿಂದ ಮತ್ತು ಇಂದಿನ ಕಾಲದ ಬಿಡುವಿಲ್ಲದ ವೃತ್ತಿ ಬದುಕನ್ನು ನಡೆಸುತ್ತಿರುವುದರಿಂದ ಮತ್ತು ನಮಗೂ ವಯಸ್ಸಾದ ಕಾರಣದಿಂದ ಕಳೆದ 20 ವರ್ಷಗಳಿಂದ ಮೃಗಾಲಯಕ್ಕೆ ಭೇಟಿ ನೀಡಲು ಸಾಧ್ಯವಾಗಿಲ್ಲ. ಆದರೆ ಈ ಲೇಖನ ಓದಿದ ನನಗೆ ಮೃಗಾಲಯಕ್ಕೆ ಭೇಟಿ ನೀಡಿದ ಅನುಭವವಾಯಿತು. ಇತ್ತೀಚೆಗೆ ಅಲ್ಲಿ ಪ್ರಾರಂಭಿಸಿರುವ ಚಿಟ್ಟೆ ಪಾರ್ಕ್ ಅನ್ನು ನೋಡಲಾದರೂ ಒಂದು ಬಾರಿ ಹೋಗಿ ಬರೋಣ ಎನಿಸಿದೆ.

**ಶಶಿಕುಮಾರ್**, ಮೈಸೂರು

ಈ ಬಾರಿಯ ಜನಪದ ಪತ್ರಿಕೆಯಲ್ಲಿ ಡೆಂಗ್ಯೂ ಜ್ವರದಲ್ಲಿ ಮುಂಜಾಗ್ರತೆ ಮತ್ತು ತಾಯಿ ಹಾಲಿನ ಮಹತ್ವ ಕುರಿತಂತೆ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿರುವುದು ಸರಿಯಷ್ಟೆ. ಜನರು ಆರೋಗ್ಯ ವಿಷಯದ ಕುರಿತ ಲೇಖನಗಳನ್ನು ಹೆಚ್ಚಾಗಿ ಇಷ್ಟಪಡುವುದರಿಂದ ಸಾರ್ವಜನಿಕರಿಗೆ ಆರೋಗ್ಯದ ವಿಚಾರವಾಗಿ ಮುನ್ನೆಚ್ಚರಿಕೆ ನೀಡಬಹುದಾದಂತಹ ಲೇಖನಗಳನ್ನು ಪ್ರಕಟಿಸುವಂತೆ ನನ್ನ ವಿನಂತಿ.

**ಅಕ್ಷತಾ**, ಹುಬ್ಬಳ್ಳಿ

ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.)



"I will bless your Scheme if you are prepared to bury yourself in Kasturba Grama"

- Mahatma Gandhi

"ನೀನು ಕಸ್ತೂರ ಬಾ ಗ್ರಾಮದಲ್ಲಿ ಸಮಾದಿಸ್ಥಳಾಗುವುದಾದರೆ ನಿನ್ನ ಯೋಜನೆಗೆ ನಾನು ಆಶೀರ್ವದಿಸುತ್ತೇನೆ".

– ಮಹಾತ್ಮ ಗಾಂಧಿ

ಫೋ: ಜಿ.ಬಿ ಶಿವರಾಜು

# ಕರ್ನಾಟಕದ ರಾಜ್‌ಘಾಟ್

## ಅರಸೀಕೆರೆಯ ಕಸ್ತೂರಬಾ ಗಾಂಧಿ ಆಶ್ರಮ

**ಈ** ಮಾತನ್ನು 1947ರಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿ ತನ್ನ ಅಪ್ಪಟ ಅನುಯಾಯಿ ಅರಸೀಕೆರೆ ಆಶ್ರಮದ ಸಂಸ್ಥಾಪಕರೂ ಹಾಗೂ ಶ್ರೀ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಸಚಿವೆಯಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಗಾಂಧೀಜಿ ಸೂಚನೆಯಂತೆ ರಚನಾತ್ಮಕ ಕಾರ್ಯಕ್ರಮಗಳ ಅನುಸ್ಥಾನಕ್ಕೆ 86 ಎಕರೆಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡ ಮೇಲೆ ಗಾಂಧೀಜಿ ಅವರ ಆಶೀರ್ವಾದ ಬೇಡಿದಾಗ ಹೇಳಿದ ಮಾತು ಇಲ್ಲಿ ಸ್ಮರಣೀಯ.





ಅರಸೀಕೆರೆಗೆ 3 ಕಿಮೀ ದೂರದಲ್ಲಿ ಮೈಸೂರು ರಸ್ತೆಯಲ್ಲಿ 1947ರಲ್ಲಿ ಸ್ಥಾಪಿತವಾದ ಕಸ್ತೂರಬಾ ಗಾಂಧಿ ಆಶ್ರಮ ಕರ್ನಾಟಕದ ರಾಜ್‌ಘಾಟ್ ಹಾಗೂ ಸಬರಮತಿ ಆಶ್ರಮವೆಂದೇ ಪ್ರಖ್ಯಾತವಾಗಿದೆ. ಆಚಾರ್ಯ ವಿನೋಭಾ ಭಾವೆ ಇಲ್ಲಿ ಹಲವು ದಿವಸಗಳು ಶಿಬಿರಗಳನ್ನು ಮಾಡಿ ವಾಸ್ತವ ಮಾಡಿದ್ದು ಒಂದು ಇತಿಹಾಸ. ಲೋಕನಾಯಕ ಜಯಪ್ರಕಾಶ್ ನಾರಾಯಣ್, ಉತ್ತರ ಪ್ರದೇಶದ ಮೊದಲ ಮಹಿಳಾ ಮುಖ್ಯಮಂತ್ರಿ ಸುಚೇತ ಕೃಪಲಾನಿ, ನೆಹರು ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗಿದ್ದ ಜೆ.ಬಿ. ಕೃಪಾಲಾನಿ, ಕಸ್ತೂರಬಾ ಗಾಂಧಿ ಆಶ್ರಮದ ಸಂಸ್ಥಾಪಕ ಕಾರ್ಯದರ್ಶಿ ಟಕ್ಕರ್‌ಬಾಪ ಮೊದಲಾದ ಗಣ್ಯರು ಇಲ್ಲಿನ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದು ಬಹಳ ಹೆಮ್ಮೆಯ ಸಂಗತಿಯಾಗಿದೆ.

ಯಶೋಧರಮ್ಮ ಮತ್ತು ಅವರ ಪತಿ, ಕೇಂದ್ರದಲ್ಲಿ ರೈಲ್ವೆ ಸಚಿವರಾಗಿದ್ದ ಹೆಚ್.ಸಿ.ದಾಸಪ್ಪ ದಂಪತಿಗಳು ಗಾಂಧೀಜಿ ಚಿತಾಭಸ್ಮವನ್ನು 1948ರಲ್ಲಿ ಅರಸೀಕೆರೆಗೆ ತಂದು ಅದಕ್ಕೆ ಚಿಕ್ಕದೊಂದು ಬೃಂದಾವನ ನಿರ್ಮಿಸಿದ್ದಾರೆ. ಇಂದಿಗೂ ಈ ಚಿತಾಭಸ್ಮ ಆಶ್ರಮದ ಆಕರ್ಷಣೆಗಳಲ್ಲೊಂದು ಎಂಬುದು ಈ ಸ್ಥಳದ ಗೌರವ ಹೆಚ್ಚಿಸಿದೆ. ಈ ಪವಿತ್ರ ಚಿತಾಭಸ್ಮ ಅರಸೀಕೆರೆಯಲ್ಲಿರುವುದರ ಬಗ್ಗೆ ನಡೆದ ಒಂದು ಘಟನೆ ಇಲ್ಲಿ ಉಲ್ಲೇಖಾರ್ಹ. ಗಾಂಧೀಜಿ ದಿನಾಂಕ 30–1–1948 ರಂದು ಹಂತಕರ ಗುಂಡಿಗೆ ಬಲಿಯಾದಾಗ ಅದರ ಶಬ್ದ ಕೇಳಿ ಸಂಜೆ 5–00 ಗಂಟೆಗೆ ಪ್ರಾರ್ಥನೆಯಲ್ಲಿದ್ದ ಹೆಚ್. ಸಿ. ದಾಸಪ್ಪ ಅಲ್ಲಿಗೆ ಧಾವಿಸಿದಾಗ ಕುಸಿದು ಬಿದ್ದಿದ್ದ ಗಾಂಧೀಜಿ ಅವರಿಗೆ ನೀರು ಬೇಕೆಂದು ಯಾರೋ ಕೂಗಿದಾಗ ಅಲ್ಲಿಯೇ ಸಮೀಪದಲ್ಲಿದ್ದ ನೀರಿನ ಬಾಟಲ್ ತಂದು ಅಲ್ಪ ಸ್ವಲ್ಪ ಪ್ರಾಣವಿರಬಹುದೆಂದು ಗಾಂಧೀಜಿಯವರ ಬಾಯಿಗೆ ಎರಡು ತೊಟ್ಟು ನೀರು ಹಾಕಿದರು. ಮಹಾತ್ಮರಿಗೆ ದಾಸಪ್ಪನವರು ಸಲ್ಲಿಸಿದ ಅಂತಿಮ ಸೇವೆ ಅದು. ಶೀಸೆಯ ಮುಚ್ಚಳವನ್ನು ಜೋಪಾನವಾಗಿ ತಂದು ಯಶೋಧರಮ್ಮ ಅವರಿಗೆ ಕೊಟ್ಟರು. ಮುಂದೆ ಅರಸೀಕೆರೆ ಕಸ್ತೂರಬಾ ಆಶ್ರಮಕ್ಕೆ ಗಾಂಧೀಜಿ ಚಿತಾಭಸ್ಮವನ್ನು ದೆಹಲಿಯಿಂದ ತಂದಾಗ ಅದರ ಜೊತೆ ಆ ಮುಚ್ಚಳವನ್ನು ಇಟ್ಟು ಅದಕ್ಕೆ ಒಂದು ಬೃಂದಾವನ ನಿರ್ಮಾಣ ಮಾಡಿ ಪವಿತ್ರ ಸ್ಮಾರಕ ನಿರ್ಮಿಸಲಾಯಿತು . 2016 ರಲ್ಲಿ ಈ ಬೃಂದಾವನವನ್ನು ದೆಹಲಿಯ ರಾಜ್‌ಘಾಟ್ ಮಾದರಿಯ ನಿರ್ಮಾಣವನ್ನು ಕರ್ನಾಟಕದ ಮಾಜಿಮಂತ್ರಿಗಳು, ಗಾಂಧೀಜಿ ಅನುಯಾಯಿಗಳೂ ಆದ ಎಂ.ಚಂದ್ರಶೇಖರ್ ಅವರ ಪತ್ನಿ ಸರೋಜಮ್ಮ ಮತ್ತು ಅವರ ಪುತ್ರ ಎಂ.ಸಿ. ನರೇಂದ್ರ ಹಾಗೂ ಕುಟುಂಬದವರು ನಿರ್ಮಿಸಿ ರಾಷ್ಟ್ರದಲ್ಲಿಯೇ ದೆಹಲಿ ತರದ ಎರಡನೆ ರಾಜ್‌ಘಾಟ್ ಮಾಡಿದ್ದು ಇಂದು ಅರಸೀಕೆರೆ ಆಶ್ರಮವನ್ನು ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಿದ್ದಾರೆ.

ದಿನಾಂಕ 18–2–2017 ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವರಾದ ಎ. ಮಂಜು ಸ್ಥಳೀಯ ಶಾಸಕರಾದ ಶಿವಲಿಂಗೇಗೌಡ ಮೊದಲಾದ ಗಣ್ಯರು ಆಶ್ರಮಕ್ಕೆ ಭೇಟಿ ನೀಡಿದಾಗ ಇಲ್ಲಿನ ರಾಜ್‌ಘಾಟ್ ಮತ್ತೆ ಸಬರಮತಿ ಮಾದರಿ ನೋಡಿ ಎರಡು ಕೋಟಿ ಅನುದಾನವನ್ನು ಅರಸೀಕೆರೆ ಆಶ್ರಮದ ಅಭಿವೃದ್ದಿಗೆ 2017–18ರ ಆಯವ್ಯಯದಲ್ಲಿ ಬಿಡುಗಡೆ ಮಾಡಿರುವುದು ಆಶ್ರಮದ ಇತಿಹಾಸದಲ್ಲೇ ಅವಿಸ್ಮರಣೀಯವಾದ ಕೊಡುಗೆಯಾಗಿದೆ. ಆಶ್ರಮದ ಅಭಿವೃದ್ದಿಗೆ ಎಲ್ಲಾ ರೀತಿಯ ನೆರವನ್ನು ಸರ್ಕಾರ ಮತ್ತು ಸಾರ್ವಜನಿಕರ ವತಿಯಿಂದ ದೊರೆಯುವಂತೆ ಮಾಡಿ



ಕಸ್ತೂರಬಾ ಟ್ರಸ್ಟ್‌ನ ಸೇವಾ ಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ ಸೇವಾ ಕೇಂದ್ರಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂಬುದನ್ನು ಯಶೋಧರಮ್ಮದಾಸಪ್ಪ ಮನಗಂಡರು. ಅಂದರಂತೆ ಒಂದೊಂದು ಸೇವಾ ಕೇಂದ್ರಕ್ಕೂ ಸೇರಿದ ಹಾಗೆ ಹತ್ತಾರು ಎಕರೆ ಜಮೀನನ್ನು ಪಡೆದು ಬೇಸಾಯದಿಂದ ಉತ್ಪತ್ತಿಯಾಗುವ ಹಣದಿಂದ ಸೇವಾ ಕೇಂದ್ರಗಳನ್ನು ಸ್ವಾವಲಂಬಿ ಸೇವಾ ಕೇಂದ್ರಗಳನ್ನಾಗಿ ಮಾಡಬೇಕೆಂದು ಪಣತೊಟ್ಟರು. ಅದರಂತೆ ಸರ್ಕಾರ ಮತ್ತು ಸಾರ್ವಜನಿಕರ ಸಹಕಾರದಿಂದ ಜಮೀನು ಸಂಪಾದಿಸಿ ಬೇಸಾಯಕ್ಕೂ ವ್ಯವಸ್ಥೆ ಮಾಡಿದರು.

ರಾಜ್ಯದಲ್ಲೇ ಇದನ್ನು ಒಂದು ಆಕರ್ಷಣೆಯ ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವಲ್ಲಿ ಶ್ರಮಿಸಿದರು. ಶಾಸಕರಾದ ಶಿವಲಿಂಗೇಗೌಡರು, ಗಾಂಧೀಭವನದ ಹಿಂದಿನ ಅಧ್ಯಕ್ಷರಾದ ಡಾ: ಹೊ.ಶ್ರೀನಿವಾಸಯ್ಯ, ಹಾಲಿ ಅಧ್ಯಕ್ಷರಾದ ಡಾ: ವೂಡೇ.ಪಿ.ಕೃಷ್ಣ, ಆಶ್ರಮದ ಪ್ರತಿನಿಧಿ ಡಾ: ಉಷಾ ಅಬ್ರಾಲ್, ವಾರ್ತಾ ಇಲಾಖೆಯ ಹಿಂದಿನ ನಿರ್ದೇಶಕರಾದ ಎನ್.ಆರ್.ವಿಶುಕುಮಾರ್ ಇಂದಿನ ನಿರ್ದೇಶಕರಾದ ಡಾ: ಹರ್ಷ ಉಪನಿರ್ದೇಶಕರಾದ ಹೆಚ್.ಬಿ ದಿನೇಶ್ ಹಾಗೂ ಅಧಿಕಾರಿ ಗಣ್ಯರ ಕೊಡುಗೆ ಅಪಾರವಾದುದು.

1944 ರಲ್ಲಿ ಫೆಬ್ರವರಿ 22 ರಂದು ಗಾಂಧೀಜಿ ಪತ್ನಿ ಕಸ್ತೂರಬಾ ಗಾಂಧಿ ಪುಣೆಯ ಆಘಾಖಾನ್ ಸೆರೆಮನೆಯಲ್ಲಿದ್ದಾಗಲೇ ನಿಧನರಾದಾಗ ಗಾಂಧೀಜಿ ಅನುಯಾಯಿ ಸರೋಜಿನಿ ನಾಯ್ಡು ಮೊದಲಾದ ಸ್ವಾತಂತ್ರ್ಯ ಹೋರಾಟಗಾರರ ಒತ್ತಾಯಕ್ಕೆ ಗಾಂಧೀಜಿ ಅವರು ಮಣಿದು ಅವರೆಲ್ಲರೂ ಅಂದಿನ ದಿನಗಳಲ್ಲಿ ಸಂಗ್ರಹಿಸಿದ್ದ ಒಂದು ಕೋಟಿ ಹಣದಿಂದ ಗಾಂಧೀಜಿ ಅಧ್ಯಕ್ಷತೆಯಲ್ಲಿ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅನ್ನು ಮಹಿಳೆಯರು ಮತ್ತು ಮಕ್ಕಳ ಏಳಿಗೆಗಾಗಿ ಸ್ಥಾಪಿಸಿದರು. ಟಕ್ಕರ್‌ಬಾಪ ಮತ್ತು ಸುಚೇತ ಕೃಪಾಲಾನಿ ಟ್ರಸ್ಟ್‌ನ ಕಾರ್ಯದರ್ಶಿಗಳಾದರು. ಗಾಂಧೀಜಿ ಅವರ ನಿಕಟ ಸಂಪರ್ಕ ಹೊಂದಿ ಅವರ ವಿಚಾರಗಳಿಂದ ಪ್ರಭಾವಿತರಾದ ಕರ್ನಾಟಕದ ಕೆ.ಹೆಚ್.ರಾಮಯ್ಯನವರ ಮೊದಲ ಪುತ್ರಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಗಾಂಧೀಜಿ ಅವರ ಕರೆಗೆ ಓಗೊಟ್ಟು ಗಾಂಧೀಜಿ ಸ್ಥಾಪಿತ ಮಹಾರಾಷ್ಟ್ರ ರಾಜ್ಯದ ವಾರ್ಧಾದ ಸೇವಾಗ್ರಾಮದ ಆಶ್ರಮಕ್ಕೆ ಹೋಗಿ ತರಬೇತಿ ಪಡೆದು ಕರ್ನಾಟಕದಲ್ಲಿ ಕಸ್ತೂರಬಾ ಗಾಂಧಿ ಆಶ್ರಮ ಸ್ಥಾಪಿಸಿ ಅದರ ಮೊದಲ ಪ್ರತಿನಿಧಿಯಾದರು. ಉತ್ತರಕರ್ನಾಟಕಕ್ಕೆ ಕುಂದಾಪುರದ ಉಮಾಬಾಯಿಯವರನ್ನು ನೇಮಿಸಲಾಯಿತು.

ಕಸ್ತೂರಬಾ ಆಶ್ರಮದ ಜವಾಬ್ದಾರಿಯನ್ನು ಯಶೋಧರಮ್ಮನವರಿಗೆ ಗಾಂಧೀಜಿ ವಹಿಸಿದಾಗ ಸೇವಾಗ್ರಾಮ ಆಶ್ರಮದಲ್ಲಿ ಯಶೋಧರಮ್ಮ ಮತ್ತು ಹೆಚ್.ಸಿ.ದಾಸಪ್ಪ ದಂಪತಿಗಳಿಗೆ ಆಪ್ತರಾಗಿದ್ದ ಚಕ್ರವರ್ತಿ ಸಿ.ರಾಜಗೋಪಾಲಚಾರಿಯವರು "ರಚನಾತ್ಮಕ ಕಾರ್ಯಕ್ಕೆ ದಾಸಪ್ಪನವರ ಮನೋಧರ್ಮ ತಕ್ಕುದಾಗಿದೆ. ಗಾಂಧೀಜಿ ಅವರು







**ಕಸ್ತೂರಬಾ ಆಶ್ರಮದಲ್ಲಿ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಯುವಜನರಿಗಾಗಿ ಕಾರ್ಯಾಗಾರ, ವಿಚಾರಸಂಕಿರಣ, ಹೊಲಿಗೆತರಬೇತಿ,ಯುವಜನ ವ್ಯಕ್ತಿತ್ವವಿಕಸನ ಶಿಬಿರಗಳನ್ನು ನಡೆಸುತ್ತಿದ್ದು, ಸಾರ್ವಜನಿಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಮೆಚ್ಚುವಂತಹ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.**

ದಾಸಪ್ಪನವರಿಗೆ ಈ ರಚನಾತ್ಮಕ ಕಾರ್ಯಗಳನ್ನು ಹಚ್ಚಿ ಯಶೋಧರಾ ಅವರನ್ನು ರಾಜಕಾರಣದಲ್ಲಿ ತೊಡಗಿಸಬೇಕಾಗಿತ್ತು. ಯಶೋಧರ ಅವರಿಗಿರುವ ಚಾಣಾಕ್ಷತನ, ದಿಟ್ಟತನ, ಮತ್ತು ಲೋಕಜ್ಞಾನ ರಾಜಕಾರಣಕ್ಕೆ ಹೇಳಿ ಮಾಡಿಸಿದಂತಿದೆ. ಗಾಂಧೀಜಿ ಏಕೆ ಹೀಗೆ ಮಾಡಿದರೋ ತಿಳಿಯದು." ಎಂದು ಯಶೋಧರಮ್ಮ ಅವರ ಸಾಮರ್ಥ್ಯವನ್ನು ಗುರುತಿಸಿ ಮಾತನಾಡಿದ್ದರು. ಇದಕ್ಕೆ ಬಾಪು "ಯಶೋಧರ ಬಹದ್ದೂರ್ ಹೆಣ್ಣು ಮಗಳು, ಅವರ ಸಾಮರ್ಥ್ಯದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ. ಕಸ್ತೂರಬಾ ಟ್ರಸ್ಟ್ ಕಾರ್ಯಕ್ರಮಗಳನ್ನು ಅವರು ಜೀವಕೊಟ್ಟಾದರೂ ನಿಭಾಯಿಸಬಲ್ಲರು." ಎಂಬ ನಂಬಿಕೆಯ ಮಾತುಗಳನ್ನು ಹೇಳಿರುವುದು ಅವರ ವ್ಯಕ್ತಿತ್ವದ ಸಾಮರ್ಥ್ಯವನ್ನು ಸಾರುತ್ತದೆ. ಹಿರಿಯ ಸಾಹಿತಿ ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಯಶೋಧರಮ್ಮ ದಾಸಪ್ಪನವರನ್ನು "ಧೀನ ದಲಿತರ, ಸ್ತ್ರೀಯರ, ಮಕ್ಕಳ, ನಿರ್ಗತಿಕ ಮಹಿಳೆಯರ ಹಾಗೂ ಸಮಾಜ ಕಡೆಗಣಿಸಿದ ಎಲ್ಲರ ಸೇವೆಯನ್ನು ಮಾಡಿದ್ದಾರೆ. ಈ ದೇಶದಲ್ಲಿ ದೇವರೇ ಹುಟ್ಟಿ ಬಂದರೂ ಇಷ್ಟು ಕೆಲಸ ಮಾಡಲು ಸಾಧ್ಯವಿಲ್ಲ. ಅವರು "ಕರ್ನಾಟಕದ ಕಸ್ತೂರಬಾ" ಎಂದು ನಾಮಾಂಕಿತ ಮಾಡಿ ಅವರ ವ್ಯಕ್ತಿತ್ವದ ಅಗಾಧತೆಯನ್ನು ಬಣ್ಣಿಸಿದ್ದಾರೆ.

ಇದೇ ಸಂದರ್ಭದಲ್ಲಿ, ಯಶೋಧರಮ್ಮ ದಾಸಪ್ಪ ಅವರು ತಾನು ಒಬ್ಬ ಹರಿಜನ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ಸಾಕುತ್ತಿರುವುದಾಗಿ ಹೇಳಿ ಗಾಂಧೀಜಿಯವರ ಆಶೀರ್ವಾದ ಬೇಡಿದರು. ಹಾಗೂ ಮಗುವಿಗೆ ಸೂಕ್ತ ಹೆಸರನ್ನು ಬಾಪೂಜಿಯೇ ಇಟ್ಟು ನಾಮಕರಣ ಮಾಡಬೇಕೆಂದು ಕೋರಿದರು. ಗಾಂಧೀಜಿಯವರು 'ಮಗುವಿಗೆ ಪ್ರಭಾ ಎಂದು ಹೆಸರಿಟ್ಟು "ಪ್ರಭಾ ಬೆಳೆದ ಹಾಗೆಲ್ಲಾ ನಿನ್ನ ಪ್ರಭೆಯೂ ಬೆಳಗುತ್ತದೆ" ಎಂದು ನುಡಿದರು. ಮುಂದೆ ತನ್ನ ದತ್ತು ಪುತ್ರಿ ಪ್ರಭಾ ಅವರನ್ನು ಒಬ್ಬ ವೈದ್ಯರಿಗೆ ಕೊಟ್ಟು ಕಸ್ತೂರಬಾ ಆಶ್ರಮದಲ್ಲಿ ವಿವಾಹ ನೆರವೇರಿಸಿದರು. ಈ ವಿವಾಹಕ್ಕೆ ಸುಚೇತಕೃಪಲಾನಿ ಮತ್ತು ಜೆ.ಬಿ ಕೃಪಲಾನಿ ಮೊದಲಾದ ಗಣ್ಯರನ್ನು ಆಹ್ವಾನಿಸಿದ್ದು ಒಂದು ವಿಶೇಷ. ಮಹಾತ್ಮ ಗಾಂಧೀಜಿಯವರೊಡನೆ ನಡೆಸಿದ ಸಂದರ್ಶನ ಮತ್ತು ಅವರು ಆಡಿದ ಮಾತುಗಳನ್ನು ಯಶೋಧರಮ್ಮ ದಾಸಪ್ಪನವರು ತಮ್ಮ ಜೀವನ ಪರ್ಯಂತ ಮೆಲುಕು ಹಾಕುತ್ತಿದ್ದರು.

ಯಶೋಧರಮ್ಮ ಅವರ ಸರಳ ಹಾಗೂ ಗಾಂಧಿ ಬದುಕಿಗೆ ಮತ್ತೊಂದು ಕನ್ನಡಿ ಎಂದರೆ ತಮ್ಮ ಪುತ್ರ ತುಳಸೀದಾಸಪ್ಪ ಅವರಿಗೆ ಆಶ್ರಮದಲ್ಲೇ ಬೆಳೆದ ಸರೋಜಮ್ಮ ಎಂಬ ಹೆಣ್ಣುಮಗಳೊಡನೆ ಸರಳ ವಿವಾಹವನ್ನು ಆಶ್ರಮದಲ್ಲೇ ನೆರವೇರಿಸಿದ ಅಪರೂಪದ ಘಟನೆ ಇಲ್ಲಿ ಉಲ್ಲೇಖಾರ್ಹ. ತುಳಸೀದಾಸಪ್ಪ ಅವರು ಮೂರು ಬಾರಿ ಲೋಕಸಭೆಯ ಸದಸ್ಯರಾಗಿ ಮೈಸೂರನ್ನು ಪ್ರತಿನಿಧಿಸಿ ತಮ್ಮ ತಾಯಿ ಮತ್ತು ತಂದೆಯ ಆದರ್ಶಗಳನ್ನು ತನ್ನ ಜೀವನದ ಧ್ಯೇಯವಾಗಿ ಇಟ್ಟುಕೊಂಡು ಬದುಕಿದವರು.

ಕಸ್ತೂರಬಾ ಆಶ್ರಮದಲ್ಲಿ ಗ್ರಾಮಾಂತರ ಪ್ರದೇಶದ ಸ್ತ್ರೀಶಕ್ತಿಯ ಸಂವರ್ಧನೆಗೆ ಜಾಗೃತಿ ಮಾಡಿಸುವ ಸಲುವಾಗಿ ಕ್ರಿಯಾ ಯೋಜನೆ ಮಾಡಿಕೊಂಡು ಸಮಗ್ರ ರಚನಾತ್ಮಕ ಕಾರ್ಯಕ್ರಮವನ್ನು ನಿರೂಪಿಸಲಾಯಿತು. ಮಹಿಳಾ ಸಮಾಜಗಳ ಸ್ಥಾಪನೆ, ಕರಕೌಶಲ್ಯಗಳ ವರ್ಧನೆ, ಖಾದಿ ಗ್ರಾಮೋದ್ಯೋಗ, ಹೊಲಿಗೆ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ನೀಡುವುದು, ವೈಜ್ಞಾನಿಕ ಹಾಗೂ ಆರೋಗ್ಯಕರ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸಿ ನುರಿತ ಸೂಲಿಗಿತ್ತಿಯರನ್ನು ನೇಮಿಸುವುದು, ಚಿಕ್ಕಮಕ್ಕಳಿಗೆ ಶಿಶುವಿಹಾರ ಅಥವಾ ಬಾಲವಾಡಿ, ಬಾಲಕಿಯರ ಹಾಗೂ ಪ್ರೌಢ ಮಹಿಳೆಯರ ಶಿಕ್ಷಣ, ಗೋಶಾಲೆ ಮೊದಲಾದ ಚಟುವಟಿಕೆಗಳನ್ನು ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳಿಗಾಗಿ ಯಶಸ್ವಿಯಾಗಿ ನಡೆಸಿದರು. ಕರ್ನಾಟಕದಲ್ಲಿ ಅರಸೀಕೆರೆಯನ್ನು ಕೇಂದ್ರವಾಗಿಟ್ಟು ಕೊಂಡು ಅದರ ಶಾಖೆಗಳನ್ನು ಚಿಕ್ಕಮಗಳೂರು, ಮಂಡ್ಯ, ಬೆಳಗಾವಿ, ಶಿವಮೊಗ್ಗ, ಚಿತ್ರದುರ್ಗ, ರಾಯಚೂರು, ಬೆಂಗಳೂರು ಮೊದಲಾದ ಜಿಲ್ಲೆಗಳ ಗ್ರಾಮದಲ್ಲಿ ತನ್ನ ಚಟುವಟಿಕೆಗಳನ್ನು ನಡೆಸಿದರು. ಇಂದಿಗೂ ಸಹ ಸ್ಥಳೀಯರು ಆಶ್ರಮದ ಈ ಸೇವಾಕರ್ತರನ್ನು ನಿಸ್ವಾರ್ಥ ಸೇವೆಗಾಗಿ ಮನದುಂಬಿ ಸ್ಮರಿಸುತ್ತಾರೆ.

ಕಸ್ತೂರಬಾ ಟ್ರಸ್ಟ್‌ನ ಸೇವಾ ಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ ಸೇವಾ ಕೇಂದ್ರಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂಬುದನ್ನು ಯಶೋಧರಮ್ಮ ದಾಸಪ್ಪ ಮನಗಂಡರು. ಅಂದರಂತೆ ಒಂದೊಂದು ಸೇವಾ ಕೇಂದ್ರಕ್ಕೂ ಸೇರಿದ ಹಾಗೆ ಹತ್ತಾರು ಎಕರೆ ಜಮೀನನ್ನು ಪಡೆದು ಬೇಸಾಯದಿಂದ ಉತ್ಪತ್ತಿಯಾಗುವ ಹಣದಿಂದ ಸೇವಾ ಕೇಂದ್ರಗಳನ್ನು ಸ್ವಾವಲಂಬಿ ಸೇವಾ ಕೇಂದ್ರಗಳನ್ನಾಗಿ ಮಾಡಬೇಕೆಂದು ಪಣತೊಟ್ಟರು. ಅದರಂತೆ ಸರ್ಕಾರ ಮತ್ತು ಸಾರ್ವಜನಿಕರ ಸಹಕಾರದಿಂದ ಜಮೀನು ಸಂಪಾದಿಸಿ ಬೇಸಾಯಕ್ಕೂ ವ್ಯವಸ್ಥೆ ಮಾಡಿದರು.

ಕಳೆದ ಐದಾರು ವರ್ಷಗಳಿಂದ ಕಸ್ತೂರಬಾ ಆಶ್ರಮದಲ್ಲಿ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಯುವಜನರಿಗಾಗಿ ಕಾರ್ಯಾಗಾರ, ವಿಚಾರಸಂಕಿರಣ, ಹೊಲಿಗೆತರಬೇತಿ,ಯುವಜನ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ನಡೆಸುತ್ತಿದ್ದು, ಸಾರ್ವಜನಿಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಮೆಚ್ಚುವಂತಹ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಕಳೆದ ಎರಡು ವರ್ಷಗಳಿಂದ 21 ಜನ ಆರ್ಥಿಕವಾಗಿ ಹಿಂದುಳಿದ ಬಡಮಕ್ಕಳಿಗೆ ವಸತಿ ಸೌಲಭ್ಯ ಒದಗಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಹೆಚ್.ಕೆ ಪಾಟೀಲರ ನೆರವಿನಿಂದ ಸುಮಾರು 1800 ಲೀಟರ್ ಸಂಗ್ರಹದ ಟ್ಯಾಂಕರ್‌ಗಳನ್ನು ನಿರ್ಮಾಣ ಮಾಡಿಸಿ ಆಶ್ರಮದ ನೀರಿನ ಬವಣೆ ನೀಗಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಶಿಬಿರಗಳನ್ನು ನಡೆಸಲು ಅವಶ್ಯಕವಾಗಿ ಬೇಕಾದ 10 ಶೌಚಾಲಯ ಮತ್ತು ಸ್ನಾನದ ಗೃಹಗಳನ್ನು ನಿರ್ಮಾಣ ಮಾಡಿದೆ. ಶಿಲ್ಪಕಲಾ ಅಕಾಡೆಮಿ ವತಿಯಿಂದ ಗಾಂಧಿ ಮತ್ತು ಕಸ್ತೂರಬಾ ಅವರ ಸುಮಾರು 25 ಸೀಮೆಂಟ್ ಕಲಾಕೃತಿಗಳನ್ನು ನಿರ್ಮಾಣ ಮಾಡಿಸಿ ಶಿಬಿರದ ಅಂದವನ್ನು ಹೆಚ್ಚಿಸಲಾಗಿದೆ. ಮದ್ಯಪಾನ ಸಂಯಮ ಮಂಡಳಿಯೂ ಸಹ ಹಲವು ಫಲಕಗಳನ್ನು ಹಾಕಿಸಿ ಸಹಕರಿಸಿದೆ.

ಇತ್ತೀಚಿಗೆ ಹತ್ತಾರು ರಾಷ್ಟ್ರ, ರಾಜ್ಯ, ವಿಶ್ವವಿದ್ಯಾಲಯ ಕಾಲೇಜು ಮಟ್ಟದ ಗಾಂಧಿ ತತ್ವ ಪ್ರಣೀತ ಶಿಬಿರಗಳು ನಡೆದು ರಾಷ್ಟ್ರ ಮಟ್ಟದಲ್ಲಿಯೇ ಅತ್ಯುತ್ತಮ ಶಿಬಿರಗಳೆಂದು ಖ್ಯಾತಿ ಪಡೆದಿವೆ. ಕಳೆದ ಮಾರ್ಚ್‌ನಲ್ಲಿ ನಡೆದ ಶಿಬಿರಕ್ಕೆ ಗಾಂಧೀಜಿ ಮೊಮ್ಮಗಳು ಹಾಗೂ ಕಸ್ತೂರಬಾಗಾಂಧಿ ಆಶ್ರಮದ ಅಧ್ಯಕ್ಷರಾಗಿದ್ದ ತಾರಾ ಗಾಂಧಿ ಭಟ್ಟಾಚಾರ್ಯ ಅವರು ಮೂರು ದಿವಸಗಳು ಇಲ್ಲಿ ತಂಗಿದ್ದು ವಿಶೇಷ. ಇಂದಿನ ಕಸ್ತೂರಬಾ ಆಶ್ರಮದ ಅಧ್ಯಕ್ಷರಾದ ಇಂದೋರ್‌ನ ಡಾ: ಕರುಣಾಕರ ತ್ರಿವೇದಿ, ಪವನಾರ್ ಆಶ್ರಮದ ಗೌತಮ್ ಬಜಾಜ್, ಬ್ರಹ್ಮವಿದ್ಯಾಮಂದಿರದ ಸಂಸ್ಥಾಪಕರಾದ ಸುಶ್ರೀ ಉಷಾ ಬೆಹನ್, ಡಾ: ಎನ್.ಎಸ್. ಸುಬ್ಬರಾವ್, ಸ್ವಾತಂತ್ರ್ಯ ಹೋರಾಟಗಾರರಾದ ಡಾ: ಹೊ. ಶ್ರೀನಿವಾಸಯ್ಯ, ಡಾ: ಹೆಚ್.ಎಸ್. ದೊರೆಸ್ವಾಮಿ, ಜಮನಾಲಾಲ್ ಬಜಾಜ್ ಪ್ರಶಸ್ತಿ ವಿಜೇತರಾದ ಸುರೇಂದ್ರಕೌಲಗಿ, ರಂಗಕರ್ಮಿ ಹಾಗೂ ಸಾಮಾಜಿಕ ಚಳುವಳಿಯ ಪ್ರಸನ್ನ ಹೆಗ್ಗೋಡು, ನಾಡೋಜ ಡಾ: ಪಾಟೀಲ ಪುಟ್ಟಪ್ಪ, ಲಾಲ್‌ಬಹದ್ದೂರ್ ಶಾಸ್ತ್ರಿ ಪುತ್ರ ಅನಿಲ್ ಶಾಸ್ತ್ರಿ ಮೊದಲಾದ ಗಣ್ಯರು ಭೇಟಿ ನೀಡಿ ಶಿಬಿರದಲ್ಲಿ ಯುವಜನರಿಗೆ ಪ್ರೋತ್ಸಾಹ ನೀಡಿದ್ದಾರೆ. ಸುಮಾರು 60–70 ಗೋವುಗಳನ್ನೊಳಗೊಂಡು ಒಂದು ಗೋಶಾಲೆಯೂ ಇಲ್ಲಿರುವುದು ವಿಶೇಷ. ಅರಣ್ಯ ಇಲಾಖೆಯವರ ಸಹಕಾರದಿಂದ ಸಹಸ್ರಾರು ಸಸಿ ನೆಟ್ಟು ಪೋಷಿಸಲಾಗಿದೆ. ಸರ್ಕಾರ ನೀಡಿರುವ 2 ಕೋಟಿ ಅನುದಾನದ ಜೊತೆಗೆ ಶಿವಲಿಂಗೇಗೌಡ ಸಮುದಾಯ ಭವನ, ರಸ್ತೆ ನಿರ್ಮಾಣ ಮೊದಲಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ರಾಜ್ಯದಲ್ಲಿಯೇ ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವುದರ ಜೊತೆಗೆ ಯುವಜನತೆಯ ಬದುಕು ಕಟ್ಟುವ ಸಂಸ್ಥೆಯಾಗಬೇಕೆಂಬುದು ಇಲ್ಲಿನ ಕಾರ್ಯಕರ್ತರ ಹಂಬಲವಾಗಿದೆ.



# ಗಾಂಧೀಜಿ

## ಶಿಸ್ತು ಮತ್ತು ಮಾನವೀಯ ಔದಾರ್ಯ

ಖಾದ್ರಿ. ಎಸ್. ಅಚ್ಯುತನ್.

ಪ್ರೌಢಶಾಲೆಯ ವಿದ್ಯಾರ್ಥಿಗಳಾಗಿದ್ದಾಗ ನಮ್ಮ ಪೌರನೀತಿ, ಇತಿಹಾಸದ ಮೇಷ್ಟು ಗಾಂಧಿ ಜಯಂತಿ ಬಂದಾಗ ನಮಗೆ ತರಗತಿಯಲ್ಲಿ 'ನೀವೆಲ್ಲಾ ಗಾಂಧಿಯಾಗಬಹುದು' ಎಂದು ಗಾಂದೀಜೀಯವರ ಜೀವನ– ಸಾಧನೆಯನ್ನು ಎಳೆಯರಿಗೆ ಮನಮುಟ್ಟುವಂತೆ ತಿಳಿಸಿಕೊಡುತ್ತಿದ್ದರು. ಆದರೆ ನಾವು ಹೇಗೆ ಗಾಂಧಿ ತರಹ ಆಗಲು ಸಾಧ್ಯ? ಎಂಬ ಸಂದೇಹ ಆಗಾಗ ಕಾಡುತ್ತಲೇ ಇತ್ತು. ವಿದ್ಯಾರ್ಥಿ ಜೀವನ ಸಾಗಿದಂತೆಲ್ಲಾ ಸಂದೇಹ ಬಗೆಹರಿಯುವುದಕ್ಕಿಂತ ಬಲಿಯುತ್ತಲೇ ಹೋಯಿತು. ಬಹುಶ: ಗಾಂದೀಜಿಯವರನ್ನು ಅರ್ಥ ಮಾಡಿಕೊಳ್ಳಲು ಮುಂದಾಗುವ ಮನಸ್ಸುಗಳಿಗೆಲ್ಲಾ ಇಂತಹುದೇ ತಾಕಲಾಟ ಬಲು ಸಹಜ. ಏಕೆಂದರೆ, ಅವರು ' ಬಹುರೂಪಿ ಬಾಪೂ' ಕಾಲ್ವಿನ್ ಕೈಟಲ್ ಎಂಬ ಇಂಗ್ಲೀಷ್ ಲೇಖಕರು ತಾವು ಬರೆದಿರುವ, ' ಗಾಂಧಿ, ಅಹಿಂಸೆಯ ಸೈನಿಕ' ಎಂಬ ಪುಸ್ತಕದಲ್ಲಿ ನಮ್ಮ– ನಿಮ್ಮೆಲ್ಲರ ಸಂದೇಹಕ್ಕೆ ದನಿಗೂಡಿಸಿ, 'ಗಾಂಧಿಯವರ ಜೀವನ ಅದೆಷ್ಟು ಸಂಕೀರ್ಣ, ಸಂಪೂರ್ಣ ಹಾಗೂ ಅರ್ಥ ಶ್ರೀಮಂತವಾಗಿತ್ತೆಂದರೆ ಅಪ್ರತಿಮ ಪ್ರತಿಭೆ ಹಾಗೂ ಅಮಿತ ತಾಳ್ಮೆಯವರಿಗೆ ಮಾತ್ರ ಗಾಂಧೀಜಿಯವರ ಇಡೀ ವ್ಯಕ್ತಿತ್ವವನ್ನು ಗ್ರಹಿಸಲು ಸಾಧ್ಯ' ಎಂದು ಉದ್ಗರಿಸಿದ್ದಾರೆ. ಅವರು ಮುಂದುವರೆದು, ' ಗಾಂಧಿ ಅನಂತ ಆಕರ್ಷಣೆ ಹಾಗೂ ಸಮಯ ಕಳೆದಂತೆ ಅವರ ಜೀವನದ ವಾಸ್ತವಗಳು ಅವರ ಸುತ್ತಲಿನ ಮಿಥ್ಯೆಗಳಿಗಿಂತ ದೂರಗೊಳಿಸಿಕೊಳ್ಳುವುದು ಅಗತ್ಯ' ಎಂದಿದ್ದಾರೆ. ಅಂತೂ ಗಾಂಧಿ ಅವರ ಜೀವಿತಾವಧಿಯಲ್ಲಿ ಹಾಗೂ ಈಗಲೂ ಕೂಡ ಇಡೀ ವಿಶ್ವಕ್ಕೆ ವಿಸ್ಮಯವಾಗಿಯೇ ಉಳಿದಿದ್ದಾರೆ. ಅಷ್ಟೇ ಅಲ್ಲ ಇಂದಿನ ಮನುಷ್ಯರ ನಡುವಿನ ಮಾನವೀಯ ನಂಟಿಗೇ ಸಂಚಕಾರ ಒದಗಿರುವಾಗ ವಿಶ್ವದ ನಾನಾ ಭಾಗಗಳಲ್ಲಿ ಮನುಷ್ಯ ಘನತೆ, ಸ್ವಾತಂತ್ರ್ಯ, ಸಮಾನತೆಗಳಿಗಾಗಿ ನಡೆದಿರುವ ಶಾಂತಿಯುತ ಜನಾಂದೋಲನಗಳಿಗೆಲ್ಲಾ ಗಾಂಧಿಯೇ ಮೂಲಮಂತ್ರವಾಗಿ ಬಿಟ್ಟಿದ್ದಾರೆ. ಗಾಂಧಿಯವರ ಅಹಿಂಸಾತ್ಮಕ ಸತ್ಯಾಗ್ರಹದ ಅಸ್ತ್ರವನ್ನು ಜನರ ದನಿ ಮೊಳಗಿಸಲು ದಣಿವರಿಯದೆ ಹರಿತವಾಗಿಯೇ ಇಟ್ಟಿರುವ ವಿಧಾಯಕ ಕಾರ್ಯಕರ್ತೆ ಮೇಧಾಪಾಟ್ಕರ್, 'ಗಾಂಧೀಜಿ ಇಂದು ಹೆಚ್ಚು ಪ್ರಸ್ತುತರಾಗಿದ್ದಾರೆ, ರಾಜ್ಯವ್ಯವಸ್ಥೆಯೇ ಹಿಂಸಾತ್ಮಕವಾಗಿಬಿಟ್ಟಿದೆ, ಸಮಾಜ ಹಿಂಸಾಮಯವಾಗಿದೆ, ಕಾರ್ಪೋರೇಟೀಕರಣ ಹೆಚ್ಚುತ್ತಿದೆ, ಜನಶಕ್ತಿ ಪುಟಿದೇಳುವ ಅವಶ್ಯಕತೆ ಇದೆ' ಎನ್ನುತ್ತಾರೆ.

> ಗಾಂಧಿಯವರ ಜೀವನ ಅದೆಷ್ಟು ಸಂಕೀರ್ಣ, ಸಂಪೂರ್ಣ ಹಾಗೂ ಅರ್ಥ ಶ್ರೀಮಂತವಾಗಿತ್ತೆಂದರೆ ಅಪ್ರತಿಮ ಪ್ರತಿಭೆ ಹಾಗೂ ಅಮಿತ ತಾಳ್ಮೆಯವರಿಗೆ ಮಾತ್ರ ಗಾಂಧೀಜಿಯವರ ಇಡೀ ವ್ಯಕ್ತಿತ್ವವನ್ನು ಗ್ರಹಿಸಲು ಸಾಧ್ಯ

ಇಂತಹ ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವ ಸರಳ. ಆದರೆ ಸತ್ವಯುತ ಆಯಾಮಗಳನ್ನು ಎಲ್ಲ ಜನರೂ ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗೆ, 'ಆಗುತ್ತದೆ' ಎಂಬುದೇ ಸ್ಪಷ್ಟ, ನೇರ ಉತ್ತರ. ಏಕೆಂದರೆ, ಅವರ ವ್ಯಕ್ತಿತ್ವದ ಕೆಲವು ಕುತೂಹಲಕರ ಸಂಗತಿಗಳನ್ನು ಗಮನಿಸಿದಾಗ, ನಾವೂ ಅವರ ಸಮೀಪದ ನೆಂಟರೆಂಬ ಭಾವನೆ ಬಂದು ಬಿಡುತ್ತದೆ. ಗಾಂಧಿ ಸುಂದರಾಂಗರೇನಲ್ಲ. ತೆಳ್ಳಗಿನ ಹಗುರದ ದೇಹ; ಇನ್ನು ಅಸಾಧಾರಣ ಪ್ರತಿಭಾವಂತರೂ ಎಂದು ಹೇಳಲು ಬರುವುದಿಲ್ಲ. ಪ್ರಾಯಶ: ಇವೆರಡೂ ಸೌಭಾಗ್ಯಗಳನ್ನು ಪಡೆದುಕೊಂಡು ಬಂದಿರಬೇಕೇ ವಿನಾ ಗಳಿಸಿಕೊಳ್ಳಲು ಬರುವುದಿಲ್ಲ. ಒಂದು ರೀತಿಯಲ್ಲಿ ಪ್ರಕೃತಿದತ್ತವಾದವು. ಆದರೆ ಗಾಂಧಿ ವಿಶೇಷ ಮತ್ತಿನ್ನೇನು? ಎಂದರೆ. ಅದೇ ಸತ್ಯ ಮತ್ತು ಪ್ರಾಮಾಣಿಕತೆ ಎಂಬ ನಾವು ನೀವು ಮೈಗೂಡಿಸಿಕೊಳ್ಳಲು ಸಾಧ್ಯವೇ ಇರುವ ಗುಣ ಇದು. ಸುಳ್ಳು ಹೇಳಬಾರದು, ಸತ್ಯಕ್ಕೇ ಅಂಟಿಕೊಂಡಿರಬೇಕು, ಏನೇ ಬರಲಿ, ಇದು ಗಾಂಧಿ ನಮಗೆ ಸ್ವತ: ಅವರು ಆಚರಣೆಯಲ್ಲಿ ತಂದು ನೀಡಿದ ಆದರ್ಶ.

ಇನ್ನು ಶಿಸ್ತು, ಚೊಕ್ಕಟತನ ಗಾಂಧಿಯವರ ಅತ್ಯಮೂಲ್ಯ ಕೊಡುಗೆ. ಇವೆರಡೇ ಈಗ ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಮಾಯವಾಗಿರುವುದು. ಬದುಕಿಗೆ ಚೌಕಟ್ಟಾಗಿ ಇವೆರಡನ್ನೂ ಅವರು ಪಾಲಿಸಿದ್ದು ಮಾತ್ರವಲ್ಲ, ಅವರ ಹತ್ತಿರ ಹೋದವರಿಗೆಲ್ಲಾ ಕಲಿಸಿಕೊಟ್ಟರು. ಒಮ್ಮೆ ಅವರ ಪೆನ್ಸಿಲ್ ಕೊನೆಯ ತುದಿಗೆ ಬಂದಿತ್ತು. ಯಾರೋ ಹಾಳುಮಾಡಿದ್ದರು. ಅದನ್ನು ನೋಡಿದ ಬಾಪೂ ವಿಚಲಿತರಾಗಿ, ಮಾಡಿದವರಾರೆಂದು ವಿಚಾರಿಸಿ, ಪೆನ್ಸಲ್ ಪೂರ್ತಿ ಮುಗಿಯುವವರೆಗೆ ಬಳಸುವುದರ ಅಗತ್ಯ ಮನದಟ್ಟು ಮಾಡಿಕೊಟ್ಟರು. ಅವರ ಕಾರ್ಯದರ್ಶಿ ಮಹಾದೇವ ದೇಸಾಯಿ ' ಸೆವಾಗ್ರಾಮ ' ಕಿರುಪುಸ್ತಕದಲ್ಲಿ ಬರೆದಿರುವಂತೆ, ಅವರ ಜ್ಞಾಪಕ ಶಕ್ತಿ ವಿಚಿತ್ರವಾದದು; ಅಗತ್ಯವಾದುದನ್ನು ಮಾತ್ರ ನೆನಪಿಟ್ಟು ಅಗತ್ಯವಿಲ್ಲದ್ದನ್ನು ಬಿಟ್ಟುಬಿಡುತ್ತಾರೆ. ಅದರ ಹಾಗೆಯೇ ವಿಚಿತ್ರ ವಸ್ತುಗಳನ್ನು ಕಲೆ ಹಾಕುವ ಅವರ ಜಾಣತನ. ಒಂದು ಮೊಳೆಯೋ, ಗುಂಡುಸೂಜಿಯೋ, ರಟ್ಟು ಕಾಗದವೋ, ಕೆಲಸಕ್ಕೆ ಬಾರದ ಕಾಗದದಿಂದ ಮಾಡಿದ ಲಕೋಟೆಯೋ ಅವರಿಗೆ ಬೇಕೆನಿಸಿದರೆ, ಕೂಡಲೇ ಅವರ ಕೈ ಸರಿಯಾಗಿ ಕೊಂಚವೂ ತೊಡರಿಲ್ಲದೆ, ಆ ಪದಾರ್ಥದ ಕಡೆಗೇ ಹೋಗುತ್ತದೆ.' ಸಿದ್ದವನಹಳ್ಳಿ ಕೃಷ್ಣಶರ್ಮರು ತಮ್ಮ 'ಪರ್ಣಕುಟಿ' ಮತ್ತು 'ವರ್ಧಾಯಾತ್ರೆ' ಪುಸ್ತಕಗಳಲ್ಲಿ ಗಾಂಧೀಜಿ ಅವರ ಆಶ್ರಮ ಬದುಕಿನ ಚಿತ್ರಗಳನ್ನು ಮನೋಜ್ಞವಾಗಿ ಬಿಡಿಸಿದ್ದಾರೆ. ಎರಡೂ ಪುಸ್ತಕಗಳನ್ನು ಎಷ್ಟು ಸಲ ಓದಿದರೂ ಬೇಸರ ಬರುವುದಿಲ್ಲ. ಬದಲಿಗೆ ಗಾಂಧೀಜಿ ನವನವೀನವಾಗಿ ಪ್ರತಿ ಓದಿನಲ್ಲೂ ನಮ್ಮ ಕಣ್ಮುಂದೆ ಸುಳಿದಾಡುತ್ತಾರೆ. ಶರ್ಮರು ಪರ್ಣಕುಟಿಯಲ್ಲಿ, " ಯಾವ ಕೆಲಸವನ್ನು ಮಾಡಿದರೂ ಅದನ್ನು ಸರ್ವಾಂಗ ಪರಿಪೂರ್ಣತೆಯ ದೃಷ್ಟಿಯಿಂದ ಮಾಡುತ್ತಾರೆ. ಪರ್ಣಕುಟಿಯಲ್ಲಿ ಒಂದು ಕಣವಾದರೂ ಧೂಳು ಇದ್ದೀತೇ? ಯಾರೂ ಎದುರಿಗಿಲ್ಲದಿದ್ದರೆ ತಾವೇ ಗುಡಿಸುತ್ತಾರೆ. ಅವರು ಕಾಗದಗಳನ್ನು ಮಡಿಸುವುದೂ, ಹರಿಯುವುದೂ ಒಂದು ಸೊಗಸು. ಪತ್ರ ಬಂದರೆ ಅದರಲ್ಲಿ ಬರೆಯದೆ ಉಳಿದ ಬಿಳಿಯ ಕಾಗದ ಹರಿದು ಉಪಯೋಗಿಸುತ್ತಾರೆ. ಒಂದೇ ಮಗ್ಗಲು ಬರೆದ ಕಾಗದದ ಹಿಮ್ಮಗ್ಗಲಿಗೆ ಬರೆಯುತ್ತಾರೆ. ಗುಂಡು ಸೂಜಿಗಳನ್ನು ಜೋಪಾನ ಮಾಡುತ್ತಾರೆ. ಅವರು ಬರೆದ ಕೆಲವು ಮುಖ್ಯವಾದ ಬರಹಗಳು ಹಾಗೇ ಹಿಮ್ಮಗ್ಗಲಿಗೆ ಬರೆಯಲ್ಪಟ್ಟಿವೆ. ತಮಗೆ ಬಂದ ಲಕೋಟೆಗಳನ್ನು ಕತ್ತರಿಸಿ ತಿರುವಿ ಹಾಕಿ ಅವನ್ನೇ ಮತ್ತೆ ಲಕೋಟೆಗಳಾಗಿ ಮಾಡುತ್ತಾರೆ." ಎಂದು ವರ್ಣಿಸಿದ್ದಾರೆ.

ಹಾಗೆಯೇ ಗಾಂಧೀಜಿಯವರಿಗೆ ಬರುತ್ತಿದ್ದ ಕಾಗದ ಪತ್ರಗಳು ಒಂದು ಹೊರೆಯಾಗಿದ್ದು, ಸಾವಿರ ಕಡೆಯಿಂದ ಬರುತ್ತಿದ್ದವು. ಗಾಂಧೀಜಿಗಾಗಿಯೇ ಸೇವಾಗ್ರಾಮದಲ್ಲಿ ಒಂದು ಅಂಚೆಮನೆ ತೆರೆಯಲಾಯಿತು. ಅವರಿಗೆ ಬರುತ್ತಿದ್ದ ಕಾಗದಗಳೋ ನಾನಾ ಬಗೆಯದು. ಸಾವಿರ ತರದ ಕಾಗದಗಳು ಬರುತ್ತವೆ. ಒಬ್ಬರು ಹರಿಜನ ಸೇವೆಯಲ್ಲಿ ಸಲಹೆ ಕೇಳುತ್ತಾರೆ. ಒಬ್ಬರು ಬ್ರಹ್ಮಚರ್ಯ ಪಾಲನೆಯಲ್ಲಿ ತಮ್ಮ ಕಷ್ಟ ತಿಳಿಸುತ್ತಾರೆ. ತಮ್ಮ ಆಧ್ಯಾತ್ಮ ಜೀವನದ ಅಂತರಂಗವನ್ನು ಬಿಚ್ಚಿಟ್ಟು ಬೆಳಕು ಕೋರುವವರು ಕೆಲವರು. ರಾಜಕಾರಣದಲ್ಲಿ, ವ್ಯವಹಾರದಲ್ಲಿ ಅವರ ಹಿತವಚನ ಬೇಡಿದವರು ಕೆಲವರು. ಯಾರ ಮೇಲೋ ದೂರು ಹೇಳುವವರು ಕೆಲವರಾದರೆ ಗಾಂಧಿಯವರನ್ನೇ ನಿಂದಿಸುವವರು ಕೆಲವರು.
ಇವರಿಗೆಲ್ಲರಿಗೂ ಸರಿಯಾಗಿ ಹದವಾದ, ಸಂದರ್ಭಕ್ಕೆ ತಕ್ಕಂತೆ ಹಿತವಚನ, ಮೆಚ್ಚುಗೆ ಮಾತೋ, ಬುದ್ಧಿವಾದ, ವ್ಯವಹಾರ ಉತ್ತರ ಬರೆಯುವರು, ಅದರಲ್ಲೂ ಒಂದು ಬಗೆಯ ಸಲಿಗೆ,

ಆತ್ಮೀಯತೆ ಇರುತ್ತದೆ. ಎಲ್ಲದರಲ್ಲೂ ಅವರ ಉದಾರಚರಿತೆಯ, ವಿಶ್ವ ಕುಟುಂಬ ಭಾವನೆಯ ಫಲವಾಗಿ ಮೂಡಿರುತ್ತದೆ. ಗಂಭೀರ ವಿಚಾರಗಳ ಪ್ರತಿಪಾದನೆಯೊಡನೆ, ಬಲು ವಿನೋದ ಪ್ರಿಯರೂ ಆಗಿದ್ದರು. ಮಕ್ಕಳೊಡನೆ ಆಟ ಅವರ ದಿನಚರಿಯ ಅಭಿನ್ನಭಾಗ. ಬಾಲರೊಡನಿದ್ದಾಗ ಇವರೂ ಅವರಂತೆಯೇ ಆಗಿ ಬಿಡುತ್ತಿದ್ದರು. ದಿನದ ಆಯಾಸ ಪರಿಹಾರ ಮಾಡಿಕೊಳ್ಳುತ್ತಿದ್ದರು. ಮೊಮ್ಮಕ್ಕಳ ದೆಸೆಯಿಂದ ದಿನಕ್ಕೆ ಎಷ್ಟೋ ಸಲ ಗಾಂಧೀಜಿ ನಗೆಯಲ್ಲಿ ತೇಲುತ್ತಾರೆ ಎಂದು ಮಹಾದೇವದೇಸಾಯಿ ಬರೆದಿದ್ದಾರೆ. ಗಾಂಧೀಜಿಗೆ ವೈಯಕ್ತಿಕ ಜೀವನವೇ ಹೆಚ್ಚಿನದು. ಜನರ ಬಾಳ ಬದುಕಿನಲ್ಲಿ ಅವರಿಗಿರುವ ಶ್ರದ್ಧೆ ಎಲ್ಲಕ್ಕೂ ಮೀರಿದುದು. ಜನರೇ ಅವರ ಬಯಲಿನ ಚಿಕ್ಕೆ. ಅವರ ಚಳವಳಿಯ ಮೂಲಧಾರ ಆತ್ಮಶಕ್ತಿ. ಅವರ ಚಳವಳಿಗೆ ದೇಶವೆಲ್ಲ ಕೇಂದ್ರ, ಮಾನವ ಜೀವನ ಎಂದು ವರ್ಧಾಯಾತ್ರೆಯಲ್ಲಿ ಶರ್ಮರು ಬಣ್ಣಿಸಿದ್ದಾರೆ. ಒಮ್ಮೆ ಸರದಾರ್ ಪಟೇಲರು ಗಾಂಧೀಜಿ ಜತೆ ಮಾತನಾಡುತ್ತಾ, "ನಿಮಗೆ ಎಲ್ಲಾ ದೇವರನ್ನೂ ತೃಪ್ತಿಪಡಿಸುವ ಜಾಣತನ ಇದೆ. ಎಲ್ಲಪ್ಪ ಎಲ್ಲರಿಗೂ ಒಳ್ಳೆಯವನು ಎಂಬ ಹಾಗೆ. ಒಂದೇ ಬರಹದಲ್ಲಿ ವೈಸ್ರಾಯ್ ಭಾಷಣಕ್ಕೂ ಒಂದು ಒಳ್ಳೆ ಮಾತು ಹೇಳಿದೀರಿ ಜಯಪ್ರಕಾಶ್ ನಾರಾಯಣ್ ಉಳಿದ ಸಮತಾವಾದಿಗಳಿಗೂ ಒಂದು ಒಳ್ಳೆ ಮಾತು ಹೇಳಿದ್ದೀರಿ!' ಎಂದು ಛೇಡಿಸಿದರು. ಗಾಂಧೀಜಿ ಪಟೇಲರ ಜತೆ ತಾವೂ ನಗುತ್ತಾ ಹೇಳಿದರು " ಹೌದು ಅದನ್ನು ನಮ್ಮ ತಾಯಿ ನನಗೆ ಕಲಿಸಿದರು.



ಹವೇಲಿಗೂ ಹೋಗೆನ್ನುತ್ತಿದ್ದರು; ಶಿವಾಲಯಕ್ಕೂ ಕಳುಹಿಸುತ್ತಿದ್ದರು. ನನಗೆ ಮದುವೆಯಾದಾಗ ಅವರು ನಮ್ಮನ್ನು ಎಲ್ಲಾ ಹಿಂದು ದೇವಾಲಯಗಳಿಗೂ ಜತೆಗೆ ಒಂದು ದರ್ಗಾಕ್ಕೂ ಆರತಿ ಮಾಡಿಸಲಿಕ್ಕೆ ಕರೆದುಕೊಂಡು ಹೋಗಿದ್ದರು." ಇದು ಗಾಂಧೀ ಸಮಗ್ರ ಸಂಪೂರ್ಣ ವ್ಯಕ್ತಿತ್ವ ಅರಳಿದ ಬಗೆ. ರಾಜಮೋಹನಗಾಂಧಿ ಅವರು, ' ಮೋಹನದಾಸ್– ಒಂದು ಸತ್ಯಕಥೆ' ' ಬೃಹತ್ ಗ್ರಂಥ'ದಲ್ಲಿ , ಹನ್ನೆರಡು ವರ್ಷ ತುಂಬುವುದಕ್ಕೆ ಮೊದಲೇ ಬಾಲಕ ಮೋಹನ ಜಾಡಮಾಲಿ ಉಕಾನನ್ನು ಏಕೆ ಮುಟ್ಟಿಸಿಕೊಳ್ಳಬಾರದು ಎಂದು ತಾಯಿಯ ಜತೆ ವಾದ ಮಾಡಿದ್ದ. ಮುಸ್ಲಿಮರನ್ನು ಮುಟ್ಟಿಸಿಕೊಳ್ಳುವುದರಿಂದ ಮಲಿನರಾಗುತ್ತೇವೆ ಎನ್ನುವ ಭಾವನೆ ವಿರುದ್ಧ ಬಂಡಾಯ ಸಾರಿದ್ದ. ಹಿಂದುಗಳು, ಮುಸ್ಲಿಮರು ಮತ್ತು ಪಾರ್ಸಿಗಳಲ್ಲಿ ಸಂಪೂರ್ಣ ಭ್ರಾತೃತ್ವ ಇರಬೇಕೆಂಬ ದೃಢ ನಂಬಿಕೆ 1885ಕ್ಕೂ ಮುಂಚೆ, ' ಕಾಂಗ್ರೆಸ್ ಹುಟ್ಟುವುದಕ್ಕೂ ಮೊದಲೇ ತಮ್ಮಲ್ಲಿ ಮೂಡಿತ್ತೆಂದು 1947ರಲ್ಲಿ ಅವರು ಸಮರ್ಥಿಸಿಕೊಂಡಿದ್ದಾರೆ. ಕೋಮು ಏಕತೆ, ಕೋಮು ಐಕಮತ್ಯಗಳು ನನ್ನನ್ನು ವಶೀಕರಿಸಿಕೊಂಡಾಗ ನಾನು 12ವರ್ಷದ ಅಣುಗ ಎನ್ನುವ ಒಕ್ಕಣೆಯನ್ನೂ ಅವರು ತಮ್ಮ ಈ ಸಮರ್ಥನೆಯಲ್ಲಿ ಸೇರಿಸಿದ್ದಾರೆ." ಎಂದು ವಿವರಿಸಿದ್ದಾರೆ. ಬಾಲಕ ಬಂಡಾಯ ಮನೋವೃತ್ತಿಯವನೂ ಆಗಿದ್ದ. ಮಾಸ್ತರರು ಪಕ್ಕದ ಹುಡುಗನ ಸ್ಲೇಟಿನಲ್ಲಿರುವುದನ್ನು ನಕಲು ಮಾಡಲು ಬೂಟುಗಾಲಿನಿಂದ ಮೀಟಿದರೂ ಬಾಲಕ ಮೋಹನ ಈ ಸೂಚನೆ ಪಾಲಿಸಲಿಲ್ಲ ಎಂದೂ ರಾಜ್‌ಮೋಹನ್‌ಗಾಂಧಿ ಬರೆದಿದ್ದಾರೆ.

ಮುಂಬೈನ ಜುಹೂವಿನಲ್ಲಿ ವಿಶ್ರಾಂತಿಗೆಂದು ಜೆಹಂಗೀರ್‌ಪಟೇಲ್ ಅವರ ಸಮುದ್ರ ತೀರದ ಕುಟೀರದಲ್ಲಿ ಕೆಲವು ದಿನ ತಂಗಿದ್ದಾಗ, ಆಮೇಲೆ ಪಂಚಗನಿಗೆ ಹೋಗಿದ್ದಾಗ ನಡೆದ ಮನೋಜ್ಞ ಘಟನೆಗಳು ಸೇವಾಗ್ರಾಮದಲ್ಲಿ ರೋಗಿಗಳ ಉಪಚಾರ, ಪ್ರಕೃತಿಚಿಕಿತ್ಸೆ ಪ್ರಯೋಗಗಳು ಗಾಂಧೀಜಿಯವರ ಮಾನವೀಯ ಔದಾರ್ಯವನ್ನು ಎತ್ತಿ ತೋರಿಸಿತ್ತವೆ. ಅವರು ಜುಹುವಿನಲ್ಲಿ ತಂಗಿದ್ದಾಗ, ಜೆಹಂಗೀರ್ ಅವರ ಅಡಿಗೆಯವನು ಫ್ರಿಡ್ಜ್‌ನಲ್ಲಿ ಮನೆಯ ನಾಯಿಯ ಆಹಾರವಾದ ಮಾಂಸ ಇಟ್ಟಿದ್ದ. ಅದರಲ್ಲೇ ಗಾಂಧಿಯವರು ತಿನ್ನುವ ಹಣ್ಣು ಹಂಪಲನ್ನೂ ಇಡಲಾಗಿತ್ತು. ಇದನ್ನು ನೋಡಿದ ಗಾಂಧಿ ಅನುಯಾಯಿ ಮೀರಾಬೆನ್ ಒಂದು ರಂಪವನ್ನೇ ಮಾಡಿಬಿಟ್ಟು ಜೆಹಂಗೀರ್ ಅವರನ್ನು ಪೇಚಿಗೆ ಸಿಲುಕಿಸಿ ಬಿಟ್ಟರು. ಬಾಪೂ ತೆಗೆದುಕೊಳ್ಳುವ ಹಣ್ಣಿನೊಂದಿಗೆ ಮಾಂಸ ಇಡಲಾಗಿದೆ ಎಂದು ರೇಗಾಡಿದರು. ಗದ್ದಲ ಕೇಳಿಸಿಕೊಂಡ ಗಾಂಧೀಜಿ ಅಲ್ಲಿಗೆ ಬಂದು ಸಮಸ್ಯೆ ತಿಳಿದುಕೊಂಡು, ಫ್ರಿಡ್ಜ್ ಬಾಗಿಲನ್ನು ಅಗಲಮಾಡಿ, ಅದರೊಳಗಿದ್ದ ದ್ರಾಕ್ಷಿಯನ್ನು ಬಾಯಿಗೆ ಹಾಕಿಕೊಂಡು ಬಿಟ್ಟರು ! ಮೀರಾಬೆನ್ ಅವಕ್ಕಾದರೆ, ಜೆಹಂಗೀರ್ ಗಲಿಬಿಡಿಗೊಂಡರು. ಮೀರಾಬೆನ್ ಅವರನ್ನು ಉದ್ದೇಶಿಸಿ, ಗಾಂಧೀಜಿ, " ನೋಡು, ನಾವು ಈ ಮನೆಯಲ್ಲಿ ಅವರ ಅತಿಥಿಗಳು. ಆತಿಥೇಯರ ಪದ್ಧತಿ, ವಿಧಾನಗಳಿಗೆ ನಾವು ಹೊಂದಿಕೊಳ್ಳಬೇಕೇ ವಿನಾ, ನಮ್ಮ ಸೌಖ್ಯ, ಅಗತ್ಯಗಳನ್ನು ಅವರ ಮೇಲೆ ಹೇರುವುದಲ್ಲ" ಎಂದು ಬಿಟ್ಟರು. ಜೆಹಂಗೀರ್ ಅವರಿಗೆ ಇನ್ನೊಂದು ವಿಷಯದ ಬಗೆಗೂ ಬಾಪೂ ಅಭಿಪ್ರಾಯ ತಿಳಿದುಕೋಳ್ಳುವ ಬಯಕೆ ಇತ್ತು. ಆಗ ಬಾಪೂ ಅವರಿಗೆ ಫ್ರಿಡ್ಜ್‌ನ ಒಳಗೆ ಹಿಂಬದಿಯಲ್ಲಿದ್ದ ವೈನ್ ಬಾಟಲಿನ ಕಡೆ ಕೈ ತೋರಿಸಿ, ಇದೂ ದ್ರಾಕ್ಷಾ ರಸವೇ ಬಾಪೂ ಎಂದರು. ತಾವು ಮನೆಗೆ ಬರುವ ಅತಿಥಿಗಳಿಗಾಗಿ




ಇಟ್ಟಿರುವುದಾಗಿ ತಿಳಿಸಿ, ತಾವು ಮದ್ಯಪಾನ ಬಿಟ್ಟಿರುವ ಸಂಗತಿ ಹೇಳಿದಾಗ, "ನನಗೆ ನಿಮ್ಮಗಳದ್ದಲ್ಲ ಚಿಂತೆ. ಬಡವರ ಪಾಡಿನ ಬಗ್ಗೆ ನಾನು ಬಹಳವೇ ಕಳವಳ ಪಡುವೆ. ನಿಮಗೆ ಸ್ವನಿಯಂತ್ರಣ ಇರುತ್ತದೆ. ನನ್ನ ಸ್ನೇಹಿತರೂ ಕೆಲವರು ಕುಡಿಯುತ್ತಾರೆ, ನನಗೆ ಗೊತ್ತಿಲ್ಲದೆ. ಆ ತಟವಟ ನನಗೆ ಹಿಡಿಸುವುದಿಲ್ಲ" ಎಂದರು ಗಾಂಧೀಜಿ. ಹಾಗೆಯೇ ಇನ್ನೊಮ್ಮೆ ಗಡಿನಾಡು ಗಾಂಧಿಖಾನ್ ಅಬ್ದುಲ್ ಗಫಾರ್‌ಖಾನ್ ತಮ್ಮ ಇಬ್ಬರು ಗಂಡುಮಕ್ಕಳೊಡನೆ ಗಾಂಧಿ ಹುಟ್ಟುಹಬ್ಬ ಸಮಯದಲ್ಲಿ ಬರುತ್ತಾರೆ. ಗಾಂಧಿ ಜತೆ ಅವಕ್ಕೆ ಬಲು ಸಲುಗೆ ಉಳಿದ ಮಕ್ಕಳಂತೆ " ಗಾಂಧಿ, ಇಂದು ನಿಮ್ಮ ಹುಟ್ಟುಹಬ್ಬ. ನಮಗೆ ಮಾಂಸದೂಟ ಹಾಕಿಸಬೇಕು ನೀವು" ಎಂದು ದುಂಬಾಲು ಬೀಳುತ್ತಾರೆ. ಗಾಂಧಿ ಅದನ್ನು ಗಂಭೀರವಾಗಿ ಪರಿಗಣಿಸಿ, " ಹುಡುಗರಿಗೆ ಮಾಂಸದೂಟ ಹಾಕಿಸು" ಎಂದು ಖಾನ್‌ಅಬ್ದುಲ್‌ಗಫಾರ್‌ಖಾನ್‌ಗೆ ಹೇಳುವರು. ಅದಕ್ಕೆ ಗಡಿನಾಡು ಗಾಂಧಿ ನಕ್ಕುಬಿಟ್ಟು, " ಅವು ನಿಮ್ಮನ್ನು ಕಾಲೆಳೆಯುತ್ತಿವೆ. ನೀವು ಸುಮ್ಮನಿರಿ" ಎಂದರು. ಅವರವರ ಪರಂಪರಾನುಗತ ಆಹಾರ ಸೇವನೆ ಅವರ ಹಕ್ಕು ಎಂಬುದೇ ಬಾಪೂ ಅವರ ಬದ್ಧ ನಿಲುಮೆಯಾಗಿತ್ತು.

ಇನ್ನು ಪಂಚಗನಿಯಲ್ಲಿದ್ದಾಗ, ಕ್ಷಯರೋಗದಿಂದ ಹಾಸಿಗೆ ಬಿಟ್ಟೇಳಲಾಗದ ಬಾಲೆಗೆ ಗಾಂಧಿ ಅವರನ್ನು ಕಾಣುವ ಹಂಬಲವನ್ನು ಆಕೆಯ ತಂದೆ ತಾಯಿಗಳು ಗಾಂಧಿ ಬಳಿ ಹೇಳಿಕೊಂಡಾಗ, ಜೆಹಂಗೀರ್ ಸೇರಿದಂತೆ, ಅನುಯಾಯಿಗಳ ಮಾತು ಲೆಕ್ಕಿಸದೇ, ಕಾರು ತೆಗಿ, ಆ ಮಗುವಿನ ಮನೆಗೆ ಹೋಗೋಣ ಎಂದು ಹೊರಟೇಬಿಟ್ಟರು. ಹಾಸಿಗೆಯಲ್ಲಿದ್ದ ಬಾಲೆಯ ಮೈದಡವಿ, ಸಾಂತ್ವನ ಹೇಳಿದರು. ಆಕೆ ತನ್ನ ಕಣ್ಣುಗಳನ್ನೇ ನಂಬುದಾದಳು. ಇನ್ನು ಗಾಂಧಿ ಅಲ್ಲಿಂದ ಬೀಳ್ಕೊಂಡು ಹೊರಡಬೇಕಾದರೆ, ಹಾಸಿಗೆ ಬಿಟ್ಟೇಳುವುದಕ್ಕೂ ಆಗದ ಆಕೆ, ಚಂಗನೆದ್ದು ಕಾರಿನ ಬಳಿ ಬಂದು ಗಾಂಧಿಗೆ ವಿದಾಯ ಹೇಳಿದಾಗ ಜೆಹಂಗೀರ್ ಆದಿಯಾಗಿ ಅಲ್ಲಿದ್ದವರೆಲ್ಲರೂ ವಿಸ್ಮಯ ಪಟ್ಟರು. ಹಾಗೆಯೇ ಜುಹೂವಿನಲ್ಲಿದ್ದಾಗ ಕ್ಯಾನ್ಸರ್ ಪೀಡಿತ ಪಾರ್ಸಿ ಮಹಿಳೆಗೆ ಗಾಂಧಿ ನೋಡುವ ಹಂಬಲ. ಆದರೆ ಅವರ ಸಂಜೆ ಪ್ರಾರ್ಥನೆಗೆ ಸಮಯವಾಗಿತ್ತು. ಗಾಂಧಿಗೆ ಸಂಗತಿ ತಿಳಿದು, ಆಕೆಯನ್ನು ನೋಡಲು ಹೊರಟೇ ಬಿಟ್ಟರು.! ಆಕೆಗೆ ಗಾಂಧಿ ನೋಡಿದ ಮೇಲೆ ಜೀವನ ಸಾರ್ಥಕ್ಯದ ಭಾವನೆ. ಹೀಗೆ ಸೇವಾಗ್ರಾಮದಲ್ಲಿ ರೋಗಿಗಳ ಉಪಚಾರ ಅವರ ಮೊದಲ ಆದ್ಯತೆ. ಪ್ರಕೃತಿ ಚಿಕಿತ್ಸೆಯಲ್ಲಿ ಹಲವಾರು ಪ್ರಯೋಗ ಮಾಡಿದರು. ನೋವಿನುಪಶಮನ ಅಸಿಧಾರಾ ವ್ರತವಾಗಿತ್ತು. ಇನ್ನು ದೇಶ ವಿಭಜನೆ ಸಮಯದಲ್ಲಿ ದೆಹಲಿ, ಕೋಲ್ಕತಾ, ನೌಖಾಲಿ, ಬಿಹಾರಗಳಲ್ಲಿ ಉಂಟಾದ ಕೋಮು ದಳ್ಳುರಿ ಅಡಗಿಸಲು ಏಕಾಂಗಿಯಾಗಿಯೇ, ನೀನು ಒಬ್ಬನೇ ನಡೆ, ಎನ್ನುವಂತೆ ಪ್ರಾಣವನ್ನೇ ಪಣವಾಗಿಟ್ಟರು. ಧರ್ಮಾಂಧನ ಗುಂಡಿಗೆ ಬಲಿಯಾದರು. 'ನಮಸ್ಕರಿಸಲು ಎತ್ತಿದ ಕೈ, ಪ್ರಾರ್ಥನೆ ಮತ್ತು ಸದ್ಭಾವನೆಗಳ ಸಂಕೇತವಾಗಿದ್ದ, ಸಂಜ್ಞೆಯಾಗಿದ್ದ ಜೋಡಿಸಿದ ಆ ಕೈ ಕೆಳಕ್ಕೆ ಕುಸಿಯಿತು. ಸೊರಗಿದ್ದ ಬಡಕಲು ಶರೀರ ಭೂಮಿಗೆ ಒರಗಿತು. ನೆಲದ ಮೇಲೆ ಮಂಜು ಮಣಿಮಣಿಯಾಗಿ ಹನಿಗೂಡಲಾರಂಭಿಸಿತ್ತು' ಎಂದು ರಾಜಮೋಹನ್ ಮಾಳವೀಯ ಔದಾರ್ಯದ ಪ್ರತಿರೂಪದ ಕೊನೆ ಕ್ಷಣ ಚಿತ್ರಿಸುವರು. ಸಿದ್ದವನಹಳ್ಳಿ ಕೃಷ್ಣಶರ್ಮರು ಕಂಡಂತೆ, ಬಾಪೂ ಉತ್ತಮ ಜಾತಿಯ ಶಿಲ್ಪಿ, ಕಲ್ಲು ಮಣ್ಣಿನಲ್ಲಿ ಮಾಟವಾದ ಮೂರ್ತಿಗಳನ್ನು ಕುಸುರಿಸುವ ಶಿಲಾಶಿಲ್ಪಿಯಲ್ಲ. ಮಣ್ಣಿಗಿಂತಲೂ ಅದೃಢವಾದ, ಕಲ್ಲಿಗಿಂತಲೂ ಕಬ್ಬಿಣವಾದ ಮಾನವ ಜೀವನದಲ್ಲಿ ಆತ್ಮವನ್ನು ಕೊನರಿಸುವ ಜೀವನ ಶಿಲ್ಪಿ.

# ಖಾದಿಗೆ ಮಹತ್ವ ತಂದುಕೊಟ್ಟ ಗಾಂಧಿ

ಜಿ. ರಾಮಕೃಷ್ಣ



ಬ್ರಿಟಿಷರ ಕಪಿಮುಷ್ಟಿಗೆ ಸಿಲುಕಿದ್ದ ಭಾರತವನ್ನು ಸ್ವತಂತ್ರಗೊಳಿಸಲು ಸ್ವದೇಶಿ ವಸ್ತುಗಳ ಬಳಕೆಗೆ ಆದ್ಯತೆ ನೀಡುವ ಕುರಿತಂತೆ ನಡೆದ ಚಳವಳಿಯಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧಿ ಅವರು ತೋರಿಸಿಕೊಟ್ಟ ಹಾದಿಯಲ್ಲಿ ಖಾದಿ ವಸ್ತ್ರವನ್ನು ಧರಿಸಿ ವಿದೇಶಿ ಬಟ್ಟೆಗಳನ್ನು ತಿರಸ್ಕರಿಸುವುದಾಗಿತ್ತು. ಹಾಗೂ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವ ಉದ್ದೇಶಕ್ಕೆ ಇಂಬು ನೀಡುವುದಾಗಿತ್ತು.

1920ರಲ್ಲಿ ಮಹಾತ್ಮಗಾಂಧಿಯವರು ಗುಜರಾತ್‌ನ ಕಥಿವಾಡದಲ್ಲಿ ಪ್ರಥಮವಾಗಿ ಖಾದಿ ವಸ್ತ್ರವನ್ನು ತಯಾರು ಮಾಡಲು ಶುರು ಮಾಡಿದ ನಂತರ ದೇಶದೆಲ್ಲೆಡೆ ಖಾದಿಗೆ ಮಹತ್ವ ಬಂತು. ವಿದೇಶಿ ವಸ್ತ್ರಗಳು ಬೆಂಕಿ ಪಾಲಾದವು. ಅಂದಿನಿಂದ ಖಾದಿ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಈಗಲೂ ಕೂಡಾ ಖಾದಿ ಎಂದರೆ ಬಹುತೇಕರಿಗೆ ಮಮಕಾರ. 1920ರಲ್ಲಿ ಅಸಹಕಾರ ಚಳವಳಿ ಆರಂಭವಾದಾಗ ಬ್ರಿಟಿಷರಿಗೆ ಸೆಡ್ಡು ಹೊಡೆಯಲು ಬಳಕೆಯಾದ ಮಾರ್ಗ ಎಂದರೆ ಖಾದಿ ವಸ್ತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವುದಾಗಿತ್ತು. ಇಡೀ ದೇಶದಲ್ಲಿ ಚರಕದ ಮೂಲಕ ನೂಲನ್ನು ತೆಗೆದು ಅದರ ಮೂಲಕ ಕೈಮಗ್ಗದಿಂದ ವಸ್ತ್ರವನ್ನು ತಯಾರು ಮಾಡುವ ಕಾರ್ಯ ಶುರುವಾಯಿತು. ಇಂತಹ ಕಾರ್ಯದಿಂದ ಸ್ವಾವಲಂಬನೆ ಸಾಧಿಸುವ ಛಲವೂ ಮೂಡಿತು. ಇದರಿಂದಾಗಿ ಭಾರತದಲ್ಲಿ ಖಾದಿಗೆ ಹೆಚ್ಚಿನ ಮಹತ್ವ ಬಂತು.

ಖಾದಿ ವಸ್ತ್ರಕ್ಕೆ ಹೆಚ್ಚಿನ ಮಹತ್ವ ನೀಡುವ ಸಲುವಾಗಿ 1925ರಲ್ಲಿ ಅಖಿಲ ಭಾರತ ಸ್ಪಿನ್ನಿಂಗ್ ಅಸೋಸಿಯೇಷನ್ ಮತ್ತು ಅಖಿಲ ಭಾರತ ಚರಕ ಸಂಘವನ್ನು, 1935ರಲ್ಲಿ ಆಲ್ ಇಂಡಿಯಾ ವಿಲೇಜ್ ಇಂಡಸ್ಟ್ರೀಸ್ ಅಸೋಸಿಯೇಷನ್‌ಗಳು ಆರಂಭವಾದವು. 1946ರಲ್ಲಿ ಖಾದಿ ಉತ್ಪನ್ನಗಳ ಬೆಳವಣಿಗೆಗಾಗಿ ಇಲಾಖೆಯೊಂದನ್ನು ಆರಂಭಿಸುವ ಕುರಿತು ಮಹಾತ್ಮಗಾಂಧಿ ಸಲಹೆ ನೀಡಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಕರಕುಶಲ ಹಾಗೂ ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಯಿತು. ಹಾಗೆಯೇ ಈ ವಿಚಾರವಾಗಿ ಹೆಚ್ಚು ಒತ್ತು ನೀಡಲು ತೀರ್ಮಾನಿಸಿ ಗುಡಿಕೈಗಾರಿಕೆಗಳಿಗೆ ಹಾಗೂ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡುವ ಕುರಿತು ಸರ್ಕಾರ ತೀರ್ಮಾನ ತೆಗೆದುಕೊಂಡಿತು. ನಂತರ 1953ರಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ರಚಿಸಲಾಯಿತು, ಮಾತ್ರವಲ್ಲದೆ ಈ ಮಂಡಳಿಗೆ ಸ್ವಾಯತ್ತತೆಯನ್ನು ಕಲ್ಪಿಸುವ ನಿರ್ಧಾರ ತೆಗೆದುಕೊಳ್ಳುವ ಮೂಲಕ ಮಹಾತ್ಮಗಾಂಧಿಯವರ ಕನಸನ್ನು ನನಸು ಮಾಡುವುದಕ್ಕೆ ಒತ್ತು ನೀಡಲಾಯಿತು.

ದೇಶದಲ್ಲಿ ಖಾದಿಗೆ ಮಹತ್ವ ನೀಡಿದಂತೆ ಕರ್ನಾಟಕದಲ್ಲೂ ಖಾದಿಗೆ ಹೆಚ್ಚಿನ ಮಹತ್ವ ನೀಡಲಾಯಿತು. 1956 ಖಾದಿ ಕರ್ನಾಟಕ ಖಾದಿ ಗ್ರಾಮೋದ್ಯೋಗ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಖಾದಿ ಉತ್ಪನ್ನಗಳ ತಯಾರಿಕೆಗೆ ಒತ್ತು ನೀಡಲಾಯಿತು. ಖಾದಿ ಉತ್ಪನ್ನಗಳನ್ನು ತಯಾರಿಸುವವರಿಗೆ ಪ್ರೋತ್ಸಾಹ ನೀಡುವ ಕಾರ್ಯವನ್ನು ಮಾಡಲಾಯಿತಲ್ಲದೆ, ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಖಾದಿಯ ಬೆಳವಣಿಗೆಯತ್ತ ಗಮನ ನೀಡಲಾಯಿತು.




## ಮಾಲ್‌ಗಳ ಮಾದರಿ ಮಳಿಗೆ

ಮಹಾತ್ಮಗಾಂಧಿಯವರು ಸರಳತೆಗೆ ಒತ್ತು ನೀಡಿದ್ದರು. ಅವರ ಕಲ್ಪನೆ ಆಧಾರದಡಿಯಲ್ಲೇ ಖಾದಿಗೆ ಮಹತ್ವ ನೀಡಲಾಗುತ್ತಿದೆ. ಆಧುನಿಕ ಜಗತ್ತಿನಲ್ಲಿ ಬಣ್ಣಕ್ಕೆ ಮಾನ್ಯತೆ ಇದೆ. ಈ ಹಿನ್ನೆಲೆಯಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿಯ ಬೆಳವಣಿಗೆ ಹಾಗೂ ಖಾದಿ ಉತ್ಪನ್ನ ತಯಾರಿಸುತ್ತಿರುವವರ ಜೀವನಕ್ಕೆ ಆಸರೆ ನೀಡುವ ನಿಟ್ಟಿನಲ್ಲಿ ಹೊಸ ಮಾದರಿಯ ವಸ್ತ್ರಗಳನ್ನು ತಯಾರಿಸಿ ಅದನ್ನು ಪರಿಚಯಿಸಲಾಗಿದೆ. ಹಾಗೆಯೇ ಇನ್ನಿತರ ಉತ್ಪನ್ನಗಳನ್ನು ಕೂಡಾ ಪರಿಚಯಿಸಿ ಜನರ ವಿಶ್ವಾಸ ಗಳಿಸಿಕೊಳ್ಳಲಾಗಿದೆ. ಖಾದಿ ಗ್ರಾಮೋದ್ಯೋಗ ಮಂಡಳಿ ಮೂಲಕ ರಾಜ್ಯದ ಎಲ್ಲ ಕಡೆಗಳಲ್ಲಿ ಖಾದಿ ಮಳಿಗೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಇದಕ್ಕೆ ಸರ್ಕಾರ ಕೂಡಾ ಅನುದಾನ ನೀಡಲು ಸಿದ್ಧವಿದೆ. ಹಂತಹಂತವಾಗಿ ಈ ಕಾರ್ಯವನ್ನು ಮಾಡಲಾಗುವುದು ಇದರ ಜತೆಗೆ ಬೆಂಗಳೂರು, ಬೆಳಗಾವಿ ಪ್ರದೇಶದಲ್ಲಿ ಕನಿಷ್ಠ 2 ಎಕರೆ ಪ್ರದೇಶದಲ್ಲಿ ಮಾಲ್‌ಗಳ ಮಾದರಿಯ ವಿಶಾಲವಾದ ಕಾಯಂ ಮಳಿಗೆ ತೆರೆಯಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಜಾಗ ನೀಡುವಂತೆ ಸರ್ಕಾರವನ್ನು ಕೋರಲಾಗಿದೆ ಎಂದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾದ ಯಲುವಳ್ಳಿ ಎನ್. ರಮೇಶ್ ಅವರು ತಿಳಿಸಿದ್ದಾರೆ.

ಒಟ್ಟಿನಲ್ಲಿ ಖಾದಿ ಉಡುಪುಗಳು ಯಾವುದೇ ಕಾಲಕ್ಕೂ ಔಟ್‌ಡೇಟೆಡ್ ಆಗುವುದಿಲ್ಲ. ಎಲ್ಲಾ ವರ್ಗದವರ ಕೈಗೂ ಎಟುಕುವ ಬೆಲೆಯಲ್ಲಿ ಸಿಗುವ ಖಾದಿ ಉಡುಪು ಮೃದುವಾಗಿ ಮತ್ತು ಹಗುರವಾಗಿ ಇರುವುದರಿಂದ ಮಕ್ಕಳಿಂದ ಹಿಡಿದು ವಯೋವೃದ್ಧರ ತನಕ ಧರಿಸಲು ಯೋಗ್ಯವಾಗಿರುತ್ತದೆ. ಹಾಗಾಗಿ ಇತರೆ ಉಡುಪುಗಳಿಗಿಂತ ಖಾದಿ ಉಡುಪು ತನ್ನ ವಿಭಿನ್ನತೆ ಮತ್ತು ವೈಶಿಷ್ಟತೆಯನ್ನು ಕಾಯ್ದುಕೊಂಡು ಬಂದಿದೆ ಎಂದರೆ ತಪ್ಪಾಗಲಾರದು.

### ಮಹಾತ್ಮಗಾಂಧಿಯ ಕನಸಿಗೆ ಸಾಕಾರ ರೂಪ

ಸರಳತೆಯನ್ನು ನಂಬಿಕೊಂಡಿದ್ದ ಮಹಾತ್ಮಗಾಂಧಿಯವರ ಕನಸನ್ನು ನನಸು ಮಾಡಲು ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರಗಳು ಆದ್ಯತೆ ನೀಡುತ್ತಲೇ ಇವೆ. ಖಾದಿ ಉತ್ಪನ್ನಗಳತ್ತ ನಾಗರಿಕರು ಆಕರ್ಷಿತರಾಗಲು ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಇವೆ. ಒಟ್ಟಾರೆ ಖಾದಿ ವಸ್ತ್ರ ಹಾಗೂ ಇತರೆ ಉತ್ಪನ್ನಗಳು ಜನರಿಗೆ ಸುಲಭವಾಗಿ ಸಿಗುವಂತಾಗಲು ಖಾದಿ ಗ್ರಾಮೋದ್ಯೋಗ ಮಂಡಳಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡುವ ಮೂಲಕ ಪ್ರೋತ್ಸಾಹ ನೀಡುತ್ತಿದ್ದು, ಗಾಂಧೀಜಿಯವರ ಗ್ರಾಮೋದ್ಯೋಗ ಕಲ್ಪನೆಗೆ ನೀರೆರೆಯುವ ಕಾರ್ಯವನ್ನು ಸರ್ಕಾರಗಳು ನಿರಂತರವಾಗಿ ಮಾಡುತ್ತಿವೆ.

### ಗ್ರಾಮೋದ್ಯೋಗದತ್ತ

ಯುವ ಜನತೆಯಾಗಲಿ, ಗ್ರಾಮೀಣ ಭಾಗದ ಜನರು ಪಟ್ಟಣಗಳತ್ತ ವಲಸೆ ಬರುವುದನ್ನು ತಡೆಗಟ್ಟಲು ಹಾಗೂ ಗ್ರಾಮೀಣರ ಬದುಕನ್ನು ಹಸನು ಮಾಡುವ ಸಲುವಾಗಿ ಖಾದಿ ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗ್ರಾಮಗಳಲ್ಲೇ ಉದ್ಯೋಗ ಸೃಷ್ಟಿ ಮಾಡುವ ಕಾರ್ಯಕ್ಕೆ ಒತ್ತು ನೀಡಿತು. ಇದರಿಂದ ನೂರಾರು ಮಂದಿಗೆ ಮನೆಯಲ್ಲೇ ಉದ್ಯೋಗ ಸಿಗುವಂತಾಯಿತು.

### ಯುವಜನರ ಆಕರ್ಷಣೆ

ಖಾದಿ ಎಂದರೆ ಮೊದಲು ಅರಳೆ ವಸ್ತ್ರ ಮಾತ್ರ ಇರುತ್ತಿತ್ತು. ನಂತರದ ದಿನಗಳಲ್ಲಿ ಕಾಟನ್ ವಸ್ತ್ರ ಮಾತ್ರವಲ್ಲದೆ, ರೇಷ್ಮೆ. ವುಲನ್ ಹಾಗೂ ಪಾಲಿವಸ್ತ್ರಗಳನ್ನು ಕೂಡಾ ಪರಿಚಯಿಸಿ ಯುವಜನರನ್ನು ಖಾದಿಯತ್ತ ಆಕರ್ಷಿಸುವ ಕಾರ್ಯಕ್ಕೆ ಒತ್ತು ನೀಡಲಾಗಿದೆ. ಈಗಲೂ ಕೂಡಾ ಆಧುನಿಕ ಜಗತ್ತು ಬಯಸುವಂತಹ ವಸ್ತ್ರಗಳನ್ನು ಖಾದಿಯಿಂದಲೇ ತಯಾರಿಸಿ ಎಲ್ಲರನ್ನೂ ಆಕರ್ಷಿಸುವ ಕಾರ್ಯ ಮಾಡಲಾಗುತ್ತಿದೆ.



### ಪರಿಸರಕ್ಕೆ ಆದ್ಯತೆ

ವಿದೇಶಿ ಉತ್ಪನ್ನಗಳು ಪರಿಸರದ ಮೇಲೆ ಹಾನಿ ಮಾಡುವುದನ್ನು ಮನಗಾಣಲಾಗಿದೆ. ಪರಿಸರಕ್ಕೆ ಪೂರಕವಾಗಿರುವಂತಹ ವಸ್ತುಗಳು ತೀರಾ ಕಡಿಮೆ. ಆದರೆ, ಖಾದಿ ಉತ್ಪನ್ನಗಳು ಪರಿಸರಕ್ಕೆ ಪೂರಕವಾದವುಗಳಾಗಿವೆ. ಖಾದಿಯಿಂದ ತಯಾರಿಸಲಾದ ವಸ್ತ್ರ ಆರೋಗ್ಯಕ್ಕೂ ಪೂರಕವಾಗಿದೆ. ಇಂತಹ ವಸ್ತ್ರಗಳನ್ನು ಧರಿಸುವುದರಿಂದ ಚರ್ಮ ರೋಗ ತಡೆಗಟ್ಟಬಹುದಲ್ಲದೆ, ಸೂರ್ಯನ ತಾಪವನ್ನು ತಡೆದುಕೊಳ್ಳುವಂತಹ ಶಕ್ತಿ ಈ ವಸ್ತ್ರಗಳಿಗಿದೆ. ಈ ಹಿನ್ನೆಲೆಯಲ್ಲಿಯೇ ಮಹಾತ್ಮಗಾಂಧಿಯವರು ಅರಳೆಯಿಂದ ತಯಾರಾದ ವಸ್ತ್ರ ಬದುಕಿಗೆ ಪೂರಕ ಎಂಬ ಮಾತನ್ನು ಹೇಳಿದ್ದರು.

### ಖಾದಿ ಉತ್ಪನ್ನಗಳ ಮಾರಾಟಕ್ಕೆ ಮಳಿಗೆ

ಖಾದಿ ಉತ್ಪನ್ನಗಳ ಮಾರಾಟಕ್ಕೆ ರಾಜ್ಯ ಸರ್ಕಾರ ಉತ್ತೇಜನ ನೀಡುತ್ತಿದೆ. ಉತ್ಪನ್ನಗಳ ಕಾಯಂ ಮಾರಾಟಕ್ಕಾಗಿ ಖಾದಿ ಪ್ಲಾಜಾ ವಿಶೇಷ ಮಾರಾಟ ಮಳಿಗೆಗಳನ್ನು ರಾಜ್ಯದ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ತೆರೆಯಲು ತೀರ್ಮಾನಿಸಲಾಗಿದೆ. ಮಳಿಗೆಗಾಗಿ ಜಾಗವನ್ನು ಗುರುತಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಕಾಯಂ ಮಳಿಗೆಗಳ ಆರಂಭಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಜೊತೆಗೂಡಿ ತಲಾ 10 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಿದ್ದು, ಕನಿಷ್ಠ 2 ಎಕರೆ ಪ್ರದೇಶದಲ್ಲಿ ವಿಶಾಲವಾದ ಕಾಯಂ ಮಳಿಗೆಯನ್ನು ತೆರೆದು ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲು ಯೋಜಿಸಲಾಗಿದೆ. ಹಾಗೆಯೇ ಖಾದಿ ಉತ್ಪನ್ನಗಳ ಮಾರಾಟವನ್ನು ಹೆಚ್ಚಳ ಮಾಡುವ ಸಲುವಾಗಿ ಆರು ಜಿಲ್ಲೆಗಳಲ್ಲಿ ಖಾದಿ ಉತ್ಸವ ಆಯೋಜನೆ ಮಾಡಲು ರಾಜ್ಯ ಸರ್ಕಾರ 2 ಕೋಟಿ ರೂ. ಅನುದಾನವನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ನೀಡಿದೆ.

### ಬೆಂಗಳೂರಿನಲ್ಲಿ ಪ್ರತಿ ವರ್ಷ ಉತ್ಸವ

ಖಾದಿ ಉತ್ಪನ್ನಗಳ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸುವ ಸಲುವಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಪ್ರತಿ ವರ್ಷ ಬೆಂಗಳೂರಿನಲ್ಲಿ ಖಾದಿ ಉತ್ಸವವನ್ನು ಆಯೋಜನೆ ಮಾಡಲಾಗುತ್ತಿದೆ. ಈ ವರ್ಷ ಫ್ರೀಡಂ ಪಾರ್ಕ್‌ನಲ್ಲಿ ಖಾದಿ ಉತ್ಸವ ಹಾಗೂ ಖಾದಿ ಉತ್ಪನ್ನಗಳ ವಸ್ತು ಪ್ರದರ್ಶನವನ್ನು ಆಯೋಜನೆ ಮಾಡಲಾಗಿದ್ದು, ಈ ವಸ್ತು ಪ್ರದರ್ಶನದಲ್ಲಿ ಕರ್ನಾಟಕ ರಾಜ್ಯದ 61 ಹಾಗೂ ಹೊರ ರಾಜ್ಯದ 35 ಖಾದಿ ಉತ್ಪನ್ನಗಳ ಮಳಿಗೆಗಳು ತೆರೆದಿದೆ. ಗ್ರಾಮೋದ್ಯೋಗ ಉತ್ಪನ್ನಗಳ ಕರ್ನಾಟಕ ರಾಜ್ಯದ 49 ಹಾಗೂ ಹೊರ ರಾಜ್ಯದ 44 ಮಳಿಗೆಗಳು ತೆರೆದಿದ್ದು, ಆಹಾರ ಹಾಗೂ ಇನ್ನಿತರ ಮಳಿಗೆಗಳು ಸೇರಿದಂತೆ ಒಟ್ಟು 205 ಮಳಿಗೆಗಳು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದವು. ಹಾಗೆಯೇ ಈ ವಸ್ತುಪ್ರದರ್ಶನದ ವೇಳೆ 20 ಕೋಟಿ ರೂ.ಗಳಷ್ಟು ವಹಿವಾಟು ನಡೆದಿರುವುದು ಜನರಲ್ಲಿ ಖಾದಿ ಬಗ್ಗೆ ಆಸಕ್ತಿ ಇರುವುದು ಗೊತ್ತಾಗಿದೆಯಲ್ಲದೆ, ರಾಷ್ಟ್ರಪಿತ ಮಹಾತ್ಮಗಾಂಧಿ ಆರಂಭಿಸಿದ ಖಾದಿ ಕಲ್ಪನೆಗೆ ಮಹತ್ವ ಇದೆ ಎಂಬುದನ್ನು ಸಾಬೀತು ಮಾಡಲಾಗಿದೆ.





# ಗಾಂಧೀಜಿಯವರ ಬಾಲ್ಯ ಜೀವನ

**ಎಲ್ಲ ಬಾಲಕರಂತೆ ತಪ್ಪು ಮಾಡಿದರೂ, ಅದು ಮನವರಿಕೆಯಾದಾಗ, ಅದರಿಂದ ಹೊರಬರುವ ಮೂಲಕ ಸತ್ಯ ಪ್ರಾಮಾಣಿಕತೆ, ನೈತಿಕತೆಗಳನ್ನು ಬಾಲ್ಯದಿಂದಲೇ ರೂಢಿಸಿಕೊಳ್ಳಲಾರಂಭಿಸಿದ ಮೋಹನ, ಮುಂದೆ ದಕ್ಷಿಣ ಆಫ್ರಿಕಾದಲ್ಲಿ ಸಮಾಜ ಮುಖಿಯಾಗಿ ತೆರೆದುಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದ್ದು ಇತಿಹಾಸ.**

ವೇಮಗಲ್ ಸೋಮಶೇಖರ್

**ಮೋ**ಹನದಾಸ ಕರಮಚಂದ ಗಾಂಧಿ ಹುಟ್ಟಿದ್ದು 1869ರ ಅಕ್ಟೋಬರ್ ಎರಡರಂದು ಶನಿವಾರ ಪೋರಬಂದರಿನಲ್ಲಿ. ಪೋರಬಂದರು ಗುಜರಾತಿನ ಕಡಲತೀರದ ಒಂದು ಊರು. ತಾಯಿ ಪುತಲೀಬಾಯಿ. ತಂದೆ ಕರಮಚಂದ ಗಾಂಧಿ ಅವರಿಗೆ ನಾಲ್ವರು ಮಕ್ಕಳು. ಮೋಹನ ಎಲ್ಲರಿಗಿಂತ ಚಿಕ್ಕವ. ಮನೆಯಲ್ಲಿ ಆತನನ್ನು ಮೋನಿಯ ಹಾಗೂ ಮನು ಎಂಬ ಮುದ್ದು ಹೆಸರಿನಿಂದ ಕರೆಯುತ್ತಿದ್ದರೆ, ನೆರೆಹೊರೆಯವರಿಗೆ ಮೋಹನನೆಂದೇ ಚಿರಪರಿಚಿತನಾಗಿದ್ದ. ಮೋಹನನಿಗೆ ಆರು ವರ್ಷ ಆಗಿದ್ದಾಗ ಗಾಂಧಿ ಕುಟುಂಬ ಪೋರಬಂದರಿನಿಂದ ರಾಜಕೋಟೆಗೆ ಹೋಗಿ ನೆಲೆಸಿದರು. ಅಲ್ಲಿದ್ದಾಗ ಮೋಹನ ಐದು ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಣವನ್ನು ಪಡೆದ. ಒಳ್ಳೆ ಚೂಟಿಯಾದ ಹುಡುಗ, ಯಾವಾಗಲೂ ಶಾಲೆಗೆ ಕಾಲಕ್ಕೆ ಸರಿಯಾಗಿ ಹೋಗುತ್ತಿದ್ದ. ಅಡುಗೆ ಆಗದೆ ಇದ್ದರೆ ಊಟಕ್ಕೂ ಕಾಯುತ್ತಿರಲಿಲ್ಲ. ಶಾಲೆ ಮುಗಿಸಿ ಸಂಜೆ ಮನೆಗೆ ಬಂದ ಮೇಲೆಯೇ ಹೊಟ್ಟೆ ತುಂಬ ಊಟ.

ಊರಿನಲ್ಲಿ ನಡೆಯುತ್ತಿದ್ದ ಉತ್ಸವಗಳಲ್ಲೆಲ್ಲಾ ಮೋಹನ ಖುಷಿಯಿಂದ ಭಾಗವಹಿಸುತ್ತಿದ್ದ. ಇವನನ್ನು ಗಮನಿಸುವುದು ತಾಯಿಗೆ ಬಹಳ ಕಷ್ಟವಾಗುತ್ತಿತ್ತು. ಒಂದು ದಿನ ಮೋಹನ ಮನೆಯಿಂದ ಕಾಣೆಯಾಗಿದ್ದ. ನೆರೆಮನೆಯ ಒಬ್ಬಾಕೆಯ ಕಣ್ಣಿಗೆ ಬಿದ್ದಾಗ ಆಕೆ ಇವನನ್ನು ಕರೆತಂದಳು. ಅಂದಿನಿಂದ ಅವನನ್ನು ನೋಡಿಕೊಳ್ಳಲು ರಂಭೆ ಎಂಬ ಹೆಸರಿನ ಒಬ್ಬ ಮಹಿಳೆಯನ್ನು ನೇಮಿಸಿದರು. ಮೋಹನನಿಗೆ ಆಕೆಯನ್ನು ಕಂಡರೆ ಬಹಳ ಇಷ್ಟ.

ಶಾಲೆಗೆ ಹೋಗುತ್ತಾ ಮನೆಯ ಪಾಠದ ಕೆಲಸವನ್ನೆಲ್ಲಾ ಎಚ್ಚರದಿಂದ ಮಾಡುತ್ತಿದ್ದ. ಪಾಠದ ಕೆಲಸ ಮುಗಿಯುತ್ತಿದ್ದಂತೆಯೇ ಗೆಳೆಯರೊಡನೆ ಆಟವಾಡಲು ಹೊರಡುತ್ತಿದ್ದ. ಆಟದಲ್ಲಿ ಹಿಂದೂ ಮುಸ್ಲಿಮ್ ಹುಡುಗರೆಲ್ಲಾ ಸೇರುತ್ತಿದ್ದರು. ಆತನನ್ನು ಎಲ್ಲರೂ ಇಷ್ಟಪಡುತ್ತಿದ್ದರು.

ಮೋಹನ ಮನೆಯಿಂದ ಶಾಲೆಗೆ ನಡೆದುಕೊಂಡು ಹೋಗಿ ಬರುವುದನ್ನೇ ರೂಢಿಸಿಕೊಂಡಿದ್ದ. ಮನೆಯಲ್ಲಿ ಕುದುರೆ ಗಾಡಿ ಇತ್ತು. ಅದರಲ್ಲೇ ಹೋಗು ಎಂದು ತಂದೆ ಹೇಳಿದರೆ "ಬೇಡ ಅಪ್ಪ, ನನ್ನ ಕಾಲುಗಳೇ ನನಗೆ ಕುದುರೆ" ಎಂದು ತನ್ನ ಕಾಲುಗಳನ್ನು ತೋರಿಸುತ್ತಿದ್ದ. ಅವರ ಮನೆಯಲ್ಲಿ ಶೌಚಗೃಹವನ್ನು ಶುಚಿಗೊಳಿಸಲು ಒಬ್ಬ ಆಳನ್ನು ಇಟ್ಟುಕೊಂಡಿದ್ದರು. ಅವನ ಹೆಸರು ಉಕಾ. ಆತ 'ಥೇಡ್' ಎನ್ನುವ ಅಸ್ಪೃಶ್ಯ ಪಂಗಡದ ಜಾತಿಗೆ ಸೇರಿದವ. ಆತನನ್ನು ಮುಟ್ಟಬಾರದು ಎಂದು ಮೋಹನನಿಗೆ ತಾಯಿ ಹೇಳಿದ್ದರು. ಅಕಸ್ಮಾತ್ ಆತನನ್ನು ತಾಕಿದರೆ ತಕ್ಷಣ ಸ್ನಾನ ಮಾಡಬೇಕಾಗಿತ್ತು.

ಇದು ಮೋಹನನಿಗೆ ಅರ್ಥವಾಗಲಿಲ್ಲ. "ಅಮ್ಮಾ! ಉಕಾನನ್ನು ಮುಟ್ಟಿದರೆ ತಪ್ಪೇನು? ಜನ ಹೇಳುತ್ತಾರೆ, ದೇವರು ಎಲ್ಲೆಲ್ಲೂ ಇದ್ದಾನೆ ಅಂತ. ಹಾಗಾದರೆ ಉಕಾನಲ್ಲೂ ದೇವರು ಇರಬೇಕಲ್ಲಾ ಮತ್ತೆ ಉಕಾನನ್ನು ಮಾತ್ರ ಮೈಲಿಗೆ ಅಂತ ಏಕೆ ಅನ್ನಬೇಕು?" ಎಂದು ತಾಯಿಯ ಜೊತೆ ವಾದ ಮಾಡುತ್ತಿದ್ದ. ಇಂಥ ಪ್ರಶ್ನೆಗಳಿಗೆಲ್ಲಾ ಉತ್ತರಿಸುವುದು ತಾಯಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಮೋಹನನಿಗೆ ತಾಯಿಯ ಮೇಲೆ ತುಂಬ ಪ್ರೀತಿ, ಒಲವು. ಈ ಎಲ್ಲಾ ಆಚಾರವನ್ನೂ ತನ್ನ ಕುಟುಂಬದಲ್ಲಿ ಏಕೆ ಆಚರಿಸುವರೆಂದು ಅರಿಯಲಾರದೆ ಹೋದ.

ಒಂದು ಸಲ ಶ್ರವಣನ ಪಿತೃ ಭಕ್ತಿ ಪುಸ್ತಕ ಓದಿ "ಶ್ರವಣನ ಹಾಗೆ ನಾನೂ ನನ್ನ ತಂದೆ ತಾಯಿಯವರ ಸೇವೆ ಮಾಡಬೇಕು" ಎಂದುಕೊಂಡ. ಇನ್ನೊಂದು ಸಲ 'ಸತ್ಯ ಹರಿಶ್ಚಂದ್ರ' ನಾಟಕ ನೋಡಿ ಹರಿಶ್ಚಂದ್ರನ ಹಾಗೆ ಬಾಳನ್ನು ನಡೆಸಬೇಕು ಎಂದುಕೊಂಡ. ಮೋಹನ ತನ್ನ ಜೊತೆಗಾರರೊಂದಿಗೆ ಉಯ್ಯಾಲೆ ಆಟದಲ್ಲಿ ಕಾಲ ಕಳೆಯುತ್ತಿದ್ದ. ಉಯ್ಯಾಲೆ ಹಬ್ಬ ಎಂದರೆ ಉಯ್ಯಾಲೆ ಮೇಲೆ ದೇವರುಗಳ ಮಣ್ಣಿನ ಬೊಂಬೆಗಳನ್ನು ಕೂರಿಸಿ ಹಾಡುತ್ತಾ ತೂಗುವ ಆಟ ಆಡುವುದು. ಒಂದು ದಿನ ಮಣ್ಣಿನ ಬೊಂಬೆಗಳ ಬದಲಾಗಿ ಲೋಹದ ಬೊಂಬೆಗಳನ್ನು ಏಕೆ ಇಡಬಾರದು? ಎಂದು ಯೋಚಿಸಿದರು. ಹತ್ತಿರದಲ್ಲೇ ಇದ್ದ ದೇವಾಲಯದಲ್ಲಿ ಅನೇಕ ಲೋಹದ ಪ್ರತಿಮೆಗಳು ಇದ್ದುದನ್ನು ಕಂಡಿದ್ದ ಅವರು ಒಂದು ಮಧ್ಯಾಹ್ನ ದೇವಾಲಯದ ಪೂಜಾರಿ ಮಲಗಿದ್ದ ಸಮಯದಲ್ಲಿ ದೇವಾಲಯದೊಳಕ್ಕೆ ನುಸುಳಿ ಕೆಲವು ಪ್ರತಿಮೆಗಳನ್ನು ಎತ್ತಿಕೊಂಡು ಹೊರಟರು. ಆಗ ಒಂದು ಪ್ರತಿಮೆ ಕೈಯಿಂದ ಜಾರಿ ಬಿತ್ತು. ಆ ಶಬ್ದಕ್ಕೆ ಎಚ್ಚರವಾದ ಪೂಜಾರಿಯನ್ನು ಕಂಡ ಎಲ್ಲಾ ಹುಡುಗರು ಭಯದಿಂದ ಓಡಿಹೋಗಿ ಅವಿತುಕೊಂಡರು. ಕೊನೆಗೆ ಪೂಜಾರಿ ಎಲ್ಲರನ್ನೂ ಕರೆದು ಕೇಳಿದಾಗ ಒಬ್ಬರಾದ ಮೇಲೆ ಒಬ್ಬರು 'ನನಗೆ ಗೊತ್ತಿಲ್ಲ!' ಎಂದರು. ಮೋಹನನ ಸರದಿ ಬಂತು. ಅವನಿಗೆ ಸತ್ಯ ಹರಿಶ್ಚಂದ್ರನ ನೆನಪಾಗಿ "ನನ್ನ ಚಿಕ್ಕಪ್ಪನ ಮಗ ಪ್ರತಿಮೆಗಳನ್ನು ತೆಗೆದುಕೊಂಡ. ಆಗ ನಾವೆಲ್ಲರೂ ಇದ್ದೆವು. ನೀವು ಎದ್ದಾಗ ಎಲ್ಲರೂ ಓಡಿದೆವು" ಎಂದು ನಿಜ ಹೇಳಿದ. ಆ ಮಾತು ಮೋಹನನ ಜೊತೆಯಲ್ಲಿದ್ದವರಿಗೆ ಹಿಡಿಸಲಿಲ್ಲ.

ಒಂದು ದಿವಸ ಮೋಹನ ಸೀಬೆ ಹಣ್ಣಿನ ಮರಕ್ಕೆ ಹತ್ತಿ ಹಣ್ಣು ಕೀಳುತ್ತಿದ್ದಾಗ ಅವರ ಅಣ್ಣ ಕಾಲು ಹಿಡಿದು ಎಳೆದು ಬಿಟ್ಟ. ಮನೆಗೆ ಬಂದ ಮೋಹನ ಅಮ್ಮನಲ್ಲಿ ದುಃಖ ತೋಡಿಕೊಂಡ. ಆಗ ಅಮ್ಮ 'ತಕ್ಷಣ ತಿರುಗಿಸಿ ಅವನಿಗೆ ಕಪಾಳಕ್ಕೆ ಎರಡು ಬಿಡಬೇಕಾಗಿತ್ತು' ಎಂದರು. "ಅಣ್ಣನನ್ನು ಹೊಡೆಯುವಂತೆ ಹೇಳುವೆಯಾ! ನಾನೇಕೆ ಹೊಡೆಯಲಿ ಅಮ್ಮ. ಅವನು ನನ್ನನ್ನು ಹೊಡೆದರೂ ನಾನು ತಿರುಗಿಸಿ ಅಣ್ಣನನ್ನು ಹೊಡೆಯುವುದಿಲ್ಲ, ತಿರುಗಿಸಿ ಕೊಡು ಎಂದು ಹೇಳುವುದಕ್ಕಿಂತ ತಮ್ಮನಿಗೆ ಹೀಗೆ ಹೊಡೆಯಬಾರದು ಎಂದು ಅಣ್ಣನಿಗೆ ನೀನು ಬುದ್ಧಿ ಹೇಳುವುದು ಉಚಿತವಲ್ಲವೇ?" ಎಂದನು. 'ನನ್ನ ಕಂದ, ಇಷ್ಟು ಬುದ್ಧಿ ನಿನಗೆ ಎಲ್ಲಿಂದ ಬಂತು, ಯಾರು ಹೇಳಿಕೊಟ್ಟರು, ಎಂದು ತಾಯಿ ಮಗನನ್ನು ಎತ್ತಿಕೊಂಡು ಮುದ್ದಾಡಿದಳು.

1880ರ ಸುಮಾರಿಗೆ ಮೋಹನ ಹನ್ನೊಂದನೇ ವಯಸ್ಸಿನಲ್ಲಿ ಎಪ್ಪತ್ತು ಬಾಲಕರ ಯಾದಿಯಲ್ಲಿ ಒಂಬತ್ತನೆಯ ಸ್ಥಾನ ಪಡೆದು ಮಾಧ್ಯಮಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ರಾಜಕೋಟೆಯ ಆಲ್‌ಫ್ರೆಡ್ ಪ್ರೌಢಶಾಲೆ ಸೇರಿದ. ಆಗ ಅಲ್ಲಿ ಇಂಗ್ಲಿಷ್ ಭಾಷೆ ಶಿಕ್ಷಣ ಮಾಧ್ಯಮವಾಗಿತ್ತು. ಆಗ ಮೋಹನ ತಲೆಯಲ್ಲಿ ಶಿಖೆ(ಜುಟ್ಟು)ಯನ್ನು ಬಿಟ್ಟಿದ್ದ.

ಹುಡುಗ ಹುಡುಗಿಯರಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡುವುದು ಆ ಕಾಲದ ರೂಢಿ. ಮೋಹನನ ತಂದೆ ಕರಮಚಂದ ಗಾಂಧಿಗೆ ಆರೋಗ್ಯ ಬಹಳ ಹದಗೆಟ್ಟಿತ್ತು. ತಾನು ಸಾಯುವ ಮುನ್ನ ತನ್ನ ಕಿರಿಯ ಮಗನಾದ ಮೋಹನನಿಗೆ ಮದುವೆ ಮಾಡಬೇಕು ಎಂಬ ತವಕ. ಆದರೆ 1882ರಲ್ಲಿ ಮೋಹನನಿಗೆ ಇನ್ನೂ 13 ವರ್ಷ ತುಂಬಿರಲಿಲ್ಲ, ಪ್ರೌಢಶಾಲೆಯಲ್ಲಿ ಓದುತ್ತಿದ್ದ ಮೋಹನನಿಗೆ ಮದುವೆ ಎಂದರೆ ಏನೂ ತಿಳಿಯದು. ಆಗ ಪೋರ್‌ಬಂದರಿನ ಕಸ್ತೂರಿ ಬಾ ಜೊತೆಯಲ್ಲಿ ವಿವಾಹವಾಯಿತು. ವಧು, ವರನಿಗಿಂತ ಕೆಲವೇ ತಿಂಗಳುಗಳಷ್ಟು ಕಿರಿಯಳು. ಆದರೆ ಮೋಹನ ಹೆಂಡತಿಯನ್ನು ಗಂಡ ಪ್ರೀತಿಸಬೇಕು, ಚನ್ನಾಗಿ ನೋಡಿಕೊಳ್ಳಬೇಕು, ಗೌರವಿಸಬೇಕು ಎಂದು ತಿಳಿದುಕೊಂಡಿದ್ದ. ಮದುವೆಯಿಂದಾಗಿ ಮೋಹನ ಒಂದು ವರ್ಷ ಶಾಲೆಗೆ ಹೋಗಲಾಗಲಿಲ್ಲ. ಆದರೆ ಮಾರನೆಯ ವರ್ಷ ಮುಖ್ಯೋಪಾಧ್ಯಾಯರು ಮೋಹನನಿಗೆ ಆ ನಷ್ಟವನ್ನು ತುಂಬಿ ಕೊಟ್ಟು ಮುಂದಿನ ತರಗತಿಗೆ ಹಾಕಿದರು.

1885ರಲ್ಲಿ ಮೋಹನನಿಗೆ ಕೆಲವು ಅಹಿತಕರ ಘಟನೆಗಳು ಸಂಭವಿಸಿದುವು. ತಂದೆಯವರು ಕಾಯಿಲೆ ಬಿದ್ದು ಹಾಸಿಗೆ ಹಿಡಿದಿದ್ದರು. ಆ ಕಾರಣದಿಂದ ಶಾಲೆಗೆ ತಡವಾಗಿ ಹೋಗ ಬೇಕಾಯಿತು. ಆದರೆ ಹಾಜರಿ ಪುಸ್ತಕದಲ್ಲಿ ಗೈರು ಹಾಜರಿ ಎಂದು ಗುರುತು ಮಾಡಲಾಗಿತ್ತು. ಮರು ದಿವಸ ಮುಖ್ಯೋಪಾಧ್ಯಾಯರು ಕರೆದು ಮುನ್ನೆಚ್ಚರಿಕೆ ಕೊಟ್ಟರು. ಇನ್ನೊಬ್ಬ ಗೆಳೆಯ ಏನೇನೋ ಸಬೂಬು ಹೇಳಿ ಮಾಂಸ ತಿನ್ನುವುದನ್ನು ರೂಢಿ ಮಾಡಿಸಿದ. ಮತ್ತೊಬ್ಬ ಸ್ನೇಹಿತ ಬೀಡಿ ಸೇದುವುದನ್ನು ಕಲಿಸಿದ. ಇದೆಲ್ಲವನ್ನೂ ಖಾಯಿಲೆ ಬಿದ್ದಿದ್ದ ತಂದೆಗೆ ಮೋಹನ ಕಾಗದದಲ್ಲಿ ಬರೆದು ತಿಳಿಸಿದ. ಆ ಕಾಗದವನ್ನು ಹರಿದು ಹಾಕಿ "ಮೋಹನ ನನ್ನ ಕೀರ್ತಿ-ಪ್ರತಿಷ್ಠೆಗಳನ್ನು ಉಳಿಸುತ್ತಾನೆ. ಅವನು ನಮ್ಮ ವಂಶದ ಕೀರ್ತಿಯನ್ನು ಹೆಚ್ಚಿಸುತ್ತಾನೆ" ಎಂದು ಅಲ್ಲಿದ್ದವರಿಗೆ ಹೇಳಿ ಮಲಗಿಕೊಂಡ ತಂದೆಯವರು ಪುನಃ ಏಳಲೇ ಇಲ್ಲ. ಪುತಲೀ ಬಾಯಿಯೂ ಅಲ್ಲೇ ಇದ್ದರು. ಎಂದಿನಂತೆ ಅಂದು ರಾತ್ರಿ ಮೋಹನ ಗರ್ಭಿಣಿ ಪತ್ನಿ ಕಸ್ತೂರಿ ಬಾ ಮಲಗಿದ್ದ ಕೋಣೆಗೆ ಹೋಗಿ ಐದು ನಿಮಿಷವೂ ಆಗಿರಲಿಲ್ಲ. ಅಷ್ಟರಲ್ಲೇ ಆಳು ಓಡಿಬಂದು 'ತಂದೆ ಇನ್ನಿಲ್ಲ' ಎಂದ. ಮೋಹನ ಕೈಗಳನ್ನು ಹಿಸುಕಿಕೊಳ್ಳುತ್ತಾ ತಂದೆಯ ಕೋಣೆಗೆ ಓಡಿ ಬಂದು " ಕೊನೆಯ ಕಾಲದಲ್ಲಿ ಅವರ ಪಕ್ಕದಲ್ಲೇ ಇರಬೇಕಾಗಿತ್ತು. ಕಾಲ ಮಿಂಚು ಹೋಯಿತು. ಛೇ ನಾನು ಎಂತಹ ಕೆಲಸ ಮಾಡಿಬಿಟ್ಟೆ". ಎಂದು ತನ್ನನ್ನು ತಾನೇ ಶಪಿಸಿಕೊಂಡ. ಇದು ಗಾಂಧಿಯವರ ಬಾಲ್ಯ ಜೀವನದ ಸಂಕ್ಷಿಪ್ತ ಕಥೆ.





ರಾಯನಗೌಡ ಪಾಟೀಲ

## ಬೆಳಗಾವಿ ಜಿಲ್ಲೆಯಲ್ಲಿ

# ರಾಷ್ಟ್ರಪಿತ ಮೂಡಿಸಿದ ಹೆಜ್ಜೆ ಗುರುತುಗಳು

"ರಕ್ತ ಮಾಂಸ, ಎಲುಬುಗಳಿಂದ ಕೂಡಿದ ಇಂಥ ಒಬ್ಬ ಜೀವಂತ ವ್ಯಕ್ತಿ ಈ ನೆಲದ ಮೇಲೆ ಅಡ್ಡಾಡಿದ್ದ ಎಂದು ಹೇಳಿದರೆ ಮುಂದಿನ ಪೀಳಿಗೆ ನಂಬಲಿಕ್ಕಿಲ್ಲ". ರಾಷ್ಟ್ರಪಿತ ಗಾಂಧೀಜಿಯವರ ಬಗೆಗೆ ಭೌತ ಶಾಸ್ತ್ರದ ಶ್ರೇಷ್ಠ ವಿಜ್ಞಾನಿ ನೊಬಲ್ ಪ್ರಶಸ್ತಿ ಗರಿ ಮುಡಿದ ಐನ್‌ಸ್ಟೀನ್‌ರ ಉದ್ಗಾರ ಮಹಾತ್ಮಾಜಿಯವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಸೂರ್ಯ ಮುಳುಗದ ಸಾಮ್ರಾಜ್ಯದ ಅಧಿಪತಿಗಳಾದ ಇಂಗ್ಲೀಷರ ವಿರುದ್ಧ ಸತ್ಯಾಗ್ರಹವೆಂಬ ರಕ್ತ ರಹಿತ ಅಸ್ತ್ರದಿಂದ ಹೋರಾಡಿ ಭಾರತಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಗಾಂಧೀಜಿಯವರ ಸತ್ಯಾಗ್ರಹ ಮಂತ್ರದ ಶಕ್ತಿ ಕಂಡು ಜಗತ್ತು ನಿಬ್ಬೆರಗಾಯಿತು.

ಗಾಂಧೀಜಿ ಈ ಜಗತ್ತು ಕಂಡ ಒಬ್ಬ ಶ್ರೇಷ್ಠ ಮಾನವತಾವಾದಿ, ಸಮಾಜಸುಧಾರಕ, ದೀನಬಂಧು, ಸತ್ಯಾಗ್ರಹಿ, ರಾಜಕಾರಣಿ, ಪತ್ರಕರ್ತ, ಗ್ರಾಮ ಸ್ವರಾಜ್ಯದ ಹರಿಕಾರ ಇವರನ್ನು ಯಾವ ಕೋನದಿಂದ ನೋಡಿದರೂ ಅವರಿಗೆ ಅವರೇ ಸಾಟಿ. ಇಂತಹ ಒಂದು ಶ್ರೇಷ್ಠ ವ್ಯಕ್ತಿ ಕರ್ನಾಟಕದಲ್ಲಿ 15 ಸಲ ಪ್ರವಾಸ ಕೈಗೊಂಡರೆ, ಆರು ಸಲ 1916, 1920, 1924, 1927, 1934, 1937ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿಯೇ ಪ್ರವಾಸ ಕೈಗೊಂಡರು. ಇವರ 3ನೇಯ ಮತ್ತು 6ನೇಯ ಭೇಟಿಗಳು ಭಾರತದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುತ್ತವೆ. 1924ರಲ್ಲಿ ಬೆಳಗಾವಿಯಲ್ಲಿ ಜರುಗಿದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ ಮತ್ತು 1937ರಲ್ಲಿ ಹುದಲಿಯಲ್ಲಿ ಜರುಗಿದ ಖಾದಿ ಸಮ್ಮೇಳನಗಳ ನಿರ್ಣಯಗಳು ಭಾರತದ ಇತಿಹಾಸದಲ್ಲಿ ತನ್ನದೆ ಆದ ಅಚ್ಚಳಿಯದ ಸ್ಥಾನ ಪಡೆದವು.

ಬೆಳಗಾವಿ ಜಿಲ್ಲೆಗೆ ಪ್ರಥಮ ಭೇಟಿ 29 ಏಪ್ರಿಲ್ 1916 ರಲ್ಲಿ. ಲೋಕಮಾನ್ಯ ತಿಲಕರು ಮುಂಬಯಿ ಪ್ರಾಂತಿಯ ಸ್ವರಾಜ್ಯ ಪರಿಷತ್‌ನಲ್ಲಿ ಭಾಗವಹಿಸಲು ಬರುವವರಿದ್ದರು, ಕಾಕಾ ಕಾಲೇಕರರು ಗಾಂಧೀಜಿಗೂ ಸಹ ಆಮಂತ್ರಣವಿತ್ತಿದ್ದರು. ದೇಶಭಕ್ತ ಗಂಗಾಧರಾಯರಿಗೆ ಗಾಂಧೀಜಿ ಮಂದಗಾಮಿ ಗೋಪಾಲಕೃಷ್ಣ ಗೋಖಲೆಯವರ ಶಿಷ್ಯರಾಗಿದ್ದರಿಂದ ತಿಲಕರ ಜೊತೆ ಪರಿಷತ್ತಿನಲ್ಲಿ

ಭಾಗವಹಿಸಲಿಕ್ಕಿಲ್ಲವೆಂಬ ಸಂಶಯ ಪರಿಹರಿಸಿಕೊಳ್ಳಲು ಗಾಂಧೀಜಿಯವರಿಗೆ ವಿನಂತಿ ಪತ್ರ ಬರೆದರು. ಗಾಂಧೀಜಿಯವರು "Nothing but death can prevent me from going to Belgaum and attending the conference" (ಸತ್ತರೆ ಹೋಯಿತು, ವಿನಾ ಪರಿಷತ್ತಿಗೆ ಬರದಂತೆ ಯಾರೂ ತಡೆಯಲಾರರು) ಅವರ ಈ ಒಕ್ಕಣೆಯಿಂದ ಗಾಂಧೀಜಿಯವರ ನಡೆ ನುಡಿ ದೃಢವಾಗಿರುತ್ತವೆಂಬುದನ್ನು ನಾವು ಗಮನಿಸಬಹುದು. ತಮ್ಮ ನಿರ್ಧಾರದಂತೆ ಪರಿಷತ್ತಿನಲ್ಲಿ ಭಾಗವಹಿಸಲು ಮಗ ರಾಮದಾಸ, ಕಾಕಾ ಕಾಲೇಕರರೊಡನೆ ರೇಲ್ವೆ ತೃತೀಯ ದರ್ಜೆಯ ಬೋಗಿಯಲ್ಲಿ ಬೆಳಗಾವಿಗೆ ಆಗಮಿಸಿದರು. 30.04.1916 ರಂದು ಸಂಜೆ ರವಿವಾರ ಪೇಟೆಯಲ್ಲಿ ಕಣಬರಗಿಯ ಶಿವಮೂರ್ತಿಸ್ವಾಮಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಸಭೆಯಲ್ಲಿ ಅಸ್ಪೃಶ್ಯರು ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಗಾಂಧೀಜಿಯವರು ಸಭೆಯನ್ನುದ್ದೇಶಿಸಿ "ಐಕ್ಯ ಮತವಿಲ್ಲದೆ ಸ್ವರಾಜ್ಯ ಸಿಗುವುದಿಲ್ಲ. ಸ್ವರಾಜ್ಯ ಬಂದರೆ ಯಾವ ವರ್ಗದವರು ಮೇಲುಗೈಯಿರುವುದಿಲ್ಲ. ನನ್ನ ಪಾಲಿಗೆ ಯಾರೂ ಮೇಲೂ ಅಲ್ಲ ಕೀಳೂ ಅಲ್ಲ ಎಲ್ಲರೂ ಸಮಾನರೆಂದು" ನುಡಿದರು. 01.05.1916 ರಂದು ಸ್ವರಾಜ್ಯ ಪರಿಷತ್ತಿನಲ್ಲಿ ಆರೋಗ್ಯ ತೊಂದರೆಯಿಂದ ಹಿಂದಿಯಲ್ಲಿ ಪುಟ್ಟ ಭಾಷಣ ಮಾಡಿದರು.

ಗಾಂಧೀಜಿಯವರ 2 ನೇ ಭೇಟಿ ಬೆಳಗಾವಿ ಜಿಲ್ಲೆಯ ನಿಪ್ಪಾಣಿಗೆ ಬಂದಿದ್ದು. 08.11.1920 ರಂದು ನಿಪ್ಪಾಣಿಯಲ್ಲಿ ಸಭೆಯನ್ನುದ್ದೇಶಿಸಿ "ಅರೆಬರೆ ಸತ್ಯ ಯಾವಾಗಲೂ ಅಪಾಯಕಾರಿ, ಹಾಲಿನಲ್ಲಿ ಕಸವಿದ್ದರೆ ಕೂಡಲೆ ಕಾಣುತ್ತದೆ. ಕೊಳಕು ವಸ್ತುವಿನಲ್ಲಿಯ ಹೊಲಸು ಕಾಣುವುದಿಲ್ಲ. ಕೇವಲ ತಪ್ಪನ್ನಷ್ಟೆ ಎಣಿಸದೆ ಒಪ್ಪನ್ನು ಗಮನಿಸಬೇಕು ಟೀಕೆಗಳಿಂದ ಏನೂ ಸಾಧಿಸಲಾಗದು. ನಮ್ಮ ಮನ ನಿರ್ಮಲವಾಗಿರಬೇಕೆಂದು



ನುಡಿದರು. ಮುಂದೆ ಚಿಕ್ಕೋಡಿ ಹುಕ್ಕೇರಿ ಸಂಕೇಶ್ವರಗಳಿಗೆ ಭೇಟಿ ನೀಡಿ, ಅಂದೆ ಮಧ್ಯಾಹ್ನ ಬೆಳಗಾವಿಯ ಕೋಟೆ ಮೈದಾನದಲ್ಲಿ ಬೃಹತ್ ಸಭೆಯಲ್ಲಿ ಗಾಂಧೀಜಿಯವರ ಕೂಡ ಶೌಕತ್ ಅಲಿ ಅವರೂ ಸನ್ಮಾನ ಸ್ವೀಕರಿಸಿದರು. ಅದೇ ಸಭೆಯಲ್ಲಿ ಗಾಂಧಿ ಟೊಪ್ಪಿಗೆಗಳ ಹರಾಜಿನಿಂದ ಕೂಡಿದ 1000 ರೂಪಾಯಿಗಳನ್ನು ಮಹಾತ್ಮ ಗಾಂಧೀಜಿಯವರಿಗೆ ಅರ್ಪಿಸಲಾಯಿತು. ಅದೇ ದಿನ ಮಾರುತಿ ಗಲ್ಲಿಯ ಮಾರುತಿ ಮಂದಿರದಲ್ಲಿ ಮಹಿಳಾ ಸಮಾವೇಶ ಉದ್ದೇಶಿಸಿ "ನಿಮ್ಮ ಸದ್ಭಾವನೆಯಲ್ಲಿ ದೇಶದ ಯಶಸ್ಸು ಅಡಗಿದೆ. ನಮ್ಮ ಹಿಂದೂ ಹೆಂಗಸರು ಮುಸ್ಲಿಂರನ್ನು ಸಹೋದರರೆಂದು ಎಲ್ಲಿಯವರೆಗೆ ಭಾವಿಸುದಿಲ್ಲವೊ ಅಲ್ಲಿಯವರೆಗೆ ನಮ್ಮ ದುರಾದೃಷ್ಟ ನೀಗದು. ನಿಮ್ಮ ದೇಣಿಗೆಯಿಂದ ರಾಷ್ಟ್ರೀಯ ವಿದ್ಯಾಭ್ಯಾಸ ಮತ್ತು ಸ್ವದೇಶಿ ಪ್ರಚಾರಕ್ಕೆ ಅನುಕೂಲವಾಗಲಿ" ಎಂದು ನುಡಿದರು. ಸಭೆಯಲ್ಲಿ 2000 ರೂಪಾಯಿ ಬೆಲೆಯ ಆಭರಣ ಸ್ವಲ್ಪ ಹಣ ಗಾಂಧೀಜಿಯವರಿಗೆ ನಿಧಿ ರೂಪದಲ್ಲಿ ನೀಡಲಾಯಿತು. ಪಕ್ಕದ ಶಹಪೂರ ಮತ್ತು ಖಾನಾಪೂರಕ್ಕೆ ಭೇಟಿ ನೀಡಿ ಅಲ್ಲಿಯ ಜನರಿಂದ ನಿಧಿ ಪಡೆದು ಅಂದೇ ರಾತ್ರಿ ಅಳ್ನಾವರ ಹಳಿಯಾಳದತ್ತ ತೆರಳಿದರು.

ಕಾಂಗ್ರೆಸ್ ಇತಿಹಾಸದಲ್ಲಿ 1924 ರ ಅವರ 3 ನೇ ಭೇಟಿಗೆ ಪ್ರಮುಖ ಸ್ಥಾನ ಲಭಿಸುತ್ತದೆ. ಒಂದು ಮಹಾತ್ಮ ಗಾಂಧೀಜಿಯವರು 39 ನೇ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದುದು. ಇನ್ನೊಂದು 38ನೆಯ ಅಧಿವೇಶನದ ನಂತರ ಕಾಂಗ್ರೆಸ್‌ನಲ್ಲಿ ತಾತ್ವಿಕ ಭಿನ್ನಾಭಿಪ್ರಾಯವೇರ್ಪಟ್ಟು No changer, Pro changer ಎರಡು ಗುಂಪುಗಳಾಗಿ ಕಾಂಗ್ರೆಸ್ ಇಬ್ಭಾಗದ ಹಂತ ತಲುಪಿತ್ತು. Pro changer ಗುಂಪಿನ ಮೋತಿಲಾಲ ನೆಹರು, ಶ್ರೀನಿವಾಸ ಅಯ್ಯಂಗಾರ, ಚಿತ್ತರಂಜನದಾಸರಂತಹ ಹಿರಿಯ ಮುತ್ಸದಿಗಳಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನ ಕಲ್ಪಿಸಿ, ಕಾಂಗ್ರೆಸ್ ವಿಧಾನ ಮಂಡಲ ಪ್ರವೇಶಿಸುವ ಐತಿಹಾಸಿಕ ನಿರ್ಣಯ ಕೈಗೊಂಡಿತು. ಗಾಂಧೀಜಿಯವರು ಅಧಿವೇಶನದ ಸಮಾರೋಪ ಭಾಷಣ ಮಾಡುತ್ತ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯಗಳಿಸುವ ಸಾಧನವಾಗಿ ಅಹಿಂಸೆ ಅಸಹಕಾರ ಚಳುವಳಿಯ ಮಂತ್ರ ಘೋಷಿಸಿದರು. ಸ್ವಾತಂತ್ರ್ಯಾಂದೋಲದಲ್ಲಿ ಅಹಿಂಸೆ ಅಸಹಕಾರಕ್ಕೆ ಗಾಂಧೀಜಿಯವರು ಮಹತ್ವ ನೀಡಿದುದು ಅಧಿವೇಶನಕ್ಕೆ ಐತಿಹಾಸಿಕ ಮೆರಗು ನೀಡಿತು. ಅಧಿವೇಶನದಲ್ಲಿ ಅಲಿ ಸಹೋದರರು, ಮೋತಿಲಾಲ ನೆಹರು, ಜವಾಹರಲಾಲ ನೆಹರು, ನೇತಾಜಿ ಭೋಸ, ರಾಜಾಜಿ, ವಲ್ಲಭಭಾಯಿ ಪಟೇಲ್, ಸರೋಜಿನಿ ನಾಯ್ಡು, ಮದನ ಮೋಹನ ಮಾಳವಿಯ, ಮೌಲಾನಾ ಅಬ್ದುಲ್ಲ ಕಲಾಂ, ಟಿ. ಪ್ರಕಾಶಂ, ಹರ್ಡೆಕರ ಮಂಜಪ್ಪ ಮುಂತಾದವರು ಭಾಗವಹಿಸಿದ್ದರು.

1924ರ ಡಿಸೆಂಬರ್ 25,26,27 ರಂದು ಜರುಗಿದ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಮಟ್ಟಿಗೆ ಅತಿ ಮಹತ್ವ ತಳೆಯಿತು. ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪರಿಷತ್ತು ಜರುಗಿ ಕರ್ನಾಟಕ ಏಕೀಕರಣಕ್ಕೆ ನಾಂದಿ ಹಾಡಿತು. ನಾಡಿನ ಏಕೀಕರಣವಾದಿಗಳಾದ ಸಿದ್ದವ್ವನಹಳ್ಳಿ ನಿಜಲಿಂಗಪ್ಪ, ಅದರಗುಂಚಿ ಶಂಕರಗೌಡರು, ಕಾರ್ನಾಡ ಸದಾಶಿವರಾಯರು, ಹುಯಿಲಗೋಳ ನಾರಾಯಣರಾಯರು, ಕೆ. ಆರ್ ಕಾರಂತ ಮುಂತಾದ ಮಹನೀಯರು ಭಾಗವಹಿಸಿದ್ದರು. ಕರ್ನಾಟಕದ ಗಾಂಧಿಯೆಂದೇ ಹೆಸರು ಪಡೆದ ಹರ್ಡೆಕರ ಮಂಜಪ್ಪನವರು ಅಧಿವೇಶನದಲ್ಲಿಯೆ ವೀರಶೈವ ಪರಿಷತ್ತು ಸಂಘಟಿಸಿ ಸತ್ಯಾಗ್ರಹಿ





ಬಸವೇಶ್ವರ ಚಿಕ್ಕ ಪುಸ್ತಿಕೆಯನ್ನು ಕನ್ನಡ, ಹಿಂದಿ, ಮರಾಠಿ ಭಾಷೆಯಲ್ಲಿ ಮುದ್ರಿಸಿ ಪುಕ್ಕಟೆ ವಿತರಿಸಿದರು. 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣವರು ಅಸ್ಪ್ರಶ್ಯತಾ ನಿವಾರಣೆ ಮಾಡಲು ಹೋರಾಟ ಮಾಡಿದ್ದನ್ನು ಗಾಂಧೀಜಿಯವರಿಗೆ ವಿವರಿಸಿದರು. ಗಾಂಧೀಜಿಯವರು, ಮಹಾತ್ಮ ಬಸವಣ್ಣನವರು 800 ವರ್ಷಗಳ ಹಿಂದೆ ನಾವು ಕೈಗೊಳ್ಳುವ ಕಾರ್ಯಗಳನ್ನು ಅನುಷ್ಠಾನಗೊಳಿಸಿದ್ದಾರೆ. ಆದರೆ ನಾವು ಮಾಡಿರುವುದು ಸ್ವಲ್ಪವೇ ಸ್ವಲ್ಪ ಎಂದು ನುಡಿದರು. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಬೇಟಗೇರಿ ಕೃಷ್ಣಶರ್ಮರ 'ಏನಿತು ಇನಿದು ಈ ಕನ್ನಡ ನುಡಿಯು' ಎಂಬ ಗೀತೆಗಳನ್ನು ಗಾನ ವಿಧೂಷಿ ಗಂಗುಬಾಯಿ ಹಾನಗಲ್ ತಮ್ಮ ಚಿಕ್ಕ ವಯಸ್ಸಿನಲ್ಲಿ ಅಧಿವೇಶನದ ವೇದಿಕೆಯಲ್ಲಿ ಸುಶ್ರಾವ್ಯವಾಗಿ ಹಾಡಿದರು. ಬೆಳಗಾವಿ ಅಧಿವೇಶನಕ್ಕೆ ದೇಶದ ನಾನಾ ಭಾಗಗಳಿಂದ 1844 ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಾತ್ಮ ಗಾಂಧಿಜಿಯವರ 4 ನೆಯ ಭೇಟಿ ಎಂದರೆ ಖಾದಿ ಪ್ರಚಾರಕ್ಕಾಗಿ 1927ರ ಮಾರ್ಚ್ ಕೊನೆಯ ವಾರದಲ್ಲಿ ನಿಪ್ಪಾಣಿಗೆ ಬಂದಿದ್ದು. ಪುನಾದಿಂದ ಗಾಂಧೀಜಿಯವರು ಬರಬೇಕಾದರೆ ಅನಾರೋಗ್ಯ ಉಂಟಾಗಿ ಆಶಕ್ತತೆ, ತಲೆ ತಿರುಗು ಕಾಣಿಸಿಕೊಂಡಿತು. ಅವರ ಜೊತೆಗಿದ್ದ ರಾಜಾಜಿ, ಗಂಗಾಧರರಾವ ದೇಶಪಾಂಡೆಯವರು ತೀರ್ವ ಚಿಂತೆಗೊಳಗಾದರು. ಶ್ರೀ ಮೂಲಜಿ ಮನೆಯಲ್ಲಿ ಮಹಾತ್ಮಾಜಿಯವರಿಗೆ ವಿಶ್ರಾಂತಿಗಾಗಿ ವ್ಯವಸ್ಥೆ ಮಾಡಿ ಮಿರಜದಿಂದ ತಜ್ಞ ಡಾಕ್ಟರರಾದ ವಾನ್‌ಲಿಸ್‌ರನ್ನು ಸ್ವತಃ ಗಂಗಾಧರರಾಯರೆ ಕರೆದುಕೊಂಡು ಬಂದರು. ವಿಜಾಪೂರದಿಂದ ಡಾ: ಅಂಕಲೇಕರ ಡಾ: ಕೊಕಟನೂರ ನಿಪ್ಪಾಣಿಗೆ ಬಂದು ರಕ್ತದೊತ್ತಡ ಪರೀಕ್ಷಿಸಿ ಇದು ಲಕ್ವಾಗೆ ಸಂಬಂಧಿಸಿದ ರೋಗವಾಗಿದ್ದು ಸಂಪೂರ್ಣ ವಿಶ್ರಾಂತಿ ಪಡೆಯಲು ತಿಳಿಸಿದರು. ಗಾಂಧೀಜಿಯವರಿಗೆ ನೂಲುವ ಸಮಯವಾಯಿತು "ನಾನು ನೂಲುತ್ತೇನೆ ನನ್ನ ಚರಕ ಕೊಡಿ" ಎಂದರು. ಡಾಕ್ಟರಗಳು ವಿಶ್ರಾಂತಿಗೆ ಎಷ್ಟೆ ವಿನಂತಿಸಿದರು ನೂಲು ತೆಗೆದೆ ಬಿಟ್ಟರು. ನಂತರ ಡಾಕ್ಟಗಳು ಇವರ ರಕ್ತದೊತ್ತಡ ನೋಡಿದಾಗ ರಕ್ತದೊತ್ತಡ ಸರಿಯಾಗಿಯೇ ಇತ್ತು. ಇದು ಗಾಂಧೀಜಿಯವರ ಶ್ರಮದ ಮೇಲಿನ ಬದ್ಧತೆ ತೋರಿಸಿಕೊಡುತ್ತದೆ. ರಕ್ತದೊತ್ತಡ ನೋಡಿದ ಡಾ: ವಾನ್‌ಲಿಸ್‌ರನ್ನು ಗಾಂಧೀಜಿಯವರು ನಗುತ್ತ ನೋಡಿ "ನೀವು ಡಾಕ್ಟರರು ಅಲ್ಲ, ಯಂತ್ರದ ಗುಲಾಮ"ರೆಂದರು. 4 ದಿನ ನಿಪ್ಪಾಣಿಯಲ್ಲಿ ವಿಶ್ರಾಂತಿ ಪಡೆದರು. ನಿಪ್ಪಾಣಿಯಿಂದ ಹೊರಡುವ ದಿನ ಏರ್ಪಾಡಾಗಿದ್ದ ಸಭೆಯನ್ನು ರದ್ದುಗೊಳಿಸಿ ಸಾರ್ವಜನಿಕರಿಗೆ ಕೆಲವು ಸಮಯ ದರ್ಶನ ನೀಡಿ, ನಿಪ್ಪಾಣಿಯ ಜನತೆ ಖಾದಿ ಪ್ರಚಾರಕ್ಕೆ ಕೊಡ ಮಾಡಿದ ರೂ: 8457/–ಗಳನ್ನು ನಿಧಿಗಾಗಿ ಸ್ವೀಕರಿಸಿದರು.

ಬೆಳಗಾವಿ ಜಿಲ್ಲೆಗೆ ಗಾಂಧೀಜಿಯವರ 5ನೆಯ ಭೇಟಿ ಹರಿಜನ ಪ್ರವಾಸಕ್ಕಾಗಿ. ಮಾರ್ಚ್ 4, 1934ರಲ್ಲಿ ಹುಬ್ಬಳ್ಳಿಯಿಂದ ಹೊರಟು ಸವದತ್ತಿ ತಾಲೂಕಿನ ಹಿರೇ ಉಳ್ಳಿಗೇರಿಗೆ ಭೇಟಿಯಿತ್ತರು. ಹಿರೇ ಉಳ್ಳಿಗೇರಿಯಲ್ಲಿಯ ಅಸ್ಪೃಶ್ಯರು ಮಹಾತ್ಮಾಜಿ ಪ್ರಭಾವದಿಂದ ಕುಡಿತ, ಮಾಂಸಾಹಾರದಿಂದ ದೂರಾದರು. ಸವರ್ಣೀಯರು ಅಸ್ಪೃಶ್ಯರು ಒಂದಾದರು. ಹಿರೇಉಳ್ಳಿಗೇರಿ ದೇವಾಲಯಗಳು ಅಸ್ಪೃಶ್ಯರಿಗೆ ಮುಕ್ತವಾದವು. ಬೈಲಹೊಂಗಲ, ಸಂಪಗಾಂವ ಹಿರೇಬಾಗೇವಾಡಿಗಳಲ್ಲಿ 'ಅಸ್ಪೃಶ್ಯತೆ ಜನತೆಗೆ ಒಂದು ಶಾಪ' ಎಂದು ತಮ್ಮ ಭಾಷಣಗಳಲ್ಲಿ ಒತ್ತಿ ಹೇಳಿದರು. ಹಿರಿಯ ಸ್ವಾತಂತ್ರ್ಯಯೋಧ ಶ್ರೀ ಐ. ಡಿ. ಶಾಸ್ತ್ರಿ ಹಿರೇಬಾಗೇವಾಡಿ ಭೇಟಿಯನ್ನು ಹೀಗೆ ದಾಖಲಿಸುತ್ತಾರೆ. ರವಿವಾರ ದಿನಾಂಕ 04–03–1934 ರಂದು ರಾತ್ರಿ 8:00 ಗಂಟೆಗೆ ಸಂಪಗಾಂವಿಯಿಂದ ಬಾಗೇವಾಡಿಗೆ ಆಗಮಿಸಿದರು. ಅವರ ಜೊತೆಯಲ್ಲಿ ಗಂಗಾಧರರಾವ್ ದೇಶಪಾಂಡೆ, ಠಕ್ಕರಬಾಪ್ಪಾ, ಸರ್ದಾರ ವೀರನಗೌಡರಿದ್ದರು. ನಾನು ಭಿನ್ನವತ್ತಳೆ ಅರ್ಪಿಸಿ ಸಾರ್ವಜನಿಕರಿಂದ ಕೂಡಿದ ಹರಿಜನ ನಿಧಿಗೆ 150/– ರೂ. ಬಿಹಾರ ಸಂತ್ರಸ್ತ ನಿಧಿಗೆ 75/–ರೂ ನೀಡಿದೆ. ಸಭೆಯಲ್ಲಿ 5000ಕ್ಕಿಂತ ಹೆಚ್ಚು ಜನ ಗಾಂಧಿಜಿಯವರನ್ನು ಕಾಣಲು ಬಂದಿದ್ದರು. ಬೆಳಗಾವಿಯಲ್ಲಿ ವಸತಿ ಮಾಡಿ ಸೋಮವಾರ 05–03–1934ರಂದು ಮುಂಜಾನೆ ಬೆಳಗಾವಿಯ ಮಿಷನ ಸ್ಕೂಲ್



ಕಂಪೌಂಡಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿ ಹರಿಜನ ನಿಧಿಗೆ ಕಾಣಿಕೆ ಪಡೆದರು. ಯಮಕನಮರಡಿಯಲ್ಲಿ ಅಸ್ಪೃಶ್ಯರ ಜೊತೆ ದೇವಾಲಯ ಪ್ರವೇಶಿಸಿ, ಹುಕ್ಕೇರಿಗೆ ತೆರಳಿದ ಮಹಾತ್ಮಾಜಿಯವರು ಅಸ್ಪೃಶ್ಯರ ಕೂಡಾ ಲಿಂಗಾಯತ ಮಠಗಳು ಮತ್ತು ಹನುಮಂತ ದೇವರ ಗುಡಿ ಪ್ರವೇಶಿಸಿ, ಐತಿಹಾಸಿಕ ಕಾರಂಜಿ ಬಾವಿಯನ್ನು ಹರಿಜನರಿಗೆ ಮುಕ್ತಗೊಳಿಸಿದರು. ನಿಪ್ಪಾಣಿಗೆ ತೆರಳಿದ ಮಹಾತ್ಮಾಜಿಯವರು ಹರಿಜನಕೇರಿ, ಹರಿಜನ ವಸತಿ ಗೃಹ, ರಾಷ್ಟ್ರೀಯ ಶಾಲೆ, ವರ್ತಕರ ಸಂಘಕ್ಕೆ ಭೇಟಿಯಿತ್ತರು. ಮತ್ತು ಹರಿಜನ ನಿಧಿಗೆ ಕಾಣಿಕೆ ಸ್ವೀಕರಿಸಿದರು. ನವಲಿಹಾಳದಲ್ಲಿ ಊಟಮಾಡಿ ವಸತಿಗಾಗಿ ಅಥಣಿ ತಾಲೂಕಿನ ಶೇಡಬಾಳಕ್ಕೆ ತೆರಳಿದರು.

ಶೇಡಬಾಳದಲ್ಲಿ ಗಾಂಧೀಜಿಯವರ ವಸತಿಯ ವಿಚಾರ ತಿಳಿದ ಜನ ಮಂಗಳವಾರ 06-03-1934 ರಂದು ಮುಂಜಾನೆ ಸಭೆಯನ್ನೇರ್ಪಡಿಸಿದರು. 'ಅಸ್ಪೃಶ್ಯತೆ ಮಹಾಪಾಪ ಅದರಿಂದ ಮುಕ್ತರಾಗಬೇಕು. 'ಹರಿಜನ ನಿಧಿಗೆ ಕಾಣಿಕೆ ನೀಡಿ, ನಿಮ್ಮ ಬಿಡಿಗಾಸು ಸಹ ಹರಿಜನರಿಗೆ ಅಮೂಲ್ಯವಾಗುತ್ತದೆ' ಎಂದು ವಿನಂತಿಸಿದರು. ಜನಸಮೂಹ ಕಾಣಿಕೆ ನೀಡುವಲ್ಲಿ ಹಿಂದೆ ಬೀಳಲಿಲ್ಲ. ಅಥಣಿಗೆ ಹೊರಟಾಗ ಮಂಗಸೂಳಿಯ ಜನ ಅಭೂತಪೂರ್ವ ಸ್ವಾಗತ ನೀಡಿ ನಿಧಿ ಅರ್ಪಿಸಿದರು.

ಗಾಂಧೀಜಿಯವರ 6ನೆಯ ಮತ್ತು ಕೊನೆಯ ಭೇಟಿ ಹುದಲಿಯಲ್ಲಿ 1937ರ ಏಪ್ರಿಲ್ 17 ರಿಂದ 23ರ ವರೆಗೆ ಒಂದು ವಾರಕಾಲ ಜರುಗಿದ 'ಗಾಂಧೀ ಸೇವಾ ಸಂಘ' ಸಮ್ಮೇಳನ. ಈ ಸಮ್ಮೇಳನವು ಸಹ ಭಾರತದ ಇತಿಹಾಸದಲ್ಲಿ ಚಾರಿತ್ರಿಕ ದಾಖಲೆಯಾಗಿದೆ. ಹುದಲಿಯ ದೇಶಭಕ್ತ ಗಂಗಾಧರರಾವ ದೇಶಪಾಂಡೆಯವರು ಸ್ಥಾಪಿಸಿದ ಕುಮರಿ ಆಶ್ರಮದ ಆಶ್ರಯದಲ್ಲಿ ಗಾಂಧಿ ಸೇವಾ ಸಮ್ಮೇಳನ ಏರ್ಪಡಿಸಲಾಗಿತ್ತು.

ಭಾರತದ ಸಾಬರಮತಿ, ಸದಾಕತ್, ಬಾರ್ಡೋಲಿ, ತ್ರಿಚನಗೂಡು, ಸೇವಾಪೂರಿ ಮತ್ತು ಕುಮರಿ ಆಶ್ರಮಗಳು ಗಾಂಧಿ ತತ್ವಗಳನ್ನು ಸಾರುವ ಕೇಂದ್ರಗಳು ದೇಶಭಕ್ತ ಗಂಗಾಧರರಾವ ದೇಶಪಾಂಡೆಯವರು ಸ್ವಾಗತಾಧ್ಯಕ್ಷರಾಗಿದ್ದರು. ಸಮ್ಮೇಳನದಲ್ಲಿ ಭಾಗವಹಿಸಲು ಗಾಂಧೀಜಿಯವರು ರೈಲಿನಲ್ಲಿ ಮಿರಜದಿಂದ ಬೆಳಗ್ಗೆ ಮಹಾದೇವ ದೇಸಾಯಿ, ಕೆ. ಎಫ್. ಪಾಟೀಲರ ಜೊತೆಯಲ್ಲಿ ಸುಲಧಾಳ ನಿಲ್ದಾಣಕ್ಕಾಗಮಿಸಿದರು. ಯಾವುದೇ

> "ನಿಮ್ಮ ಸದ್ಭಾವನೆಯಲ್ಲಿ
> ದೇಶದ ಯಶಸ್ಸು ಅಡಗಿದೆ. ನಮ್ಮ ಹಿಂದೂ
> ಹೆಂಗಸರು ಮುಸ್ಲಿಂರನ್ನು ಸಹೋದರರೆಂದು
> ಎಲ್ಲಿಯವರೆಗೆ ಭಾವಿಸುದಿಲ್ಲವೂ ಅಲ್ಲಿಯವರೆಗೆ
> ನಮ್ಮ ದುರಾದೃಷ್ಟ ನೀಗದು.
> ನಿಮ್ಮ ದೇಣಿಗೆಯಿಂದ ರಾಷ್ಟ್ರೀಯ
> ವಿದ್ಯಾಭ್ಯಾಸ ಮತ್ತು ಸ್ವದೇಶಿ
> ಪ್ರಚಾರಕ್ಕೆ ಅನುಕೂಲವಾಗಲಿ"

ಸ್ವಾಗತ ಸಮಾರಂಭವನ್ನು ಬಯಸದೇ ಸರಸರನೆ ಸುಲಧಾಳ ಗ್ರಾಮದಲ್ಲಿ ಹಾಯ್ದು ಹುದಲಿಯಲ್ಲಿಯ ತಮ್ಮ ಕುಟೀರ ತಲುಪಿದರು.

ನೆಹರುರವರನ್ನು ಹೊರತು ಪಡಿಸಿ ದೇಶದ ನಾಯಕರೆಲ್ಲಾ ಸಮ್ಮೇಳನಕ್ಕೆ ಆಗಮಿಸಿದ್ದರು. ವಲ್ಲಭ ಭಾಯಿ ಪಟೇಲ, ರಾಜಾಜಿ, ಪಟ್ಟಾಭಿ ಸೀತಾರಾಮಯ್ಯಾ, ಸರೋಜಿನಿ ನಾಯ್ಡು, ಶೌಕತ ಅಲಿ, ಮಹ್ಮದ ಅಲಿ, ಗಡಿನಾಡ ಗಾಂಧಿ ಅಬ್ದುಲ್ ಗಫಾರಖಾನ, ಕುಮಾರಿ ಇಂದಿರಾಗಾಂಧಿ ಮುಂತಾದವರು ಉಪಸ್ಥಿತಿ ಎದ್ದು ಕಾಣುತ್ತಿತ್ತು. ಗಂಗಾಧರರಾವ ದೇಶಪಾಂಡೆಯವರ ಸ್ವಾಗತ ಭಾಷಣದಿಂದ ಪ್ರಾರಂಭವಾದ ಸಮ್ಮೇಳನ ಮಶ್ರೂವಾಲಾರವರ ಸರ್ವಾಧ್ಯಕ್ಷತೆಯಲ್ಲಿ 20 ನಿರ್ಣಯಗಳು ಮಂಡನೆಯಾಗಿ ಚರ್ಚಿಸಲ್ಪಟ್ಟವು.

10 ಸಾವಿರ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಮೊದಲನೆಯ ದಿನವೇ ಅಕಾಲಿಕ ಭಾರಿ ಮಳೆಯಾಗಿ 2 ಸಾವಿರ ಜನಸಂಖ್ಯೆಯುಳ್ಳ ಹುದಲಿ ಗ್ರಾಮದಲ್ಲಿ ವಸತಿ ವ್ಯವಸ್ಥೆ ಕಲ್ಪಿಸುವುದೇ ಸಂಘಟಕರಿಗೆ ತಲೆನೋವಾಗಿ ಪರಿಣಮಿಸಿತು. ಮಹಾತ್ಮಾ ಗಾಂಧೀಜಿಯವರು ಮಳೆಯಲ್ಲಿಯೇ ಗುಡ್ಡದ ಓರೆಯಲ್ಲಿ 2 ಮೈಲಿ ನಡೆದು ಕುಮರಿ ಆಶ್ರಮ ಸೇರಬೇಕಾಯಿತು. ಗಂಗಾಧರರಾವ ದೇಶಪಾಂಡೆಯವರು ರಾತ್ರಿಯಲ್ಲಾ ಕುದುರೆಯನ್ನೇರಿ ವಸತಿ ವ್ಯವಸ್ಥೆ ಮಾಡಲು ಹೆಣಗಾಡಿದರು. ಹುದಲಿ ಗ್ರಾಮ 10 ಸಾವಿರ ಪ್ರತಿನಿಧಿಗಳಿಗೆ ಆತಿಥ್ಯ ನೀಡಲು ಕಂಕಣಬದ್ಧವಾಯಿತು. 7 ದಿನಗಳ ಕಾರ್ಯಕ್ರಮಗಳು ಕ್ರಮಬದ್ಧವಾಗಿ ಜರುಗಿದವು.

ಕೊನೆಯ ದಿನ 23-04-1937ರಂದು ಮಹಾತ್ಮಾಜಿಯವರು ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡುತ್ತಾ 'ಭಾರತೀಯರು ಕೌನ್ಸಿಲ್ ಪ್ರವೇಶ ಮಾಡಬೇಕು' ಎಂಬ ಸರ್ವಾನುಮತದ ನಿರ್ಣಯ ಅಂಗೀಕಾರವಾಗಿದೆ ಎಂದು ಸಾರಿದರು. ಈ ನಿರ್ಣಯ ಭಾರತ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಮಹತ್ವದ ಘಟ್ಟವಾಯಿತು. ಮುಂದೆ ಭಾರತೀಯರು ಕೌನ್ಸಿಲ್ ಪ್ರವೇಶಿಸಿ ಆಡಳಿತದಲ್ಲಿ ಪಾಲುದಾರರಾದರು. ಭಾರತೀಯರ ಆಡಳಿತಕ್ಕೆ ನಾಂದಿಯಾಯಿತು.

ಅಂತೂ ಬೆಳಗಾವಿ ಜಿಲ್ಲೆಯ ಮಹಾತ್ಮಾಜಿಯವರ ಆರೂ ಭೇಟಿಗಳು ಮಹತ್ವಪೂರ್ಣ ಮೈಲಿಗಲ್ಲುಗಳಾಗಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರಕ ಶಕ್ತಿಗಳಾದವು. ■

# ಬಿಸರಳ್ಳಿಯಲ್ಲಿದೆ
## ಗಾಂಧೀಜಿ ಚಿತಾಭಸ್ಮದ ಸಮಾಧಿ




**ಕೊ**ಪ್ಪಳ ತಾಲೂಕಿನ ಬಿಸರಳ್ಳಿ ಗ್ರಾಮ ನಾಡಿಗೆ ಮಾದರಿ ಎಂದರೂ ತಪ್ಪಾಗಲಿಕ್ಕಿಲ್ಲ. ಇಡೀ ಹೈದರಾಬಾದ್ ಪ್ರಾಂತ್ಯದ ಜಿಲ್ಲೆಗಳಲ್ಲಿ ಬಿಸರಳ್ಳಿ ಗ್ರಾಮದಲ್ಲಿ ಮಾತ್ರ, ಈ ದೇಶದ ಮಹಾನ್ ಚೇತನ, ಭಾರತದ ಭವಿಷ್ಯ ಬರೆದ ಮಹಾತ್ಮಾ ಗಾಂಧೀಜಿ ಅವರ ಚಿತಾಭಸ್ಮ ತಂದು ಗ್ರಾಮದಲ್ಲಿ ಅವರ ಸವಿ ನೆನಪಿಗಾಗಿ ಸಮಾಧಿ ನಿರ್ಮಿಸಲಾಗಿದೆ. ಆ ಮೂಲಕ ದೇಶ ಭಕ್ತಿಯನ್ನು ತೋರಿದೆ.

ಪುಟ್ಟ ಗ್ರಾಮ ಬಿಸರಳ್ಳಿ ಈ ನಾಡಿಗೆ ತನ್ನದೆ ಆದ ಕೊಡುಗೆಯನ್ನು ನೀಡಿದೆ. ಸ್ವಾತಂತ್ರ್ಯ ಹೋರಾಟಗಾರರು, ಸಾಹಿತಿಗಳು, ಇತಿಹಾಸಕಾರರು, ಕಲಾವಿದರು, ಕಥೆಗಾರರು ಈ ಗ್ರಾಮದಲ್ಲಿ ಜನಿಸಿದ್ದಾರೆ. ಸ್ವಾತಂತ್ರ್ಯ ಹೋರಾಟ ಹಾಗೂ ಹೈದರಾಬಾದ್ ವಿಮೋಚನಾ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಆಂಗ್ಲರ ಹಾಗೂ ಹೈದರಾಬಾದ್ ನಿಜಾಮನ ವಿರುದ್ಧ ಸಡ್ಡು ಹೊಡೆದ ಗಂಡೆದೆಯ ಗುಂಡಿಗೆಯ, 1947 ಆಗಸ್ಟ್ 15ರಂದು ಕೊಪ್ಪಳದ ಕೋಟೆಯ ಮೇಲೆ ಮೊಟ್ಟಮೊದಲ ತ್ರಿವರ್ಣ ಧ್ವಜ ಹಾರಿಸಿದ ಪಂಚಾಕ್ಷರಿ ಹಿರೇಮಠ ಹಾಗೂ ಆಗಿನ ನಿಜಾಮನ ಆಡಳಿತದ ಜಿಲ್ಲಾ ಕಲೆಕ್ಟರ್ ಕಚೇರಿ ಮೇಲೆ ದೇಶದ ಧ್ವಜ ಹಾರಿಸಿ ಇದು ಗಂಡು ಮೆಟ್ಟಿದ ನಾಡು ಎಂಬುದನ್ನು ತೋರಿಸಿಕೊಟ್ಟ ಶರಣಬಸವರಾಜ ಅವರು ಇದೇ ಬಿಸರಳ್ಳಿ ಗ್ರಾಮದವರು. ಇವತ್ತಿಗೂ ಅವರು ನಮ್ಮೊಂದಿಗಿದ್ದಾರೆ. ಸಾಹಿತಿ ಎಚ್.ಎಸ್.ಪಾಟೀಲ್ ಕೂಡ ಇದೇ ಗ್ರಾಮದಲ್ಲಿ ಜನಿಸಿದ್ದಾರೆ.

**ಬಿಸರಳ್ಳಿಯಲ್ಲಿ ಗಾಂಧಿ ಸಮಾಧಿ:**

ಗಾಂಧೀಜಿ ಅವರ ಬಗ್ಗೆ ಎಲ್ಲರಿಗೂ ಗೊತ್ತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಾಳತ್ವ ವಹಿಸಿದ ಗಾಂಧೀಜಿ ಅವರು ಶಾಂತಿ ಹಾಗೂ ಶಿಸ್ತನ್ನು ಮೈಗೂಡಿಸಿಕೊಂಡವರು. ಪರಮ ಅಹಿಂಸಾವಾದಿಯಾದ ಅವರು ಶಾಂತಿಯ ಹೋರಾಟದಿಂದಲೇ ಬ್ರಿಟೀಷರಿಂದ ದೇಶವನ್ನು ವಿಮುಕ್ತಿಗೊಳಿಸಿದರು. ಆದರೆ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಕೆಲವೇ ತಿಂಗಳಲ್ಲಿ (1948 ಜನವರಿ 30ರಂದು) ಗೋಡ್ಸೆನ ಗುಂಡಿಗೆ ಬಲಿಯಾದರು.

ಸುದ್ದಿ ತಿಳಿದ ದೇಶದ ಕೋಟ್ಯಾಂತರ ಜನ ಬೆಚ್ಚಿಬಿದ್ದರು. ಇತ್ತ ಹುಬ್ಬಳ್ಳಿಯ ಸ್ವಾತಂತ್ರ್ಯ ಹೋರಾಟಗಾರ ಗಾಂಧೀಜಿಯ ನಿಕಟವರ್ತಿ ಸರ್ದಾರ್ ವೀರನಗೌಡರು ಗಾಂಧೀಜಿಯ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿ ಅವರ ಚಿತಾಭಸ್ಮವನ್ನು ಹುಬ್ಬಳ್ಳಿಗೆ ತಂದಿದ್ದರು. ಶರಣಬಸವರಾಜ ಬಿಸರಳ್ಳಿ ಹಾಗೂ ಪಂಚಾಕ್ಷರಿ ಹಿರೇಮಠ ಅವರಿಗೆ ಸರ್ದಾರ್ ವೀರನಗೌಡರ ಪರಿಚಯವಿತ್ತು. ಜತೆಗೆ ಉತ್ತಮ ಒಡನಾಟವಿತ್ತು. ಸರ್ದಾರ್ ವೀರನಗೌಡರು ಗಾಂಧೀಜಿಯವರ ಚಿತಾಭಸ್ಮ ತಂದಿರುವ ವಿಷಯ ತಿಳಿದ ಕೂಡಲೆ ಅವರನ್ನು ಸಂಪರ್ಕಿಸಿ ಚಿತಾಭಸ್ಮ ಪಡೆದರು.

1948 ಅಕ್ಟೋಬರ್ 2ರ ಗಾಂಧೀಜಿ ಜನ್ಮದಿನದಂದು ಬಿಸರಳ್ಳಿಯಲ್ಲಿ ಅವರ ಚಿತಾಭಸ್ಮ ಇಟ್ಟು ಗ್ರಾಮದ ಹಿರಿಯರೆಲ್ಲಾ ಸೇರಿ ಕಟ್ಟೆ ಕಟ್ಟಿದರು. ಅದನ್ನು ಗಾಂಧೀಜಿ ಸಮಾಧಿ ಎಂಬ

ಕುಬೇರ ಮಜ್ಜಿಗಿ

ಭಾವನೆಯೊಂದಿಗೆ ಸಂಸ್ಕಾರಗಳನ್ನೂ ನೆರವೇರಿಸಿದರು. ಬಿಸರಳ್ಳಿಯಲ್ಲಿ ನಿರ್ಮಾಣವಾದ ಗಾಂಧೀಜಿಯ ಸಮಾಧಿ ಕಟ್ಟೆ ದೇಶದಲ್ಲೇ ಪ್ರಥಮ ಎಂದು ಸ್ವಾತಂತ್ರ್ಯ ಹೋರಾಟಗಾರ ಶರಣಬಸವರಾಜ ಬಿಸರಳ್ಳಿ ಅವರು ಹೆಮ್ಮೆಯಿಂದ ಹೇಳುತ್ತಾರೆ.

**ಗಾಂಧೀಜಿ ಪ್ರತಿಮೆ:** 1948ರಲ್ಲಿ ಗಾಂಧೀಜಿ ಸಮಾಧಿ ಸ್ಥಾಪನೆಯಾಯಿತು. ನಂತರ ಆ ಸ್ಥಳದಲ್ಲಿ ಗಾಂಧೀಜಿ ಪ್ರತಿಮೆ ಮಾಡಿದರೆ ಚನ್ನಾಗಿರುತ್ತದೆ ಎಂದು ಯೋಚಿಸಿ 1991ರಲ್ಲಿ ಬಿಸರಳ್ಳಿಯ ಮಂಡಲ ಪಂಚಾಯತಿಯವರು ಸುಂದರವಾದ ಪ್ರತಿಮೆ ನಿರ್ಮಿಸಿದರು. ಕೊಪ್ಪಳ ಗವಿಮಠದ ಆಗಿನ ಶ್ರೀಗಳಾದ ಶಿವಶಾಂತವೀರ ಮಹಾಸ್ವಾಮೀಜಿ ಅಧ್ಯಕ್ಷತೆಯಲ್ಲಿ ಶಾಸಕ ಮಲ್ಲಿಕಾರ್ಜುನ ದಿವಟರ ಉದ್ಘಾಟಿಸಿದರು. ಹಲವು ಮಠಾದೀಶರು ಇದಕ್ಕೆ ಸಾಕ್ಷಿಯಾದರು.

**ಗೌರವ ಹೆಚ್ಚಿಸಿದೆ:** ರಾಷ್ಟ್ರಪಿತನ ಚಿತಾಭಸ್ಮ ತಂದು ಅವರ ಸವಿನೆನಪಿಗಾಗಿ ಸಮಾಧಿ ನಿರ್ಮಿಸಿದ್ದು ಬಿಸರಳ್ಳಿ ಗ್ರಾಮದ ಗೌರವವನ್ನು ಹೆಚ್ಚಿಸಿದೆ ಎನ್ನುತ್ತಾರೆ ಇದೆ ಗ್ರಾಮದವರಾದ ಹಿರಿಯ ಸಾಹಿತಿ ಎಚ್.ಎಸ್.ಪಾಟೀಲ್ ಅವರು. ಹಿರೇಸಿಂದೋಗಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಧ್ಯಪಕ ಹನುಂತಪ್ಪ ಅಂಡಗಿ ಅವರು, ನಮ್ಮ ಗ್ರಾಮದಲ್ಲಿ ಮಹಾತ್ಮನ ಚಿತಾಭಸ್ಮ ಪಡೆದು ಸಮಾಧಿ ನಿರ್ಮಿಸಿದ ಆಗಿನ ಹಿರಿಯರ ಕಾರ್ಯ ನಿಜಕ್ಕೂ ಶ್ಲಾಘನೀಯ ಎನ್ನುತ್ತಾರೆ. ■

## ಶಾಶ್ವತ ಅರ್ಥಶಾಸ್ತ್ರಕ್ಕೆ

# ಗಾಂಧೀಜಿಯ ಸಲಹೆಗಳು



ಡಾ. ಸಂಗಮೇಶ ತಮ್ಮನಗೌಡ್ರ

ನಮ್ಮ ನಿತ್ಯ ಬದುಕಿಗೆ ಹಣ ಅವಶ್ಯ. ಹಣವೆಂದರೆ ರೂಪಾಯಿ, ನಾಣ್ಯ ಮಾತ್ರವಷ್ಟೇ ಅಲ್ಲ, ಕಾಳು–ಕಡಿ, ಬೆಳ್ಳಿ–ಬಂಗಾರ, ವಜ್ರ–ವೈಢೂರ್ಯ ಮುಂತಾದವುಗಳನ್ನು ಬಹುವರ್ಷಗಳಿಂದ ಪ್ರಾಚೀನರು ಪರಿಗಣಿಸುತ್ತಿದ್ದರು. ವಸ್ತುಗಳನ್ನು ತೂಕ ಮಾಡುವ, ದ್ರವ್ಯಗಳನ್ನು ಮಾಪಿನಲ್ಲಿ ಅಳೆಯುವ, ಹಣವನ್ನು ರೂಪಾಯಿ–ನಾಣ್ಯಗಳಲ್ಲಿ ಎಣಿಸುವ ಪದ್ಧತಿಯು ಕಾಲಕಾಲಾಂತರಗಳಿಂದ ಬಳಕೆಯಲ್ಲಿದೆ.

**ಗಾಂಧೀಜಿ ನೆಲೆಯ ಗ್ರಾಮ ಬದುಕಿನ ಚಿಂತನೆ:**

ಗುಡಿ ಕೈಗಾರಿಕೆಗಳು ಬದುಕಿದರೆ ಗ್ರಾಮದ ಆರ್ಥಿಕತೆಯು ಚೇತರಿಸಿಕೊಳ್ಳತ್ತದೆ. ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು, ನೂಲುವುದು, ನೇಯುವುದು, ಕಸೂತಿ ಹಾಕುವುದು, ಕುಂಬಾರಿಕೆ, ಚಮ್ಮಾರಿಕೆ ಮುಂತಾದವುಗಳ ಕಸುಬುಗಾರಿಕೆ ನಡೆದಾಗ ಗ್ರಾಮ ಬದುಕು ಅತ್ಯಂತ ಸಮೃದ್ಧ ಸ್ಥಿತಿಯನ್ನು ತಲುಪುತ್ತದೆಂಬ ಚಿಂತನೆಯು ಗಾಂಧೀಜಿಯವರದಾಗಿತ್ತು.

**ಪ್ರತಿಯೊಂದು ಜೀವಿಯದೂ ಪರಾವಲಂಬಿ ಬದುಕು ಎಂದ ಗಾಂಧೀಜಿ :**

ಈ ಬ್ರಹ್ಮಾಂಡದಲ್ಲಿ ವಾಸಿಸುವ ಎಂಭತ್ತಾರು ಲಕ್ಷ ಜೀವರಾಶಿಗಳು ಪರಾವಲಂಬಿಯಾಗಿಯೇ ಜೀವಿಸುತ್ತವೆ. ಒಂದೊಂದು ಜೀವಿಯದು ಒಂದೊಂದು ತರಹದ ವೈವಿಧ್ಯತೆಯನ್ನು ಹೊಂದಿದ ಬದುಕಿನ ಪದ್ಧತಿಯಾಗಿದೆ. ಸ್ವತಂತ್ರ ಸ್ವಾವಲಂಬಿತನ ವೆಂಬುದು ಬರೀ ಪೊಳ್ಳು ವಿಚಾರವೆಂದು ಗಾಂಧೀಜಿ ಅಭಿಪ್ರಾಯಪಡುತ್ತಾರೆ.

**ಯಾವುದನ್ನು ತಿನ್ನಬೇಕು,ಎಂದು ಹೇಳಿದ ಗಾಂಧೀಜಿ:**

ಪ್ರಕೃತಿ ನಮಗೆ ಯಥೇಚ್ಚವಾಗಿ ಸೇಬು, ಖರ್ಜೂರ, ದ್ರಾಕ್ಷಿ, ನಾನಾ ಬಗೆಯ ಫಲಗಳನ್ನು ಕೊಡುತ್ತದೆ. ಆ ಹಣ್ಣನ್ನು ಹಾಗೆಯೇ ತಿನ್ನದೇ ಮನುಷ್ಯ ಅವುಗಳನ್ನು ಹಿಂಡಿ ರಸ ತೆಗದು ಅದನ್ನು ಹುಳಿಯಿಸಿ ಮದ್ಯ, ದ್ರಾಕ್ಷಾರಸಗಳನ್ನು ಮಾಡಿ ಕುಡಿದು ಉಲ್ಲಾಸವನ್ನು ಪಡೆಯುತ್ತಾನೆ. ಇಲ್ಲಿಯೂ ಅಷ್ಟೇ ತನ್ನ ದಾರಿಬಿಟ್ಟು ನಡೆದವರಿಗೆ ಪ್ರಕೃತಿ ತೀವ್ರ ಶಿಕ್ಷೆ ವಿಧಿಸುತ್ತದೆ.

**ವ್ಯಕ್ತಿತ್ವ' ಎಂದರೇನು ? ಎಂಬ ಪ್ರಶ್ನೆಗೆ ಗಾಂಧೀಜಿಯ ಕಿವಿ ಮಾತು:**

ಮನುಷ್ಯ ಎಂಥವನು ಎಂಬುದು ಅವನು ಬಾಳಿನ ಬೆಲೆಗಳನ್ನು ಹೇಗೆ ಕಟ್ಟುತ್ತಾನೆ ಎಂಬುದನ್ನು ಅವಲಂಬಿಸಿದೆ. ತನ್ನ ಇಚ್ಚೆಯಂತೆ ಅವನು ಬೆಲೆ ಕಟ್ಟಬಹುದು. ಅಂದರೆ ಮನುಷ್ಯ ತಾನು ಎಂಥವನಾಗಬೇಕೆಂಬುದನ್ನು ತಾನೇ ಇಚ್ಚಿಸಿದ ಹಾಗೆ ಮನುಷ್ಯನ ಗುಣ ಶಕ್ತಿಗಳು ಅವನ ಬದುಕಿನ ರೀತಿಯಲ್ಲಿ ಪ್ರಕಟವಾಗುತ್ತವೆ. ಅದನ್ನೇ 'ವ್ಯಕ್ತಿತ್ವ' ಎನ್ನುತ್ತೇವೆ. ಮನುಷ್ಯನ ವಿಕಾಸಕ್ಕೆ ಆಧಾರವಾದುದು ಬಾಳು, ಅವನ ಸೃಷ್ಟಿ ಶಕ್ತಿಯ ಮೂಲಕ ಅವನು ವ್ಯಕ್ತನಾಗುವಂತೆ ಪ್ರಕಟವಾಗುವ ಅವಕಾಶ ಕೊಡುವುದು ಬಾಳು. ಆದುದರಿಂದಲೇ ಮನುಷ್ಯರು ಹೀಗೇ ಬದುಕುತ್ತಾರೆ, ಹೀಗೆ ಬದುಕಬೇಕು ಎಂಬುದು ಮುಖ್ಯ.

**ಉತ್ಪಾದಕರ ಸೇವೆ ಗ್ರಾಹಕರಿಗೆ ನ್ಯಾಯವಾಗಿ ಸಿಗಬೇಕೆಂದ ಗಾಂಧೀಜಿ :**

ಜೀವನಕ್ಕೆ ವಿಚಾರ ಕಡಿಮೆಯಾದಷ್ಟು ಮನುಷ್ಯ ಅಯೋಗ್ಯನಾಗುತ್ತಾನೆ. ಅವನ ರಚನೆಯೇ ಹಾಗಿದೆ, ಆದುದರಿಂದ ಗಿರಾಕಿಯ ಪರ ತಾನೇ ಎಲ್ಲಾ ವಿಚಾರವನ್ನು ಮಾಡುವ ಆಧುನಿಕ ಉತ್ಪಾದಕ ನಿಜವಾಗಿ ಗಿರಾಕಿಯನ್ನು ವಿಚಾರಹೀನನಾಗಿ ಮಾಡುತ್ತಿದ್ದಾನೆ. ತಾಯಿ ಕೂಡ ಮಗುವನು ಅಂಬೆಗಾಲಿಡಲು ಒಂದೆರಡು ಸಲ ಬೀಳಲು ಬಿಡುತ್ತಾಳೆ. ಮಗು ಒಂದು ಸಲವೂ ಬೀಳದಂತೆ ಯಾವಾಗಲೂ ತಾನೇ ಅದನ್ನು ಎತ್ತಿಕೊಂಡು ಓಡಾಡಿದರೆ ಕಡೆಗೆ ಆ ಮಗುವಿಗೆ ನೆಟ್ಟಗೆ ನಿಲ್ಲುವ ರೂಢಿಯೇ ಇಲ್ಲದಾಗಿ ಅಂಗವಿಕಲವಾಗುತ್ತದೆ. ಅದೇ ರೀತಿ ನಮ್ಮ ಗ್ರಾಹಕರ ಸ್ಥಿತಿ ಆಗಿದೆ. ಉತ್ಪಾದಕರ ಸೇವೆಯ ಲಾಭ ಗ್ರಾಹಕರಿಗೆ ಸಿಕ್ಕಾಗ ಮಾತ್ರ ಉತ್ಪಾದಕರ ಗೌರವವೂ ಹೆಚ್ಚುತ್ತದೆ.

**ದಪ್ಪ ಹಾಸಿಗೆಗಿಂತ ಚಾಪೆ ಉತ್ತಮವೆಂದ ಗಾಂಧೀಜಿ :**

ನಮ್ಮ ನಾಯಕರು ಮಂತ್ರಿಗಳು ಸರಳ ಜೀವನ ನಡೆಸಿದರೆ ಚಾಪೆಯ ಮೇಲೆ ಮಲಗಬಹುದು. ಜೊಂಡನ್ನು ಮೂವತ್ತೆರಡಾಗಿ ಸಣ್ಣಗೆ ಸೀಳಿ, ನಡುವೆ ರೇಶಿಮೆಯ ಹಾಸನ್ನು ಹೊಯ್ದರೆ ಮೆತ್ತನೆ ಚಾಪೆಯಾಗುತ್ತದೆ. ಈ ಚಾಪೆಗಳು ದೇಶೀ ಸ್ಥಳೀಯ ಉತ್ಪಾದನೆ. ಚಾಪೆಗಳು ಹಾಸಿಗೆ ಕ್ವಿಲ್ಟುಗಳಿಗಿಂತ ತಂಪು. ಈ ದೇಶಕ್ಕೆ ಬೇಕಾದ್ದು ಉಷ್ಣವಲ್ಲ ತಂಪು. ಎಲ್ಲರೂ ಚಾಪೆಯನ್ನು ಬಳಸುವುದರಿಂದ ಚಾಪೆ ಹೆಣೆಯುವವರಿಗೆ ಜೀವನ ನಡೆಯುತ್ತದೆ. ಅವರ ರಚನಾ ಸಾಮರ್ಥ್ಯ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ದಾರಿಯಾಗುತ್ತದೆ.



**ಬಂಗಾರದ ಗಣಿ ಸುಖ ಒಬ್ಬರಿಗೆ, ದುಡಿತ ಮತ್ತೊಬ್ಬರಿಗೆ :**

ಬಂಗಾರದ ಗಣಿ ಕೈಗಾರಿಕೆಯಲ್ಲಿ ಬಹಳ ಸುಖ ಐಶ್ವರ್ಯ ಇದೆ ಎಂದು ಎಲ್ಲರೂ ತಿಳಿಯುತ್ತಾರೆ. ಆದರೆ ದುಡಿತವೆಲ್ಲ ಒಂದು ವರ್ಗಕ್ಕೆ, ಸುಖವೆಲ್ಲ ಇನ್ನೊಂದು ವರ್ಗಕ್ಕೆ. ಆದ್ದರಿಂದ ಬಂಗಾರದ ಜಿಲ್ಲೆ ಎಲ್ಲಕ್ಕಿಂತಲೂ ಬಡಸೀಮೆಯಾಗಿದೆ. ಅಲ್ಲಿಯ ರೈತ ಬಹಳ ಬಡವನಾಗಿದ್ದಾನೆ. ಹಾಲು ಕರೆಯದೆ ಹಸುವನ್ನು ನೇಗಿಲಿಗೆ ಕಟ್ಟುವಷ್ಟು ಕಷ್ಟದಲ್ಲಿದಾನೆ. ಪ್ರಕೃತಿ ರೂಪಿಸಿದಂತೆ ಕೆಲಸದ ಪೂರ್ಣ ಲಾಭವನ್ನು ಪಡೆಯಬೇಕಾದರೆ ಕೆಲಸ ಪ್ರಕೃತಿಯ ಮೂಲರೂಪದ ಸರಳತೆಗೆ ಅನುಗುಣವಾಗಿರಬೇಕು. ಅದನ್ನು ವ್ಯರ್ಥವಾದ ಚಿಕ್ಕ ಚಿಕ್ಕ ಭಾಗಗಳಾಗಿ ಮಾಡಬಾರದು.

**ಕೆಲವು ಪದಾರ್ಥಗಳನ್ನು ಬೆಳೆಯಬಾರದೆಂದು ಹೇಳಿದ ಗಾಂಧೀಜಿ:**

ಹೊಗೆಸೊಪ್ಪು, ಸೆಣಬು, ಕಬ್ಬು, ಮುಂತಾದವು ಎರಡು ರೀತಿ ನಷ್ಟ ಮಾಡುತ್ತವೆ. ಮನುಷ್ಯನಿಗೂ ಆಹಾರ ಕಡಿಮೆ ಮಾಡುತ್ತವೆ. ದನಗಳಿಗೂ ಆಹಾರಲೋಪ ಮಾಡುತ್ತವೆ. ಇವನ್ನು ಬಿಟ್ಟು ಆಹಾರದ ಪೈರನ್ನು ಬೆಳೆದರೆ ಜನರಿಗೆ ಆಹಾರದ ಜೊತೆಗೆ ದನಕ್ಕೆ ಮೇವು ಆಗುತ್ತದೆ.

**ಹಣದ ಬೆಲೆ ಎಲ್ಲರಿಗೂ ಒಂದೇ ರೀತಿ ಇಲ್ಲವೆಂದ ಗಾಂಧೀಜಿ**

ಹಣದ ಅರ್ಥವ್ಯವಸ್ಥೆ ನಿಜವಾದ ಬೆಲೆಗಳನ್ನು ತಿಳಿಸದು. ಒಬ್ಬರ ಕೈಯಿಂದ ಒಬ್ಬರಿಗೆ ಸಾಗಿಹೋದಾಗ ಹಣದ ಬೆಲೆ ವ್ಯತ್ಯಾಸವಾಗುತ್ತದೆ. ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ ಅದರ ಬೆಲೆ ಬೇರೆ, ಹಣವಂತನ ಕೈಯಲ್ಲಿದ್ದರೆ ಅದರ ಬೆಲೆಯೇ ಬೇರೆ. ಈ ಬಗೆಯ ಹಸ್ತಾಂತರಗಳು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲೂಬಹುದು, ತಗ್ಗಿಸಲೂ ಬಹುದು. ಮೇಲೆ ನೋಡಲಿಕ್ಕೆ ರೂಪಾಯಿ ರೂಪಾಯಿಯೇ, ಆದರೆ ವ್ಯವಹಾರದಲ್ಲಿ ವಾಸ್ತವವಾಗಿ ಹಾಗಲ್ಲ. ಒಬ್ಬ ಬಡವನ ಕೈಯಲ್ಲಿ ಒಂದು ರೂಪಾಯಿ ಇದ್ದರೆ 4–5 ದಿನದ ಅನ್ನವಾಯಿತು. ಒಬ್ಬ ಭಾಗ್ಯವಂತನ ಕೈಯಲ್ಲಿದ್ದರೆ ಅದರ ಯೋಗ್ಯತೆ ಒಂದು ಚುಟ್ಟಾ ಆಗುತ್ತದೆ.

**ಬಂಡವಾಳಗಾರರು ಮನುಷ್ಯನ ಮೈಯಿಂದ ರಕ್ತ ಹೀರುವ ಪಿಚಕಾರಿ ಇದ್ದಂತೆ :**

ಮನುಷ್ಯನ ಮೈಯಿಂದ ರಕ್ತವನ್ನು ತೆಗೆದುಕೊಳ್ಳಲು ಒಂದು ಬಗೆಯ ಪಿಚಕಾರಿ. ಅದಕ್ಕೊಂದು ಸೂಜಿ ಇರುತ್ತವೆ. ಪಾಶ್ಚಾತ್ಯ ಸೀಮೆಗಳ ಬ್ಯಾಂಕು–ಲೇವಾದೇವಿ ಪದ್ಧತಿ, ಉತ್ಪಾದಕರ ಮೈಯಿಂದ ಪ್ರಾಣವನ್ನೇ ಹೀರುವ ಪಿಚಕಾರಿ ಸೂಜಿ ಇದ್ದಂತೆ. ಬಂಡವಾಳಗಾರರು ಅದನ್ನು ಉಪಯೋಗಿಸುತ್ತಾರೆ. 1943ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಬಡಿದು ಮೂವತ್ತು ಲಕ್ಷ ಜನ ಸತ್ತರು. ಅದು ರಿಜರ್ವ್ ಬ್ಯಾಂಕಿನ ಅಧಿಕಾರದ ದುರುಪಯೋಗದ ಫಲ. ಸಾರ್ವಜನಿಕರ ಹಣ, ರಾಷ್ಟ್ರದ ಹಣ, ಆ ಬ್ಯಾಂಕಿನಲ್ಲಿ ಇರುತ್ತದೆ. ಹಣವನ್ನು ವಿನಿಮಯದ ಸಾಧನವಾಗಿ ಅಥವಾ ಕ್ರಯಶಕ್ತಿಯ ಮುಡಿಪಾಗಿ ಬಳಸಿದರೆ ಆಗ ಅದು ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತದೆ. ಹಾಗಾಗದಿದ್ದರೆ ಅದು ಜನೋಪಯೋಗಿಯಲ್ಲವೆಂದು ಗಾಂಧೀಜಿ ಹೇಳುತ್ತಾರೆ.

**ಎಲ್ಲಾ ಹಳ್ಳಿಗಳಿಗೂ ನೀರಾವರಿ ಅಗತ್ಯವೆಂದ ಗಾಂಧೀಜಿ :**

ಪ್ರತಿಯೊಂದು ಹಳ್ಳಿಗಳಿಗೂ ನೀರಾವರಿಯ ಅನುಕೂಲತೆ ಬೇಕು. ಇದನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ ! ಕೃಷಿಯ ಪ್ರಗತಿಗೆ ಇದೇ ಆಧಾರ. ಇದರ ಹೊರತು ಕೃಷಿ ಬರೀ ಜೂಜಾಟ. ಬಾವಿಗಳನ್ನು ತೋಡಿಸುವುದು, ಕೆರೆಗಳನ್ನು ಆಳ, ಅಗಲ ತೋಡುವುದು ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಭತ್ತದ ಗಿರಣಿ, ಹಿಟ್ಟಿನ ಗಿರಣಿಗಳಲ್ಲಿರುವ ಇಂಜಿನ್ ಗಳನ್ನು ಸರಕಾರ ತೆಗೆದುಕೊಂಡು ಕೊಳವೆ ಬಾವಿ, ಸುರಂಗ ಬಾವಿಗಳಿಂದ ನೀರೆತ್ತಲು ಉಪಯೋಗಿಸಬಹುದು. ನೀರಿನ ಅನುಕೂಲವಿಲ್ಲದೇ ಗೊಬ್ಬರ ಹಾಕಿದರೆ ಪ್ರಯೋಜನವಿಲ್ಲ.

**ಹಳ್ಳಿಗರಿಗೆ ಶಿಕ್ಷಣ ಮುಖ್ಯವೆಂದ ಗಾಂಧೀಜಿ :**

ನಮ್ಮ ಪ್ರಯತ್ನಗಳೆಲ್ಲ ಹಳ್ಳಿಗಳಲ್ಲಿ ನಡೆಯಬೇಕು. ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ನಾಲ್ಕು ವರ್ಷ ಕೈಬಿಟ್ಟರೂ ರಾಷ್ಟ್ರಕ್ಕೇನೂ ನಷ್ಟವಾಗದು ! ಈಗಲೇ ನಮಗೆ ತಲೆ ಭಾರವಾಗಿದೆ. ಬೇಕಾದುದಕ್ಕಿಂತ ಹೆಚ್ಚು ಜನ ಪದವೀಧರರಿದ್ದಾರೆ. ಇವರು ಪಡೆದ ಶಿಕ್ಷಣ ನಮಗೆ ಅಗತ್ಯವಾದುದಲ್ಲ. ಆದುದರಿಂದ ಇವರು ನಿರುದ್ಯೋಗಿಗಳಾಗಿ ಕುಳಿತಿದ್ದಾರೆ. ಇಲ್ಲದಿದ್ದರೆ ಇವರಿಗೆ ಮಾಡಲು ಕೆಲಸ ಸಿಗುತ್ತಿರಲಿಲ್ಲವೇ ? ನಮ್ಮ ಹಳ್ಳಿಗಳು ಹೆಚ್ಚು ಸಮರ್ಥವೂ, ಪ್ರಯೋಜನಕರವೂ ಆಗುವಂತೆ ಮಾಡಬೇಕಿದೆ.


**ಯಾಂತ್ರಿಕ ಶಿಕ್ಷಣಕ್ಕಿಂತ ಪ್ರಾಯೋಗಿಕ ಶಿಕ್ಷಣ ಮುಖ್ಯವೆಂದ ಗಾಂಧೀಜಿ :**

ಬರೀ ಅಕ್ಷರ ಜ್ಞಾನವೇ ಮುಖ್ಯವಲ್ಲ. ಆದುದರಿಂದ ಶಿಕ್ಷಣಕ್ಕೆ ಮೊದಲಿಟ್ಟ ಗಳಿಗೆಯಿಂದಲೂ ಏನಾದರೂ ಉತ್ಪತ್ತಿ ಮಾಡುವಂತೆ ಮಗುವಿಗೆ ಒಂದು ಕೈಗಾರಿಕೆಯನ್ನು ಕಲಿಸುವುದೇ ನಾಂದಿ. ಪ್ರತಿಯೊಂದು ಪಾಠಶಾಲೆಯೂ ಸ್ವಾವಲಂಬಿಯಾಗಬೇಕು. ಅಲ್ಲಿ ಉತ್ಪತ್ತಿಯಾದುದನ್ನು ಸರಕಾರ ತೆಗೆದುಕೊಳ್ಳಬೇಕು. ಈಗ ಕಲಿಸುವಂತೆ ಯಾಂತ್ರಿಕವಾಗಿ ಕೈಗಾರಿಕೆಯನ್ನು ಕಲಿಸಬಾರದು. ಶಾಸ್ತ್ರೀಯವಾಗಿ ಕಲಿಸಬೇಕು. ಕೆಲಸಗಾರರಿಗೆ ನೂಲುವ ಶಿಕ್ಷಣ ಕೊಡುವಲ್ಲಿ ಈ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ. ಈ ಪ್ರಕಾರ ನಾನೇ ಮೆಟ್ಟು ಹೊಲಿಯುವುದನ್ನೂ, ನೂಲುವುದನ್ನೂ ಕಲಿಸಿದ್ದೇನೆ. ಒಳ್ಳೆಯ ಫಲ ಬಂದಿದೆ.

ನೂಲುವುದು ಬಣ್ಣ ಹಾಕುವುದು, ನೇಯುವುದು, ಚಾಪೆ ಬುಟ್ಟಿ ಹೆಣೆಯುವುದು, ಗಡಿಗೆ ಮಾಡುವುದು, ಮೆಟ್ಟು ಹೊಲಿಯುವುದು, ಮರಗೆಲಸ, ಹಿತ್ತಾಳೆ ತಾಮ್ರದ ಕೆಲಸ, ಕಾಗದ ಮಾಡುವುದು, ಬೆಲ್ಲ ಮಾಡುವುದು, ಎಣ್ಣೆ ಗಾಣವಾಡುವುದು, ಜೇಣು ಸಾಕಣೆ ಮುಂತಾದವುಗಳನ್ನು ಕಲಿಸಿದರೆ ಉತ್ಪನ್ನವಾದ ಪದಾರ್ಥಗಳನ್ನು ಮಾರುವ ಸಮಸ್ಯೆಯೂ ಹೆಚ್ಚಾಗಿ ಇರದು. ಈ ಪ್ರಾರಂಭದ ಶಿಕ್ಷಣಕ್ಕಾಗಿ ಸರಕಾರ ಹಣವನ್ನು ಒದಗಿಸಬೇಕು.

**ಗಾಂಧೀಜಿ ಮಾನವ ಕಲ್ಯಾಣದ ಶಾಶ್ವತ ಚಿಂತಕ :**

ಮಹಾತ್ಮ ಗಾಂಧೀಜಿ ಮಾನವ ಕಲ್ಯಾಣದ ಶಾಶ್ವತ ಹಿತ ಚಿಂತನವನ್ನು ಬಯಸುವ ಅಪರೂಪದ ಮಾನವತಾವಾದಿಯಾಗಿದ್ದಾರೆ. ಸಮಸ್ತ ಮಾನವ, ಪಶುಪಕ್ಷಿಗಳೆಲ್ಲವೂ ಸಂತೃಪ್ತ ಜೀವನ ನಡೆಸಬೇಕೆಂಬ ತುಡಿತವನ್ನು ಸದಾ ಹೊಂದಿದ್ದರು. ಆತ್ಮ ಕಲ್ಯಾಣದ ಕನಸುಗಾರನಾದ ಗಾಂಧೀಜಿ ಒಳ್ಳೆಯದನ್ನೇ ಸದಾ ಚಿಂತಿಸಿದರು. ಹೀಗಾಗಿ ಗಾಂಧೀಜಿಯ ವೈಚಾರಿಕತೆಗೆ ಸರ್ವಕಾಲಕ್ಕೂ ಬೆಲೆ ಇದೆ . ಸರ್ವ ಲೋಕದಲ್ಲಿಯೂ ಶಾಶ್ವತ ನೆಲೆ ಇದೆ. 'ಮಾನವ ಉದ್ಧಾರವೇ ಲೋಕೋದ್ಧಾರ'ಎಂದು ಗಾಂಧೀಜಿ ಸದಾ ಧ್ಯಾನಿಸಿದರು. ವ್ಯಸನಮುಕ್ತ ಸಮಾಜ ನಮ್ಮದಾಗಬೇಕೆಂಬ ಸದಾಕಾಲ ಹಪಾಹಪಿಯಲ್ಲಿ ಜೀವ ತೇದರು. ಇಂತಹ ಗಾಂಧೀಜಿ ನಮ್ಮವರೆಂಬುದೇ ನಮ್ಮ ಹಿರಿಮೆಯಾಗಿದೆ ! ಗಾಂಧೀಜಿಯ ಲೋಕೋತ್ತರ ಸಾರ್ಥಕ ಆಸೆಗಳೆಲ್ಲವೂ ಈಡೇರ ಬೇಕಾದರೆ ನಾವೆಲ್ಲರೂ ಅವರ ಸಲಹೆಯಂತೆ ನಡೆಯುವ ಮೂಲಕ ಅವರ ಕನಸನ್ನು ನನಸಾಗಿಸೋಣ.



### ವಾಮನ ಮೂರ್ತಿ

# ಲಾಲ್ ಬಹದ್ದೂರ್ ಶಾಸ್ತ್ರೀಜಿ ಒಂದು ನೆನಪು

ಹನುಮಂತ. ಮ. ದೇಶಕುಲಕರ್ಣಿ

**ಶಾ**ಲೆ ಮುಗಿಸಿ ಮನೆಗೆ ಹೊರಟ ಕೆಲ ಮಕ್ಕಳು ದಾರಿಯಲ್ಲಿ ಸಿಕ್ಕ ಮಾವಿನ ತೋಟಕ್ಕೆ ಲಗ್ಗೆಯಿಟ್ಟರು. ಕೆಲ ಹುಡುಗರು ಮರ ಹತ್ತಿ ಮಾವಿನ ಹಣ್ಣು ಕೀಳುತಿದ್ದರೆ, ಒಬ್ಬ ಬಾಲಕ ಮಾತ್ರ ಕೆಳಗೆ ನಿಂತು ನೋಡುತಿದ್ದ.ಮಾಲಿ ಅಲ್ಲಿಗೆ ಬಂದ ಕೂಡಲೇ ಮರ ಹತ್ತಿದ್ದ ಹುಡುಗರು ಕಾಲ್ಕಿತ್ತರೆ, ಆ ಬಾಲಕ ಸಿಕ್ಕಿಬಿದ್ದ. ಮಾಲಿ ಹುಡುಗನಿಗೆ ಬೈದು, ಥಳಿಸಲಾರಂಭಿಸಿದ.

ಆ ಬಾಲಕ 'ನನ್ನನ್ನು ಬಿಟ್ಟು ಬಿಡಿ, ನಾನು ಅಪ್ಪ ಇಲ್ಲದ ಹುಡುಗ' ಎಂದು ಅಂಗಲಾಚಿದ. ಕರಗಿದ ಮಾಲಿ,'ಅಪ್ಪ ಇಲ್ಲದವನು ಇನ್ನು ಮೇಲೆ ಜವಾಬ್ದಾರಿಯುತವಾಗಿ ಇರುವುದನ್ನು ಕಲಿ' ಎಂದು ಹೇಳಿ ಬಿಟ್ಟುಬಿಟ್ಟ. ಅಲ್ಲಿಂದ ಇನ್ನೆಂದು ಇಂತ ಕೆಲಸ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಹೊರಟ ಆ ಹುಡುಗನಿಗೆ ಆಗ 6–7 ವರ್ಷವಿದ್ದಿರಬೇಕು. ಬಹುಷಃ ಅಂದೇ ಆತ ತನ್ನ ನಡೆ–ನುಡಿ ಆದರ್ಶಪ್ರಾಯವಾಗಿರಬೇಕು ಅಂತ ನಿರ್ಧರಿಸಿಬಿಟ್ಟಿರಬೇಕು. ಮುಂದೆ ದೇಶದ ಎರಡನೇ ಪ್ರಧಾನಿಯಾಗಿ ತನ್ನ ಸರಳತೆ, ಸಜ್ಜನಿಕೆ, ಪಾರದರ್ಶಕತೆ, ನೈತಿಕತೆಯಿಂದಾಗಿ ಗಮನ ಸೆಳೆದ.

ಆಗ ದೇಶದಲ್ಲಿ ಎಲ್ಲೆಲ್ಲೂ ಸ್ವರಾಜ್ಯದ ಕೂಗು, ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂಬುದು ಬಾಲ ಗಂಗಾಧರ ತಿಲಕರು ರಾಷ್ಟ್ರಕ್ಕೆ ಬೋಧಿಸಿದ ಮಂತ್ರ, ಲೋಕಮಾನ್ಯ ತಿಲಕರಲ್ಲಿ ಲಾಲ್ ಬಹದ್ದೂರರಿಗೆ ಅತೀವ ಗೌರವ. ಅವರ ದರ್ಶನ ಮಾಡಬೇಕು. ಅವರ ವಾಣಿಯನ್ನು ಆಲಿಸಬೇಕು. ಇದೇ ಹಂಬಲ. ಒಮ್ಮೆ ತಿಲಕರು ವಾರಣಾಸಿಗೆ ಬಂದಿದ್ದರು. ಆಗ ಐವತ್ತು ಮೈಲಿ ದೂರದ ಊರಿನಲ್ಲಿದ್ದ ಲಾಲ್ ಬಹದ್ದೂರ್ ಸಾಲ ಮಾಡಿ ಹಣ ಪಡೆದು, ರೈಲಿನಲ್ಲಿ ಅಲ್ಲಿಗೆ ಪ್ರಯಾಣ ಮಾಡಿದರು, ತಿಲಕರನ್ನು ಕಂಡರು. ಅವರ ವಾಣಿ ಲಾಲ್ ಬಹದ್ದೂರರ ಕಿವಿಯಲ್ಲಿ ಪಾಂಚಜನ್ಯದ ಹಾಗೆ ಮೊಳಗಿತು. ತಮ್ಮ ಬಾಳಿನ ಕೊನೆಯವರೆಗೂ ಅವರನ್ನು ಬಿಡದೆ ನಡೆಸಿದ ಮಂತ್ರ ಅದು. ಲಾಲ್ ಬಹದ್ದೂರರ ಮೇಲೆ ಅತ್ಯಂತ ಪ್ರಭಾವ ಬೀರಿದವರು ಮಹಾತ್ಮಗಾಂಧಿ. 1915ರಲ್ಲಿ ವಾರಣಾಸಿಗೆ ಆಗಮಿಸಿದ ಗಾಂಧಿಯವರು ಮಾಡಿದ ಭಾಷಣವನ್ನು ಕೇಳಿದಾಗ ಲಾಲ್ ಬಹಾದೂರರ ಮೈಯಲ್ಲಿ ವಿದ್ಯುತ್ ಸಂಚಾರವಾಯಿತು. ಅವರ ಬಾಳು ದೇಶಕ್ಕೆ ಮುಡಿಪಾಯಿತು.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯನ್ನು ಸಾರ್ಥಕಗೊಳಿಸಿದ ಬಹದ್ದೂರ್ ಶಾಸ್ತ್ರಿ ಅವರದು ಸರಳ ಉಡುಪು, ಮೃದು ನುಡಿ, ಆಡಿದ ಮಾತು ಇತರರಿಗೆ ಕೇಳಿತೋ ಇಲ್ಲವೋ. ಆದರೆ ಮಾತಿಗೆ ಮೀರಿದ ಮಂದಹಾಸ. ಗತ್ತು, ದರ್ಪ ಸ್ವಲ್ಪವೂ ಇಲ್ಲ. ಇಂಥವರು ಐವತ್ತು ಕೋಟಿ ಜನರಿರುವ ಈ ದೊಡ್ಡ ದೇಶವನ್ನು ನಿಜವಾಗಿಯೂ ಆಳಬಲ್ಲರೆ? ಎಂದು ಅನೇಕರಿಗೆ ಸಂದೇಹ. ಅವರು ಎಂದೂ ಅಧಿಕಾರವನ್ನು ಬಯಸಿದವರಲ್ಲ. ಅದಕ್ಕಾಗಿ ಕೆಲಸ ಮಾಡಿದ್ದವರಲ್ಲ. ಆದರೂ ಅಧಿಕಾರ ಅವರನ್ನು ಅರಸಿ ಬಂತು. ಕೀರ್ತಿ ಅವರಿಗೆ ಕಿರೀಟ ತೊಡಿಸಿತು. ವಾಮನಮೂರ್ತಿ ತ್ರಿವಿಕ್ರಮವಾಗಿ ಬೆಳೆದರು. ಹೂವಿನ ಹಾಗೆ ಮೃದುವಾಗಿರುವ ತಾವು ವಜ್ರದ ಹಾಗೆ ಕಠೋರವಾಗಿಯೂ ಇರಬಲ್ಲರೆಂಬುದನ್ನು ತಮ್ಮ ಕೆಲಸಗಳಿಂದ ತೋರಿಸಿಕೊಟ್ಟರು. ಭಾರತದ ಗೌರವವನ್ನು ನಾಲ್ಕು ದಿಕ್ಕುಗಳಿಗೂ ಹಬ್ಬಿಸಿದರು.

ಲಾಲ್‌ಬಹುದ್ದೂರ್ ಅವರು ಅಕ್ಟೋಬರ್ 2, 1904 ರಂದು ಉತ್ತರ ಪ್ರದೇಶ ಮೊಗಲ್ ಸರಾಯಿ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಬಡ ಉಪಾಧ್ಯಾಯರಾಗಿದ್ದು ನಂತರ ರೈಲ್ವೆಯಲ್ಲಿ ಗುಮಸ್ತರಾಗಿ ಸರಳ ಜೀವನ ನಡೆಸುತ್ತಿದ್ದ ಶಾರದಾ ಪ್ರಸಾದ. ತಾಯಿ ಸುಗುಣವತಿಯೂ ಆದ ರಾಮದುಲಾರಿ ದೇವಿ. ಅವರದು ತುಂಬ ಸುಸಂಸ್ಕೃತ ಕಾಯಸ್ಥ ಬ್ರಾಹ್ಮಣ ಕುಟುಂಬ. ಸರಳತೆ, ಸಜ್ಜನಿಕೆ, ಹೃದಯ ಶ್ರೀಮಂತಿಕೆಗೆ ಬಹಳ ಹೆಸರು ವಾಸಿಯಾಗಿತ್ತು. ಅಕ್ಟೋಬರ್ 2 ರಂದು ಬಾಪೂಜಿಯವರ ಜಯಂತಿಯನ್ನು ಆಚರಿಸುವಂತೆ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜನ್ಮದಿನವನ್ನು ದೇಶದಾದ್ಯಂತ ಆಚರಿಸುತ್ತೇವೆ.

1921ರಲ್ಲಿ ಮಹಾತ್ಮ ಗಾಂಧಿಯವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಇವರು ತಮ್ಮ ಓದನ್ನು ಅರ್ಧದಲ್ಲೇ ಬಿಟ್ಟರು. ಲಾಲ್‌ಬಹದ್ದೂರರು 1927 ರಲ್ಲಿ ಲಲಿತಾದೇವಿಯವರೊಡನೆ ವಿವಾಹವಾದರೂ. ಅವರು ಆ ಕಾಲಕ್ಕೆ ಒಂದು ಚರಕ ಹಾಗೂ ಸ್ವಲ್ಪ ನೂಲನ್ನು ಮಾತ್ರ ವರದಕ್ಷಿಣೆಯಾಗಿ ಪಡೆದಿದ್ದರಂತೆ. ವಿವಾಹದ ನಂತರ ಸಂಸಾರೀಕ ಜೀವನಕ್ಕಿಂತಲೂ ಹೆಚ್ಚಾಗಿ ದೇಶ ಸೇವೆಯ ಬಗ್ಗೆ ಯೋಚಿಸುತ್ತಾ ಗೋಪಾಲಕೃಷ್ಣ ಗೋಕಲೆ ಸ್ಥಾಪಿಸಿದ್ದ 'ಸರ್ವೆಂಟ್ಸ್ ಆಫ್ ಇಂಡಿಯನ್ ಸೊಸೈಟಿ' ಗೆ ಸೇರಿದರು. ಲಾಲ್‌ಬಹದ್ದೂರ್ ಸ್ವಾತಂತ್ರ ಸಂಗಾಮದಲ್ಲಿ ಸಕ್ರೀಯವಾಗಿ ದಂಡಿ ಉಪ್ಪಿನ ಸತ್ಯಾಗ್ರಹವು ಸೇರಿದಂತೆ ಏಳು ಸಾರಿ ಬಂಧಿತರಾಗಿ ಒಂಬತ್ತು ವರ್ಷಗಳ ಅವಧಿ ಸೆರೆಮನೆವಾಸ ಅನುಭವಿಸಿದರು.

ಭಾರತ ಕಂಡ ಪ್ರಧಾನಿಯಾದ ಅತ್ಯಂತ ಪ್ರಾಮಾಣಿಕ ಜೀವಿ. ಇವರ ಪ್ರಾಮಾಣಿಕತೆಗೆ ಹಲವರು ತಲೆದೂಗಿದ್ದುಂಟು. ಲಾಲ್ ಬಹುದ್ದೂರ್ ಶಾಸ್ತ್ರಿಯವರು ಸೆರೆಮನೆ ವಾಸದಲ್ಲಿದ್ದಾಗ ಅವರ ಮಗಳು ಗಂಭೀರವಾದ ಅನಾರೋಗ್ಯಕ್ಕೆ ತುತ್ತಾದಳು, ಆಗ ಶಾಸ್ತ್ರೀಜಿ ತಮಗೆ 8 ದಿನಗಳ ವರೆಗೆ ಮನೆಗೆ ಹೋಗಲು ಕೋರಿದರು. ಜೈಲಿನ ಅಧಿಕಾರಿಗಳು ಮುಚ್ಚಳಿಕೆ ಬರೆದುಕೊಡಲು ಕೋರಿದರು. ಇದು ಶಾಸ್ತ್ರೀಜಿಯವರ ಸ್ವಾಭಿಮಾನಕ್ಕೆ ಒಗ್ಗದ ಸಂಗತಿಯಾಗಿತ್ತು. ತಮ್ಮ ಪ್ರಾಮಾಣಿಕತೆಯ ಮೇಲೆ ನಂಬಿಕೆ ಇರಿಸಿ ಕಳುಹಿಸುವುದಾದಲ್ಲಿ ಮಾತ್ರ ಹೋಗುತ್ತೇನೆ, ಮುಚ್ಚಳಿಕೆ ಬರೆದು ಕೊಡುವುದಿಲ್ಲ ಎಂದರು. ಅವರ ಪ್ರಾಮಾಣಿಕತೆ ತಿಳಿದ ಜೈಲಿನ ಅಧಿಕಾರಿಗಳು ಅವರನ್ನು ಬಿಡುಗಡೆಗೊಳಿಸಿದರು. ಶಾಸ್ತ್ರೀಜಿ ಮನೆಗೆ ಬಂದಾಗ ದುರದೃಷ್ಟವಶಾತ್ ಮಗಳು ಮರಣ ಹೊಂದಿದ್ದಳು. ಅವಳ ಅಂತ್ಯಕ್ರಿಯೆ ಮುಗಿಸಿ ಅವಧಿಗೆ ಮುನ್ನವೇ ಜೈಲಿಗೆ ಬಂದರು. ಇನ್ನೊಮ್ಮೆ ಅವರ ಮಗನಿಗೆ ಇನ್ ಫ್ಲೂಯೆಮ್ಜಾ ಕಾಯಿಲೆ ಬಂದಿತ್ತು. ಆಗಲೂ ಶಾಸ್ತ್ರೀಜಿ ಜೈಲಿನ ಅನುಮತಿ ಪಡೆದು ಬಂದರು. ಮಗನ ಯೋಗಕ್ಷೇಮ ವಿಚಾರಿಸಿ ಪುನಃ ಜೈಲಿಗೆ ಹಿಂದಿರುಗಿದರು.

ಸ್ವಾತಂತ್ರ ದೊರಕಿದ ಬಳಿಕ ಇವರು ಗೋವಿಂದ ವಲ್ಲಭ ಪಂತ್ ಅವರ ಸರಕಾರದಲ್ಲಿ ಪೋಲಿಸ್ ಖಾತೆಯನ್ನು ವಹಿಸಿಕೊಂಡಿದ್ದರು. 1951ರಲ್ಲಿ ಇವರು ಲೋಕ ಸಭೆಗೆ ಜನರಲ್ ಸೆಕ್ರೆಟರಿ ಆಗಿ ಆಯ್ಕೆಯಾದರು. ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ, ಪ್ರಚಾರ ಕಾರ್ಯಕ್ರಮದ ನಿರ್ದೇಶನ ಇವೆಲ್ಲವನ್ನೂ ಪ್ರತ್ಯಕ್ಷವಾಗಿ ನಿರ್ವಹಿಸಿದವರು ಅವರು. ಆದರೆ ಅವರು ಮಾತ್ರ ಚುನಾವಣೆಗೆ ನಿಲ್ಲಲಿಲ್ಲ. ಆದರೆ ನೆಹರೂ ಅವರು ರಾಜ್ಯಸಭೆ ಚುನಾವಣೆಗೆ ನಿಲ್ಲುವಂತೆ ಶಾಸ್ತ್ರಿಜಿ ಅವರನ್ನು ಬಲವಂತ ಮಾಡಿ ಒಪ್ಪಿಸಿದರು. ಕೇಂದ್ರ ಸರ್ಕಾರದಲ್ಲಿ ಲಾಲ್ ಬಹದ್ದೂರರು ರೈಲ್ವೆ ಮತ್ತು ಸಾರಿಗೆ ಮಂತ್ರಿಯಾಗಿ ನೇಮಕವಾದರು (1952).

ಆ ಸಂದರ್ಭದಲ್ಲಿ ಮೂರನೆಯ ತರಗತಿಯ ಪ್ರಯಾಣಿಕರಿಗೆ ಅನೇಕ ಹೊಸ ಸೌಲಭ್ಯಗಳು ಒದಗಲು ಲಾಲ್ ಬಹುದ್ದೂರ್‌ರರು ಕಾರಣ. ಮೂರನೆಯ ತರಗತಿಯ ಡಬ್ಬಿಗಳಲ್ಲಿ ವಿದ್ಯುತ್ ಬೀಸಣಿಗೆಯನ್ನು ಹಾಕಿದ್ದು ಅವರು ರೈಲ್ವೆ ಮಂತ್ರಿಯಾಗಿದ್ದ ಕಾಲದಲ್ಲಿ. ಬಳಿಕ 1961ರಲ್ಲಿ ಗೃಹ ಮಂತ್ರಿಯಾದರು. ಗೃಹ ಮಂತ್ರಿಯಾಗಿದ್ದಾಗಲೂ ಶಾಸ್ತ್ರೀಜಿ ಸ್ವಂತ ಮನೆ ಹೊಂದಿರಲಿಲ್ಲ. ಜನ ಅವರನ್ನು 'ಗೃಹವಿಲ್ಲದ ಗೃಹಮಂತ್ರಿ' ಎನ್ನುತ್ತಿದ್ದರು. ಅಲಹಾಬಾದಿನಲ್ಲಿ ಸಣ್ಣಮನೆಗೆ ಬಾಡಿಗೆ ಕೊಟ್ಟು ಇಟ್ಟುಕೊಂಡಿದ್ದರು. ಮಂತ್ರಿಗಳಾಗಿದ್ದಾಗಲೂ ಅಲಹಾಬಾದಿಗೆ ಹೋದಾಗ ಅಲ್ಲಿಯೇ ಇರುತ್ತಿದ್ದರು. ಕೆಲವು ದಿನಗಳ ನಂತರ ಮನೆಯಾತ ಅದನ್ನು ಬೇರೊಬ್ಬರಿಗೆ ಕೊಟ್ಟ. ಲಾಲ್ ಬಹುದ್ದೂರ್‌ರರು ಮಂತ್ರಿ ಪದವಿ ಬಿಟ್ಟಾಗ ಸರ್ಕಾರ ಕೊಟ್ಟ ಮನೆಯನ್ನು ಬಿಟ್ಟರು, ಇರಲು ಒಂದು ಮನೆ ಇರಲಿಲ್ಲ.

ಅಧಿಕಾರಕ್ಕೆ ಅಂಟಿಕೊಂಡಿದ್ದ ಕೆಲವು ಜನರು ಅನೇಕ ವೇಳೆ ತಮ್ಮ ಸಣ್ಣತನವನ್ನು ಪ್ರದರ್ಶಿಸುತ್ತಿದ್ದರು. ದೇಶವನ್ನು ಸಂಘಟಿಸುವುದಕ್ಕಿಂತ ಮಂತ್ರಿ ಪದವಿಗೆ ಅಂಟಿಕೊಂಡಿರುವುದೇ ಅನೇಕರ ಜೀವನದ ಧ್ಯೇಯವಾಗಿತ್ತು. ಈ ಕಾಲದಲ್ಲಿ ಆಡಳಿತ ಪಕ್ಷದ ಶುದ್ಧೀಕರಣಕ್ಕಾಗಿ ಹೊಸದಾದ ಯೋಜನೆಯೊಂದು ಜಾರಿಗೆ ಬಂತು. ರಾಜ್ಯದ ಎಲ್ಲ ಮುಖ್ಯಮಂತ್ರಿಗಳೂ ಕೇಂದ್ರದ ಹಿರಿಯ ಮಂತ್ರಿಗಳೂ ನೆಹರೂ ಅವರಿಗೆ ತಂತಮ್ಮ ರಾಜೀನಾಮೆ ಸಲ್ಲಿಸಬೇಕು. ಇವರಲ್ಲಿ ಯಾರು ಮಂತ್ರಿಯಾಗಿ ಮುಂದುವರಿಯತಕ್ಕದ್ದು, ಯಾರು ಪಕ್ಷದ ಕಾರ್ಯದಲ್ಲಿ, ದೇಶದ ಜನರನ್ನು ಸಂಘಟಿಸುವ ಕೆಲಸದಲ್ಲಿ, ನಿರತರಾಗತಕ್ಕದ್ದು ಎಂಬುದನ್ನು ನೆಹರೂ ತೀರ್ಮಾನಿಸಬೇಕು ಎಂಬುದೇ ಈ ಯೋಜನೆ. ಇದರ ಪ್ರಕಾರ ಅವರೆಲ್ಲರೂ ತಂತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಲಾಲ್ ಬಹುದ್ದೂರ್‌ರರು ಮಂತ್ರಿಯಾಗಿಯೇ ಮುಂದುವರಿಯಬೇಕೆಂಬುದು ನೆಹರೂರವರ ಇಚ್ಚೆ. ಅದಕ್ಕೆ ಒಪ್ಪದೆ ಅವರೂ ರಾಜೀನಾಮೆ ಸಲ್ಲಿಸಿದರು.

ಆದರೆ ಲಾಲ್ ಬಹುದ್ದೂರ್ ಬಹುಕಾಲ ಸರ್ಕಾರದಿಂದ ಹೊರಗೆ ಇರುವುದು ಸಾಧ್ಯವಾಗಲಿಲ್ಲ. ಅವರು ಮಂತ್ರಿಪದವಿ ಬಿಟ್ಟ ಐದೇ ತಿಂಗಳಲ್ಲಿ ನೆಹರೂರವರ ಆರೋಗ್ಯ ಕೆಟ್ಟಿತು. ದೇಶದ ಒಗ್ಗಟ್ಟನ್ನು ಮುರಿಯುವ ಜನ ಹೆಚ್ಚುತ್ತಿದ್ದರು. ಕಾಶ್ಮೀರದ ಮುಸ್ಲಿಮರನ್ನು ಎತ್ತಿಕಟ್ಟಿ ಕೆಲವರು ಅಲ್ಲಿ ಗಲಭೆ ಎಬ್ಬಿಸಿದರು. ಬಹಾದುರರಂಥವರ ದೃಢಚಿತ್ತವೂ ಜಾದೂ ಕೈಯೂ ಸರ್ಕಾರಕ್ಕೆ ಅಗತ್ಯವಾಗಿತ್ತು. ಆದ್ದರಿಂದ ನೆಹರೂ ಲಾಲ್ ಬಹುದ್ದೂರ್‌ರರನ್ನು ಮತ್ತೆ ಮಂತ್ರಿಯಾಗಬೇಕೆಂದು ಕರೆದರು. ಅವರು ಯಾವ ಖಾತೆಯೂ ಇಲ್ಲದ ಮಂತ್ರಿಯಾದರು.

ಇತ್ತ 1962ರ ಯುದ್ಧದ ನಂತರ ದೇಶದ ರಕ್ಷಣಾ ವ್ಯವಸ್ಥೆಯ ಮೇಲೆ ಅಪನಂಬಿಕೆಗಳು ಹುಟ್ಟಿದ್ದವು, ಇಂತ ಸಮಯದಲ್ಲೇ ಪಾಕಿಗಳು ಕಾಶ್ಮೀರದೊಳಕ್ಕೆ ನುಗ್ಗಿ ಬಂದಿದ್ದರು. ಜಮ್ಮುವಿನ ಚಾಮ್ಬ್ ಸೆಕ್ಟರ್‌ನೊಳಕ್ಕೆ ಬರೋಬ್ಬರಿ 100 ಯುದ್ಧ ಟ್ಯಾಂಕುಗಳ ಜೊತೆಗೆ.

ಆ ದಿನ ರಾತ್ರಿ ಊಟಕ್ಕೆ ಅಂತ ಮನೆಗೆ ಬಂದ ಶಾಸ್ತ್ರಿಗಳನ್ನ ತುರ್ತಾಗಿ ಭೇಟಿಯಾಗಲು ಬಂದ ಮಿಲಿಟರಿ ಅಧಿಕಾರಿಗಳು,'ಸರ್ ಅವರು ಗಡಿ ದಾಟಿ ಕಾಶ್ಮೀರದ ಮೇಲೆ ಆಕ್ರಮಣ ಮಾಡಿದ್ದಾರೆ. ಈಗ ನಾವು ಅವರ ದಿಕ್ಕು ತಪ್ಪಿಸಿ ಸಫಲರಾಗಬೇಕೆಂದರೆ ಲಾಹೋರ್ ಕಡೆ ನುಗ್ಗಬೇಕು' ಎಂದಾಗ, 'ಸರಿ,ಹಾಗಿದ್ರೆ, ಹೊರಡಿ ಲಾಹೋರ್ ಕಡೆ' 'ಆದರೆ, ಲಾಹೋರ್ ಕಡೆ ನುಗ್ಗುವುದು ಎಂದರೆ ಅಂತರಾಷ್ಟ್ರೀಯ ಗಡಿ ದಾಟಿದಂತೆ' 'ಅವರು ಕಾಶ್ಮೀರಕ್ಕೆ ನುಗ್ಗಿಲ್ಲವೇ,ನಾವು ನುಗ್ಗೋಣ ಎಂದರು.

ಅದು 10–15 ನಿಮಿಷಗಳ ಮಾತುಕತೆಯಲ್ಲಿ ತೆಗೆದುಕೊಂಡ ನಿರ್ಧಾರ. ಯುದ್ಧ ಘೋಷಣೆಯಾದ ನಂತರ ಕೆಂಪುಕೋಟೆಯಲ್ಲಿ ದೇಶದ ಜನರನ್ನುದ್ದೇಶಿಸಿ 'ಹತಿಯಾರೋನ್ ಕ ಜವಾಬ್ ಹತಿಯಾರೋನ್ ಸೆ ದೇಂಗೇ.ಹಮಾರ ದೇಶ್ ರಹೇಗ ತೋ ಹಮಾರ ತಿರಂಗ ರಹೇಗ (ಅಸ್ತ್ರಕ್ಕೆ ಪ್ರತಿಯಾಗಿ ಅಸ್ತ್ರದಲ್ಲೇ ಉತ್ತರ ನೀಡುತ್ತೇವೆ.ನಮ್ಮ ದೇಶ ಇದ್ದರೆ ನಮ್ಮ ತಿರಂಗವು ಇರುತ್ತದೆ) ಅಂದಿದ್ದರು.

ಆಗ ಅಮೇರಿಕದಿಂದ ಆಮದಾಗುತ್ತಿದ್ದ ಗೋಧಿಯ ಗುಣಮಟ್ಟ ಹೇಗಿತ್ತೆಂದರೆ, ಪ್ರಾಣಿಗಳು ತಿನ್ನಲೂ ಯೋಗ್ಯವಾಗಿರಲಿಲ್ಲ. ಪಾಕಿಸ್ತಾನದ ಜೊತೆಗಿನ ಯುದ್ಧವನ್ನು ನಿಲ್ಲಿಸದಿದ್ದರೆ, ಗೋಧಿಯ ರಫ್ತನ್ನು ನಿಲ್ಲಿಸುತ್ತೇವೆಂಬ ಸೂಚನೆ ಅಮೇರಿಕದಿಂದ ಬಂತು. ಶಾಸ್ತ್ರೀಜಿಯವರು "ನಿಲ್ಲಿಸಿ ತೊಂದರೆಯಿಲ್ಲ", "ದೊಡ್ಡು ಕೊಟ್ಟು ನಿಮ್ಮ ಕಳಪೆ ಗುಣಮಟ್ಟದ ಗೋಧಿಯನ್ನು ತಿಂದು ಆರೋಗ್ಯ ಕೆಡಿಸಿಕೊಳ್ಳುವುದಕ್ಕಿಂತ, ಹಸಿವಿನಿಂದ ನಾವು ಸಾಯುವುದೇ ವಾಸಿ ಎಂದಿದ್ದರು.

ದೆಹಲಿಯ ರಾಮಲೀಲಾ ಮೈದಾನದಲ್ಲಿ ದೇಶದ ಜನತೆಯನ್ನುದ್ದೇಶಿಸಿ ಶಾಸ್ತ್ರೀಜಿ ಮಾತನಾಡುತ್ತಾ.."ಪಾಕಿಸ್ತಾನದೊಂದಿಗೆ ಯುದ್ಧ ನಡೆಯುತ್ತಿದೆ. ಅಮೇರಿಕದಿಂದ ಗೋಧಿ ಆಮದಾಗುವುದು ನಿಂತಿದೆ.ದೇಶದ ಜನ ಸಹಕರಿಸಬೇಕಿದೆ.ಒಂದು..ನೀವು ನೇರವಾಗಿ ಸೇನೆಗೆ ಧನ ಅಥವಾ ಆಹಾರದ ಸಹಾಯವನ್ನು ಮಾಡಿ. ಇಲ್ಲವೇ ಸೋಮವಾರ ನೀವು ಉಪವಾಸವನ್ನು ಆಚರಿಸಿ. ಇಲ್ಲದಿದ್ದರೆ ದೇಶ ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಗಬಹುದು" ಎಂದರು. ಈ ಕರೆಗೆ ಇಡೀ ದೇಶ ಓಗೊಟ್ಟಿತು. ಹಲವರು ಸೇನೆಗೆ ಸಹಾಯ ಮಾಡಿದರು. ಲಕ್ಷಾಂತರ ಜನ ಸೋಮವಾರದ ಉಪವಾಸವನ್ನು ಆರಂಭಿಸಿದರು. ಸ್ವತಃ ಶಾಸ್ತ್ರೀಜಿಯವರೂ ಸೋಮವಾರದಂದು ಉಪವಾಸವ್ರತವನ್ನು ಕೈಗೊಂಡರು.

ಶಾಸ್ತ್ರೀಜಿಯವರ ಪತ್ನಿ ಲಲಿತಾದೇವಿಯವರು ಅನಾರೋಗ್ಯಪೀಡಿತರಾಗಿದ್ದರು. ಮನೆಗೆಲಸಕ್ಕೆಂದು ಕೆಲಸದವಳೊಬ್ಬಳು ಬರುತ್ತಿದ್ದಳು. ಶಾಸ್ತ್ರೀಜಿಯವರು ಮಹಿಳೆಗೆ ನಾಳೆಯಿಂದ ಕೆಲಸಕ್ಕೆ ಬರಬೇಡ ಎಂದರು. ಆಕೆ"ಅಲ್ಲ, ನಿಮ್ಮ ಬಟ್ಟೆಯನ್ನು ತೊಳೆಯುವುದು, ಮನೆಯನ್ನು ಸ್ವಚ್ಛಗೊಳಿಸುವುದು, ನಿಮ್ಮ ಪತ್ನಿಯ ಆರೈಕೆಯನ್ನು ಯಾರು ಮಾಡಿಕೊಡುತ್ತಾರೆ ಸ್ವಾಮೀ"ಎಂದು ಕೇಳಿದಳು. "ದೇಶಕ್ಕಾಗಿ ಇದು ಅನಿವಾರ್ಯವಮ್ಮಾ ನಿನಗೆ ಕೊಡುವ ಸಂಬಳದ ಹಣವಾದರೂ ದೇಶದ ಒಳಿತಿಗಾದೀತು" ಎಂದು ಹೇಳಿದರು. ನಂತರ ಮನೆಯ ಪ್ರತಿಯೊಂದು ಕೆಲಸವನ್ನೂ ಶಾಸ್ತ್ರೀಜಿಯವರೇ ನಿಭಾಯಿಸುತ್ತಿದ್ದರು. ಅಲ್ಲದೆ ಮಕ್ಕಳಿಗೆ ಇಂಗ್ಲೀಷ್ ಹೇಳಿಕೊಡಲೆಂದು ಬರುತ್ತಿದ್ದ ಟೀಚರ್ ಅವರನ್ನೂ ಕೆಲಸದಿಂದ ವಿಮುಕ್ತಗೊಳಿಸಿದರು. ಒಂದು ದಿನ ಶಾಸ್ತ್ರೀಜಿಯವರ ಪತ್ನಿ, ಹರಿದುಹೋಗಿರುವ ಅವರ ಧೋತಿಯನ್ನು ನೋಡಿ "ಒಂದು ಹೊಸ ಧೋತಿಯನ್ನಾದರೂ ತೆಗೆದುಕೊಳ್ಳಬಾರದೇ?"ಎಂದು ಕೇಳುತ್ತಾರೆ."ಅದನ್ನು ಕೊಳ್ಳಲು ಹಣವೆಲ್ಲಿದೆ..? ಬರುವ ಸಂಬಳವನ್ನೂ ಬಿಟ್ಟಾಗಿದೆ. ಮನೆಯ ಖರ್ಚುಗಳನ್ನು ಕಡಿಮೆ ಮಾಡು" ಎಂದಿದ್ದರು.

1964ರ ಯುದ್ಧದ ವಿಜಯದ ನಂತರ ಭಾರತ–ಪಾಕ್ ನಡುವೆ ಸಂಧಾನಕ್ಕೆ ಬಂದಿದ್ದು ಸೋವಿಯತ್ ಯುನಿಯನ್.



ತಾಷ್ಕೆಂಟ್‌ಗೆ ಹೊರಟು ನಿಂತಿದ್ದರು ಶಾಸ್ತ್ರಿಗಳು, ಆಗ ಭಾರತದ ಮುಗಿಲಲ್ಲಿ ಕಾರ್ಮೋಡ ಕವಿದಿತ್ತು. ತಾಷ್ಕೆಂಟ್ ಒಪ್ಪಂದಕ್ಕೆ ಹೊರಡುವ ಮುನ್ನ ಶಾಸ್ತ್ರಿಯವರ ತಾಯಿ, ಪತ್ರಕರ್ತರು ಹಾಗೂ ದೇಶದ ಬಹುತೇಕ ಜನರ ಆಶಯ ಒಂದೇ ಆಗಿತ್ತು. ಅದು ಯುದ್ಧದಲ್ಲಿ ನಮ್ಮ ಪಡೆಗಳು ಗೆದ್ದ ಪಾಕ್ ಆಕ್ರಮಿತ ಕಾಶ್ಮೀರದ ಭಾಗವಾಗಿದ್ದ 'ಹಾಜಿಫೀರ್ ಮತ್ತು ತಿತ್ವ'ವನ್ನ ನಾವೇ ಉಳಿಸಿಕೊಳ್ಳಬೇಕು ಅನ್ನುವುದು. ತಾಷ್ಕೆಂಟ್‌ಗೆ ಹೊರಡುವ ಮುನ್ನ ಹಾಗೆ ಮಾಡುವೆ ಅಂತ ಹೊರಟಿದ್ದರು. ಆದರೆ ಮಾತುಕತೆಯ ಸಮಯದಲ್ಲಿ ಸೋವಿಯತ್ ಅಧ್ಯಕ್ಷ 'ಹಾಜಿಫೀರ್ ಮತ್ತು ತಿತ್ವ'ವನ್ನ ಅವರಿಗೆ ಬಿಟ್ಟುಕೊಡಿ ಅಂತ ಕೇಳಿದಾಗ, ಶಾಸ್ತ್ರಿಗಳು "ಹಾಗಿದ್ದರೆ ನೀವು ಬೇರೊಬ್ಬ ಪ್ರಧಾನಿಯನ್ನ ಹುಡುಕಿಕೊಳ್ಳಿ' ಅಂದಿದ್ದರು. ಆದರೆ ನಂತರ ವಿಷಯ ಭದ್ರತಾ ಮಂಡಳಿಯವರೆಗೆ ಹೋಗುತ್ತದೆ ಅಂದಾಗ, ಪಾಕಿಸ್ತಾನ ಇನ್ಯಾವತ್ತು ಭಾರತದದೊಂದಿಗೆ ಅಸ್ತ್ರ ಪ್ರಯೋಗ ಮಾಡುವುದಿಲ್ಲ ಅನ್ನುವುದನ್ನು ಲಿಖಿತವಾಗಿ ಪಡೆದು, ಆ ಎರಡು ಜಾಗಗಳನ್ನು ಬಿಟ್ಟು ಕೊಡಲು ಒಪ್ಪಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿ ಬಿಟ್ಟರು.

ಒಪ್ಪಂದದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿದ ಕೆಲ ಪತ್ರಕರ್ತರು 'ನೀವು ದೇಶವನ್ನು ಮಾರಿಕೊಂಡಿದ್ದಿರಿ' ಅಂದಿದ್ದರಂತೆ. ಇಂತಹ ಸಂದಿಗ್ಧ ಸಮಯದಲ್ಲಿ ಅನಿರೀಕ್ಷಿತವಾಗಿ ಹೃದಾಯಘಾತಕ್ಕೆ ಒಳಗಾಗಿ ಅವರು ಇಹಲೋಕವನ್ನು ತ್ಯಜಿಸಿದರು. ■



# ಮೋಡಬಿತ್ತನೆ

## ಮೂಲಕ ಮಳೆಯ ತರಿಸಿದ ಭಗೀರಥ ಪ್ರಯತ್ನ

ವೇಣುಗೋಪಾಲ ಪಿ.ಎಂ.

**ಕ**ಳೆದ ಮೂರ್‍ನಾಲ್ಕು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರುವ ಕರ್ನಾಟಕ ರಾಜ್ಯವು, ಬೆಳೆಹಾನಿ,ಜನ–ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿಯ ತೀವ್ರ ಅಭಾವವನ್ನು ಎದುರಿಸುತ್ತಿದೆ. ಆಧುನಿಕ ವಿಜ್ಞಾನ,ತಂತ್ರಜ್ಞಾನಯುಗದಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳಿಂದ ಈ ನೈಸರ್ಗಿಕ ಸವಾಲಿಗೆ ಪರಿಹಾರಗಳಿವೆಯೇ? ಅವುಗಳನ್ನು ಬಳಸಿಕೊಂಡು,ತೇಲಿ ಹೋಗುವ ಮೋಡಗಳನ್ನು ಹಿಡಿದು ನಿಲ್ಲಿಸಿ, ಮಳೆಯ ಸುರಿಸುವ ಭಗೀರಥ ಪ್ರಯತ್ನಕ್ಕೆ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಧುಮುಕಿದೆ, ವರ್ಷಧಾರೆ ಪ್ರಾಜೆಕ್ಟ್–2017 ರ ಹೆಸರಿನಲ್ಲಿ ಮೋಡಬಿತ್ತನೆ ಕಾರ್ಯಾಚರಣೆ ಆರಂಭಿಸಿದೆ.ಮೊದಲ ಹಂತದಲ್ಲಿ ಬೆಂಗಳೂರು ವಿಮಾನ ನಿಲ್ದಾಣದಿಂದ ಮೋಡಬಿತ್ತನೆ ಕಾರ್ಯ



ನಡೆಯಿತು.ಸೆ.3 ರಿಂದ ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಕಾರ್ಯ ಆರಂಭವಾಗಿದೆ. ಸರಕಾರದ ಈ ಭಗೀರಥ ಪ್ರಯತ್ನಕ್ಕೆ ಸಕಾಲದಲ್ಲಿ ಪ್ರಕೃತಿದತ್ತವಾಗಿಯೂ ಸಹ ಪೂರಕ ವಾತಾವರಣ ಸೃಷ್ಟಿಯಾದ ಪರಿಣಾಮವಾಗಿ ಮೋಡಬಿತ್ತನೆ ಮಾಡಲ್ಪಟ್ಟ ಧಾರವಾಡ,ಗದಗ,ಹಾವೇರಿ,ಬಾಗಲಕೋಟ,ಉತ್ತರಕನ್ನಡ,ಬೆಳಗಾವಿ,ಕೊಪ್ಪಳ,ಬಳ್ಳಾರಿ,ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಹಲವಾರು ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ.

**ಏನಿದು ಮೋಡಬಿತ್ತನೆ?**

ವಿಜ್ಞಾನದ ಹಲವು ಮಹತ್ತರ ಅವಿಷ್ಕಾರಗಳು ಆಕಸ್ಮಿಕವಾಗಿ ಜರುಗಿವೆ.ಹಾಗೆಯೇ ಮೋಡಬಿತ್ತನೆ ಕಲ್ಪನೆಯೂ ಇದೇ ರೀತಿಯಲ್ಲಿ ಜನ್ಮ ತಾಳಿದೆ. 1926 ರಲ್ಲಿ ಅಮೇರಿಕಾದ ನ್ಯೂಯಾರ್ಕ ನಗರದ ಜನರಲ್ ಇಲೆಕ್ಟ್ರಿಕ್ ಸಂಶೋಧನಾ ಪ್ರಯೋಗಾಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದ,ವಿನ್ಸೆಂಟ್ ಚೆಫರ್ ತನ್ನ ಪ್ರಯೋಗಾಲಯದಲ್ಲಿ ಕೃತಕ ಮೋಡಗಳ ಉತ್ಪಾದನೆಯಲ್ಲಿ ತೊಡಗಿದ್ದರು.ಒಮ್ಮೆ ಮೋಡಬಿತ್ತನೆಯ ಕೊಠಡಿಯಲ್ಲಿ ಉಷ್ಣಾಂಶ ಹೆಚ್ಚಾಗಿದ್ದನ್ನು ಕಂಡು ಡ್ರೈ ಐಸ್ ( ಕಾರ್ಬನ್ ಡೈ ಆಕ್ಸೈಡ್‌ನ ಘನೀಕೃತ ರೂಪ)ನ್ನು ತಂಪಾಗಿಸಲು ಇರಿಸಿದ.ನೋಡು ನೋಡುತ್ತಿದ್ದಂತೆಯೇ ಕೊಠಡಿಯಲ್ಲಿ ತೇವಾಂಶಭರಿತ ಮೋಡಗಳು ಘನೀಕೃತಗೊಂಡು ಸಹಜ ರೀತಿ ಎಂಬಂತೆಯೇ ಮಳೆ ಸುರಿಯಲಾರಂಭಿಸಿತು. ಇದರ ಮೇಲೆ ಸಂಶೋಧನೆ ನಡೆಸಿದ ವಿನ್ಸೆಂಟ್ ಚೆಫರ್ ಮೋಡಬಿತ್ತನೆಯ ಮೂಲಭೂತ ತತ್ವಗಳನ್ನು ರೂಪಿಸಿದ.ಮುಂದೆ ಇವರೆಂಗ್ ಲಂಗ್ ಮುಯೂರ್ ಎಂಬ ನೋಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಯ ಜೊತೆಗೂಡಿ 14 ಜುಲೈ,1946 ರಲ್ಲಿ ಡ್ರೈ ಐಸ್‌ನ್ನು ಮೋಡದಲ್ಲಿ ಬಿತ್ತನೆ ಮಾಡಿದಾಗ ನಡೆಯುವ ಬದಲಾವಣೆ ಕುರಿತು ಆಳ ಪ್ರಯೋಗ ನಡೆಸಿದನು.ಈ ಪ್ರಯೋಗದಲ್ಲಿ ಡ್ರೈ ಐಸ್ ಜೊತೆಗೆ ಉಪ್ಪು ,ಟಾಲ್ಕಂ ಪೌಡರ್,ಮಣ್ಣು,ಧೂಳು ಹಾಗೂ ಬೇರೆ ರಸಾಯನಿಕಗಳನ್ನು ಬಳಸಲಾಯಿತು. ವಾತಾವರಣ ವಿಜ್ಞಾನಿ ಡಾ.ಬರ್ನಾರ್ಡ ವಾಂಗ್ಯೂಟ್ ಮೋಡಬಿತ್ತನೆಯಲ್ಲಿ ಸಿಲ್ವರ್ ಅಯೋಡೈಡ್ ಬಳಕೆಯನ್ನು ಕಂಡುಹಿಡಿದರು.ನಂತರದ ದಿನಗಳಲ್ಲಿ ಸಿಲ್ವರ್ ಅಯೋಡೈಡ್ ಮೋಡಗಳನ್ನು ತಣಿಸುವ ಉತ್ತಮ ವಾಹಕವಾಗಿ ಬಳಕೆಯಾಗುತ್ತಿದೆ. ಈ ಸಂಶೋಧನೆಯ ಆಧಾರದಲ್ಲಿ ಅಮೇರಿಕದ ಮಿಲಿಟರಿಯು "ಆಪರೇಷನ್ ಪಾಪ್‌ಐ" ಎಂಬ ಮೋಡಬಿತ್ತನೆ ಕಾರ್ಯಾಚರಣೆ ನಡೆಸಿತು.ಇಂದು ಚೀನಾ, ಅರಬ್‌ದೇಶಗಳು, ಇಂಡೋನೇಷಿಯಾ, ಕುವೈತ್, ಇಸ್ರೇಲ್, ಆಸ್ಟ್ರೇಲಿಯಾ ಸೇರಿದಂತೆ ವಿಶ್ವದ 50 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಮೋಡಬಿತ್ತನೆ ಕಾರ್ಯ ನಡೆಯುತ್ತಿದೆ.

**ಭಾರತದಲ್ಲಿ ಮೋಡಬಿತ್ತನೆ :** ಭಾರತದ ಹವಾಮಾನ ಇಲಾಖೆಯ ಮಹಾನಿರ್ದೇಶಕರಾಗಿದ್ದ ಡಾ.ಎಸ್.ಕೆ.ಬ್ಯಾನರ್ಜಿಯವರು 1952 ರಲ್ಲಿ ಕಲ್ಕತ್ತಾದ ಬಳಿ ಮೋಡಬಿತ್ತನೆಯ ಪ್ರಯೋಗ ನಡೆಸಿದರು.ದೊಡ್ಡ ದೊಡ್ಡ ಹೈಡ್ರೋಜನ್ ಬಲೂನುಗಳಲ್ಲಿ ಸಿಲ್ವರ್ ಅಯೋಡೈಡ್ ಹಾಗೂ ಉಪ್ಪನ್ನು ತುಂಬಿ ಆಕಾಶಕ್ಕೆ ಹಾರಿಬಿಟ್ಟು ಕೃತಕ ಮಳೆ ತರಿಸಿದರು.1951 ರಲ್ಲಿ ಟಾಟಾ ಸಂಸ್ಥೆಯವರು ನೆಲದ ಮೇಲೆಯೇ ಸಿಲ್ವರ್ ಅಯೋಡೈಡ್ ಜನರೇಟರ್‌ಗಳನ್ನು ಸ್ಥಾಪಿಸಿ ಪಶ್ಚಿಮಘಟ್ಟ ವಲಯಗಳಲ್ಲಿ ಮಳೆ ತರಿಸುವ ಪ್ರಯತ್ನ ಮಾಡಿದರು.

ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಬರುವ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯು ಭಾರತೀಯ ಉಷ್ಣವಲಯದ ವಾತಾವರಣ ಅಧ್ಯಯನ ಸಂಸ್ಥೆಯ ಮೂಲಕ 1957 ರಿಂದ 1966ವರೆಗೆ ಉತ್ತರ ಭಾರತದ ಮೋಡಬಿತ್ತನೆ ಪ್ರಯೋಗ ನಡೆಸಿ ಶೇ.20 ರಷ್ಟು ಅಧಿಕ ಮಳೆಯನ್ನು ಪಡೆಯಿತು. ನಂತರದ ದಿನಗಳಲ್ಲಿ ತಮಿಳುನಾಡು,ಮಹಾರಾಷ್ಟ್ರ,ಉತ್ತರ ಪ್ರದೇಶ,ಆಂಧ್ರ ಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಮೋಡಬಿತ್ತನೆ ಕಾರ್ಯಗಳು ನಡೆದಿವೆ.



**ಕರ್ನಾಟಕದಲ್ಲಿ ವರ್ಷಧಾರೆ-2017;** ಕರ್ನಾಟಕದಲ್ಲಿ ಈ ಹಿಂದೆ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗದ್ದಾಗ ಅವರ ಸಚಿವ ಸಂಪುಟದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಹೆಚ್.ಕೆ.ಪಾಟೀಲರು 2004-05 ರ ಅವಧಿಯಲ್ಲಿ ಮೊದಲಬಾರಿಗೆ ಮೋಡಬಿತ್ತನೆ ಕಾರ್ಯ ನಡೆಸಿದ್ದರು. ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರಾಗಿರುವ ಹೆಚ್.ಕೆ.ಪಾಟೀಲರ ಮುತುವರ್ಜಿಯಿಂದಾಗಿ ಪ್ರಸಕ್ತ 2017 ರ ಆಗಸ್ಟ್ ಮಧ್ಯಭಾಗದಿಂದ 60 ದಿನಗಳ ಕಾಲ ಕರ್ನಾಟಕದಲ್ಲಿ ಮೋಡಬಿತ್ತನೆ ಕಾರ್ಯ ನಡೆಯುತ್ತಿದೆ. ಬೆಂಗಳೂರು ಹಾಗೂ ಹುಬ್ಬಳ್ಳಿ ವಿಮಾನ ನಿಲ್ದಾಣಗಳ ಮೂಲಕ ನಡೆಯುತ್ತಿರುವ ಈ ಕಾರ್ಯಾಚರಣೆಗೆ "ವರ್ಷಧಾರೆ ಪ್ರಾಜೆಕ್ಟ್ 2017"ಎಂದು ಹೆಸರಿಸಲಾಗಿದೆ. ಬೀಚ್ ಕ್ರಾಫ್ಟ್ ಎನ್-267ಸಿಬಿ ಹಾಗೂ ಎನ್1111ವಿ ಎಂಬ ಎರಡು ವಿಶೇಷ ವಿಮಾನಗಳ ಕಾರ್ಯಚರಣೆಯು ಅಮೇರಿಕದ ಪೈಲಟ್‌ಗಳಾದ ಬೈರೋನ್ ಪಿಎಂಡರ್ಸನ್ ಹಾಗೂ ಭಾರತೀಯ ಸಂಜಾತರಾದ ರಕ್ಷಿತ್ ಶೆಟ್ಟಿ ಅವರ ನೇತೃತ್ವದಲ್ಲಿ ನಡೆಯುತ್ತಿದೆ. ಬೆಂಗಳೂರು,ಗದಗ ಹಾಗೂ ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಸ್ಥಾಪಿಸಲಾಗಿರುವ ರಾಡಾರ್ ಕೇಂದ್ರಗಳು ಮೋಡಗಳ ಸಾಂದ್ರತೆ ಲಭ್ಯ ಇರುವ ಅಕ್ಷಾಂಶ ಮತ್ತು ರೇಖಾಂಶಗಳ ವಿವರಗಳನ್ನು ಒದಗಿಸುತ್ತವೆ.ಈ ಸೂಚನೆಗಳನ್ನು ಆಧರಿಸಿ ಭೂಮಿಯಿಂದ ಸುಮಾರು 5 ರಿಂದ 7 ಸಾವಿರ ಅಡಿಗಳ ಎತ್ತರದಲ್ಲಿ ದಟ್ಟ ಮೊಡಗಳ ಮಧ್ಯೆ ಬೆಂಕಿಯುಗುಳುವ ಸಾಧನಗಳನ್ನು ಬಳಸಿ ಸಿಲ್ವರ್ ಅಯೋಡೈಡ್ ಸಿಡಿಸಲಾಗುತ್ತದೆ. ಪ್ರತಿನಿತ್ಯ ಎರಡೂ ವಿಮಾನಗಳು ಸುಮಾರು ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸುತ್ತಿವೆ.ಮೋಡಬಿತ್ತನೆಗೊಂಡ ಪ್ರದೇಶಗಳಲ್ಲಿ ಮಳೆಯಾದ ವರದಿಗಳನ್ನು ವರ್ಷಧಾರೆ ಪ್ರಾಜೆಕ್ಟ್‌ನ ಇಂಜನೀಯರುಗಳ ತಂಡ ಪ್ರತಿನಿತ್ಯ ಸಂಗ್ರಹಿಸುತ್ತಿದೆ.

**ಏಳು ವರ್ಷಗಳ ನಂತರ ಭರ್ತಿಯಾದ ಯರಗುಪ್ಪಿ ಕೆರೆ;** ಉತ್ತರ ಕರ್ನಾಟಕದಲ್ಲಿ ಮೋಡಬಿತ್ತನೆ ಕಾರ್ಯ ಆರಂಭವಾದ ಮೇಲೆ ಉತ್ತಮ ಮಳೆಯಾಗುತ್ತಿದೆ.ಕಳೆದ ಸುಮಾರು ಏಳು ವರ್ಷಗಳಿಂದ ಎಂತಹ ಚಂಡಮಾರುತಗಳು ಬೀಸಿದರೂ ಸಹ ತುಂಬದೇ ಇದ್ದ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಗ್ರಾಮದ ಸುಮಾರು 25-30 ಎಕರೆ ವಿಸ್ತಾರದ ಕೆರೆ ,ಇದೀಗ ಭರ್ತಿಯಾಗಿದೆ. ಇದು ಮೋಡಬಿತ್ತನೆಯಿಂದ ಸುರಿದ ಮಳೆಯ ಫಲವೇ ಆಗಿದೆ ಎಂದು ಸ್ಥಳೀಯ ಗ್ರಾಮದವರೇ ಆಗಿರುವ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳು ಹಾಗೂ ಶಾಸಕರಾದ ಸಿ.ಎಸ್.ಶಿವಳ್ಳಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಬಹಳ ವರ್ಷಗಳ ನಂತರ ತುಂಬಿದ ತಮ್ಮ ಊರಿನ ಕೆರೆಗೆ ಶಾಸಕರು ಹಾಗೂ ಗ್ರಾಮಸ್ಥರು ಪೂಜೆ ಸಲ್ಲಿಸಿ,ಬಾಗಿನವನ್ನೂ ಸಹ ಅರ್ಪಿಸಿದರು.

ಕೆರ್‍ಯಾಗ್ ನೀರು ನೋಡಿ ಖುಷಿ ಆಗೇತಿ; ಕುಂದಗೋಳ ತಾಲ್ಲೂಕಿನ ಯರಗುಪ್ಪಿಯ ಕೆರೆಯ ಹೂಳನ್ನು ಕಳೆದ ವರ್ಷ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ತೆಗೆಯಲಾಗಿತ್ತು. ಇದೀಗ ಮೋಡ ಬಿತ್ತನೆಯ ಮಳೆಯಿಂದ ಕೆರೆ ತುಂಬಿರುವದು ನೋಡಿ ಖುಷಿ ಆಗಿದೆ.ಹಿಂಗಾರು ಹಂಗಾಮಿನಲ್ಲಿ ಒಂದಷ್ಟು ಕಡಲೆ,ಕುಸುಬೆ ಹಾಗೂ ಹತ್ತಿ ಬೆಳೆಯಲು ಅನುಕೂಲವಾಗಲಿದೆ.ಕುಡಿಯಲು ನೀರಿಲ್ಲದೇ ದನಕರುಗಳನ್ನು ಮಾರಾಟ ಮಾಡಿದ್ದೆವು. ಈಗ ಕೆರೆ ತುಂಬಿರುವದರಿಂದ ನಮ್ಮ ಊರಿನಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ ಎಂದು ಯರಗುಪ್ಪಿ ಗ್ರಾಮದ ರೈತ ರಾಜನಗೌಡ ಪಾಟೀಲ ಸಂತಸ ವ್ಯಕ್ತಪಡಿಸುತ್ತಾರೆ.

**ವಿಜ್ಞಾನಕ್ಕೆ ಸಂದ ಜಯ- ಸಚಿವ ಹೆಚ್.ಕೆ.ಪಾಟೀಲ**

ವಿಜ್ಞಾನ,ತಂತ್ರಜ್ಞಾನ ಮಾನವನ ಹಲವಾರು ಸಮಸ್ಯೆಗಳಿಗೆ ಪರಿಹಾರ ಒದಗಿಸಿವೆ. ಮಳೆ ಬಾರದ ಸಂದರ್ಭದಲ್ಲಿ ಕತ್ತೆ-ಕಪ್ಪೆಗಳ ಮದುವೆ,ಹೋಮ,ಹವನಗಳನ್ನು ಮಾಡುತ್ತ ಕುಳಿತರೆ ಮಳೆ ಬರುವದಿಲ್ಲ. ಜಗತ್ತಿನ ಮುಂದುವರೆದ ರಾಷ್ಟ್ರಗಳಲ್ಲಿ ಈಗಾಗಲೇ ರೂಢಿಯಲ್ಲಿರುವ ಮೋಡಬಿತ್ತನೆಯನ್ನು ನಮ್ಮ ರಾಜ್ಯದಲ್ಲಿಯೂ ಕೈಗೆತ್ತಿಕೊಂಡು ಯಶಸ್ಸು ಕಂಡುಕೊಂಡಿರುವುದು ವಿಜ್ಞಾನಕ್ಕೆ ಸಂದ ಜಯವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ ಹೆಮ್ಮೆಯಿಂದ ಹೇಳುತ್ತಾರೆ.

ವೈಜ್ಞಾನಿಕ ಮನೋಭಾವವನ್ನು ಅಳವಡಿಸಿಕೊಳ್ಳದ ಹೊರತು ಮನುಷ್ಯನ ಯಾವ ಸಮಸ್ಯೆಗಳಿಗೂ ಪರಿಹಾರವಿಲ್ಲ.ಮೂಢನಂಬಿಕೆಗಳ ಆಚರಣೆಗಳನ್ನು ಕೈಬಿಟ್ಟು,ವೈಜ್ಞಾನಿಕ ಪ್ರಯೋಗಗಳಿಗೆ ಮುಂದಾಗಬೇಕು.ವಿಜ್ಞಾನ ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ಕರೆದೊಯ್ಯುತ್ತದೆ.ಕರ್ನಾಟಕ ಸರಕಾರವು ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ನಾಡಿನ ಜನರ ಅಭ್ಯುದಯಕ್ಕಾಗಿ ಬಳಸುವ ನಿರ್ಧಾರ ಕೈಗೊಂಡು ಮೋಡಬಿತ್ತನೆಯನ್ನು ಕೈಗೊಂಡಿದೆ ಎಂದು ತಿಳಿಸಿದರು.






# ಯಾದಗಿರಿಗೆ ಬೃಹತ್ ರೈಲ್ವೆ ಬೋಗಿ ಫ್ರೇಮ್ ತಯಾರಿಕಾ ಕಾರ್ಖಾನೆ

ಸಿದ್ದೇಶ್ವರಪ್ಪ ಜಿ. ಬಿ

**ಯಾ**ದಗಿರಿ ಜಿಲ್ಲೆಯ ಕಡೇಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ತಲೆಯೆತ್ತಿರುವ ಫಿಯೆಟ್ ರೈಲ್ವೆ ಬೋಗಿ ಫ್ರೇಮ್ ತಯಾರಿಕಾ ಕಾರ್ಖಾನೆ ಮೊನ್ನೆ ಆಗಸ್ಟ್ 18 ರಂದು ಲೋಕಾರ್ಪಣೆಯಾಯ್ತು. ವಾರ್ಷಿಕ 600 ಬೋಗಿಗಳನ್ನು ಉತ್ಪಾದಿಸುವ 80 ಕೋಟಿ ರೂಪಾಯಿ ಬಂಡವಾಳದ ಈ ಘಟಕವನ್ನು ಕೇಂದ್ರ ರೈಲ್ವೆ ಸಚಿವರಾದ ಸುರೇಶ್ ಪ್ರಭಾಕರ ಪ್ರಭು ಅವರು ನವದೆಹಲಿಯ ರೈಲ್ವೇ ಮಂಡಳಿಯಲ್ಲಿ ರಿಮೋಟ್ ಲಿಂಕ್ ಮೂಲಕ ಚಾಲನೆ ನೀಡಿದರು.

ಆದರೆ, ಕಡೇಚೂರು–ಬಾಡಿಯಾಳ ಫಿಯೆಟ್ ರೈಲ್ವೆ ಬೋಗಿ ತಯಾರಿಕಾ ಕಾರ್ಖಾನೆ ಎಂದಾಕ್ಷಣ ಎಲ್ಲರ ಬಾಯಲ್ಲೂ ನಲಿಯುವ ಮಾತು ಸಂಸದ ಡಾ.ಮಲ್ಲಿಕಾರ್ಜುನ ಖರ್ಗೆ ಬಗ್ಗೆಯೇ. ಹೌದು, ಇದಕ್ಕೆ ಕಾರಣವೂ ಇದೆ. ಯಾಕೆಂದರೆ, ಫಿಯೆಟ್ ರೈಲ್ವೆ ಬೋಗಿ ಫ್ರೇಮ್ ತಯಾರಿಕಾ ಕಾರ್ಖಾನೆ ಖರ್ಗೆ ಅವರ ಕನಸಿನ ಕೂಸು. ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿ ಹರಿಕಾರರಾದ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಯತ್ನದ ಫಲವಾಗಿ ಜಿಲ್ಲೆಗೊಂದು ಬೃಹತ್ ಕಾರ್ಖಾನೆ ಬಂದಂತಾಗಿದೆ.

ಈ ಹಿಂದೆ ಕೇಂದ್ರದ ಯುಪಿಎ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಯಾದಗಿರಿ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ತಮ್ಮ ಸೀಮಿತ ಅಧಿಕಾರಾವಧಿಯಲ್ಲಿ ಯಾದಗಿರಿ– ರಾಯಚೂರು ಹೆದ್ದಾರಿಯ ಕಡೇಚೂರು–ಬಾಡಿಯಾಳ ಸಮೀಪ ರಾಜ್ಯ ಸರ್ಕಾರ ಉಚಿತವಾಗಿ ನೀಡಿದ 150 ಎಕರೆ ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪನೆಗೆ ಮುಂದಾಗಿ ಫೆಬ್ರುವರಿ 2, 2014ರಲ್ಲಿ ಶರವೇಗದಲ್ಲಿ ಶಂಕುಸ್ಥಾಪನೆಯನ್ನೂ ನೆರವೇರಿಸಿ ಘಟಕ ನಿರ್ಮಾಣಕ್ಕಾಗಿ ಸಾಕಷ್ಟು ಅನುದಾನವನ್ನೂ ಮೀಸಲಿರಿಸಿದ್ದರು. ಇದೆಲ್ಲದರ ಫಲವಾಗಿ ಇಂದು ರೈಲ್ವೆ ಬೋಗಿ ಘಟಕ ಕಾರ್ಯಾರಂಭ ಮಾಡಿದೆ.

ದಕ್ಷಿಣ ಮಧ್ಯ ರೈಲ್ವೆ ವ್ಯಾಪ್ತಿಯ ಪ್ರಥಮ ಬೋಗಿ ತಯಾರಿಕಾ ಘಟಕ ಇದಾಗಿದ್ದು, ಈಗಾಗಲೇ ದೇಶದಲ್ಲಿರುವ ಪಂಜಾಬ್‌ನ ಕಪುರ್ತಲಾದ ರೈಲ್ ಕೋಚ್ ಫ್ಯಾಕ್ಟರಿ, ತಮಿಳುನಾಡಿನ ಪೆರಂಬೂರಿನ ಇಂಟಿಗ್ರೇಲ್ ಕೋಚ್ ಫ್ಯಾಕ್ಟರಿ ಹಾಗೂ ಉತ್ತರ ಪ್ರದೇಶದಲ್ಲಿರುವ ರಾಯ್‌ಬರೇಲಿಯಲ್ಲಿರುವ ಮಾಡ್ರನ್ ರೈಲ್ವೆ ಕೋಚ್ ಫ್ಯಾಕ್ಟರಿಗಳಲ್ಲಿ ವಾರ್ಷಿಕ 2800 ಎಲ್‌ಹೆಚ್‌ಬಿ (ಲಿಂಕ್ ಹೋಫ್ಮೆನ್ ಬುಶ್)ಕೋಚ್‌ಗಳನ್ನು ನಿರ್ಮಿಸುತ್ತವೆ (ಒಂದು ಎಲ್‌ಹೆಚ್‌ಬಿ ಕೋಚ್‌ಗೆ ಎರಡು ಫಿಯೆಟ್ ಬೋಗಿಗಳು ಬೇಕಾಗಿದೆ). ಪ್ರಯಾಣಿಕರ ಅಗತ್ಯತೆಯ ಅಂತರವನ್ನು ತಗ್ಗಿಸಲು ಪಶ್ಚಿಮ ಬಂಗಾಳದ ಬಡ್ಜ್–ಬಡ್ಜ್‌ನಲ್ಲಿ ಮತ್ತು ಯಾದಗಿರಿ ಜಿಲ್ಲೆಯ ಕಡೆಚೂರು–ಬಾಡಿಯಾಳದಲ್ಲಿ ಫಿಯಟ್ ಬೋಗಿ ಫ್ರೇಮ್‌ಗಳ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಈ ಮೂಲಕ ಭಾರತೀಯ ರೇಲ್ವೆ ಹಂತ ಹಂತವಾಗಿ ಸಾಂಪ್ರದಾಯಿಕ ಬೋಗಿಗಳನ್ನು ಬದಲಿಸಿ ಲಿಂಕ್ ಹೋಫ್ಮೆನ್ ಬುಶ್ (ಎಲ್ ಹೆಚ್ ಬಿ ) ಬೋಗಿಗಳನ್ನು ಸೇರ್ಪಡೆ ಮಾಡುವ ಮೂಲಕ ಅತ್ಯಾಧುನೀಕರಣದ ಸ್ಪರ್ಶ ನೀಡಿದೆ.

**ಸುರಕ್ಷತೆ ಮತ್ತು ವೇಗ:** ಪ್ರಯಾಣಿಕರ ಹಿತದೃಷ್ಟಿಯಿಂದ ಬೋಗಿಗಳ ತಯಾರಿಕೆಯಲ್ಲಿ ಸುರಕ್ಷತೆಗೆ ಹೆಚ್ಚಿನ ಒತ್ತು





ನೀಡಲಾಗಿದೆ. ರೈಲ್ವೆ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸೇರಿ 470 ಮಂದಿ ಕಾರ್ಮಿಕರು ಶ್ರಮಿಸಲಿದ್ದಾರೆ. ಗಂಟೆಗೆ 160 ಕಿಲೋ ಮೀಟರ್ ವೇಗದಲ್ಲಿ ರೈಲುಗಳು ಚಲಿಸುವಂತೆ ವಿನ್ಯಾಗೊಳಿಸಿ ಬೋಗಿ ಫ್ರೇಮ್‌ಗಳನ್ನು ನಿರ್ಮಿಸಲಾಗುತ್ತಿದೆ.

**ರೋಬೋದಿಂದ ವೆಲ್ಡಿಂಗ್:** ಸೈಡ್ ಬೋಗಿಗಳನ್ನು ಜಿಗ್ಸ್ ಮತ್ತು ಫಿಕ್ಚರ್‌ಗಳ ಮೇಲೆ ಆರಂಭಿಕ ವೆಲ್ಡಿಂಗ್‌ನ್ನು ಮಾನವಿಕವಾಗಿ ಮಾಡಲಾಗುವುದು. ನಂತರ ಬೋಗಿಗಳ ಫ್ರೇಮ್‌ಗಳ ಸಂಪೂರ್ಣ ವೆಲ್ಡಿಂಗ್ ಮಾಡುವ ಜವಾಬ್ದಾರಿ ರೋಬೋಟಿಕ್ ಯಂತ್ರದ್ದು. 6 ಕೋಟಿ ರೂಪಾಯಿ ವೆಚ್ಚದ ಈ ರೋಬೋ, ಗ್ಯಾಸ್ ವೆಲ್ಡಿಂಗ್ ಮಾಡುವ ಮೂಲಕ ಬೋಗಿ ನಿರ್ಮಾಣದಲ್ಲಿ ತನ್ನ ಗುರುತರ ಸೇವೆ ಸಲ್ಲಿಸಲಿದೆ. ಪ್ರತಿ ಪಾಳಿಯಲ್ಲಿ 2 ಬೋಗಿಗಳನ್ನು ವೆಲ್ಡಿಂಗ್ ಮಾಡುವ ಸಾಮರ್ಥ್ಯ ಈ ರೋಬೋಗಿದೆ.

**ಸ್ವಯಂಚಾಲಿತ ಯಂತ್ರ** : 25 ಕೋಟಿ ರೂಪಾಯಿ ವೆಚ್ಚದಲ್ಲಿ ಬೋಗಿಯ ವಿವಿಧ ಉಪಕರಣಗಳನ್ನು ಜೋಡಿಸುವ ಯಂತ್ರ ಕಾರ್ಯನಿರ್ವಹಿಸಲಿದೆ. ಭಾರೀ ಪ್ರಮಾಣದ ಕಬ್ಬಿಣ ಮತ್ತು ಉಕ್ಕಿನ ತುಂಡುಗಳನ್ನು ಕತ್ತರಿಸುವುದು, ಜೋಡಿಸುವುದು (ಮಿಲ್ಲಿಂಗ್) ಕೊರೆಯುವುದು (ಡ್ರಿಲ್ಲಿಂಗ್), ಬೋರಿಂಗ್, ಥ್ರೆಡ್ಡಿಂಗ್, ಟ್ಯಾಪಿಂಗ್ ಮುಂತಾದ ಶ್ರಮದ ಕೆಲಸಗಳನ್ನು ಸ್ವಯಂ ಚಾಲಿತ ಯಂತ್ರವೇ ಮುಗಿಸಲಿದೆ. ಎಟಿಸಿ 48 ಉಪಕರಣಗಳನ್ನು ಹೊಂದಿದ್ದು, ಉಪಕರಣಗಳ ವರ್ಗಾವಣೆ ಅಥವಾ ವಿನಿಮಯ ಅವಧಿ 30 ಸೆಕೆಂಡ್‌ಗಳಾಗಿರುತ್ತದೆ. ಹಾಗೆಯೇ 2.4 ಕೊಟಿ ರೂಪಾಯಿ ವೆಚ್ಚದ ಬೋಗಿ ಫ್ರೇಮ್ ಶಾಟ್ ಬ್ಲಾಸ್ಟಿಂಗ್ ಮಷೀನ್, 3 ಕೋಟಿ ರೂಪಾಯಿ ವೆಚ್ಚದ ಬೋಗಿಗಳಿಗೆ ಬಣ್ಣ ಬಳಿಯುವ ಬೂತ್ ಮುಂತಾದ ಅತ್ಯಾಧುನಿಕ ಯಂತ್ರಗಳನ್ನು ರೈಲ್ವೆ ಕೋಚ್ ಘಟಕ ಹೊಂದಿದೆ.

ವಿಶೇಷತೆಗಳು: ಕಾರ್ಖಾನೆಯನ್ನು ಫ್ರೀ ಇಂಜಿನಿಯರಿಂಗ್ ಬಿಲ್ಡಿಂಗ್ (ಪಿಇಬಿ) ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆ. ಪಿ.ಇ.ಬಿ. ಶೆಡ್‌ಗಳು ಅತ್ಯುತ್ತಮ ವಾತಾವರಣ ಸೇರಿದಂತೆ ಹಲವಾರು ಅನುಕೂಲತೆಗಳನ್ನು ಹೊಂದಿದೆ. ವಿನ್ಯಾಸ ಮತ್ತು ಸಿಕೆಡಿಯ



**ಕಾರ್ಖಾನೆಯು ಯಾದಗಿರಿ ಜಿಲ್ಲಾ ಕೇಂದ್ರದಿಂದ 40 ಕಿ.ಮೀ. ದೂರದಲ್ಲಿದ್ದು, ನೆರೆಯ ರಾಯಚೂರು ಕೂಡ 40 ಕಿ.ಮೀ. ದೂರದಲ್ಲಿದೆ. ಇನ್ನು ಸೈದಾಪುರ ರೈಲ್ವೆ ನಿಲ್ದಾಣ 10 ಕಿ.ಮೀ. ಸಮೀಪದಲ್ಲಿದೆ. ಒಟ್ಟಿನಲ್ಲಿ ಈ ಭಾಗದ ಪ್ರಮುಖ ಕಾರ್ಖಾನೆ ಇದಾಗಿದ್ದು, ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ ನೂರಾರು ಸ್ಥಳೀಯರಿಗೆ ಉದ್ಯೋಗ ಪ್ರಾಪ್ತಿಯಾಗಲಿದೆ.**





(ಸಂಪೂರ್ಣ ನಾಕ್‌ಡೌನ್) ಸ್ಥಿತಿಯಲ್ಲಿ ಪ್ರದೇಶಕ್ಕೆ ಸಾಗಿಸಿದ ನಂತರ ಫ್ಯಾಕ್ಟರಿ ಕ್ಷೇತ್ರದಲ್ಲೇ ಸಂಪೂರ್ಣವಾಗಿ ಫ್ಯಾಬ್ರಿಕೇಟ್ ಮಾಡಿ ಸೇರಿಸಿ ನಟ್–ಬೋಲ್ಟ್‌ಗಳನ್ನು ಬಳಸಿ ನಿರ್ಮಿಸುವ ಮೂಲಕ ಉತ್ಪಾದನಾ ಅವಧಿಯನ್ನು ತಗ್ಗಿಸಲಾಗಿದೆ. ಅದಲ್ಲದೇ ರೈಲ್ವೆ ಕೋಚ್ ಕಾರ್ಖಾನೆಯಲ್ಲಿ ಅತ್ಯುನ್ನತ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯ ಅಗತ್ಯಗಳನ್ನು ಸಾಧಿಸಲು ಸಂಕೀರ್ಣ ಯಂತ್ರಗಳು ಮತ್ತು ಉಪಕರಣಗಳ ಮೂಲಕ ಅತ್ಯಾಧುನಿಕ ಉತ್ಪಾದನಾ ವಿಧಾನಗಳನ್ನು ಅಳವಡಿಸಲಾಗಿದೆ.

ಪರಿಸರ ಸ್ನೇಹಿ: ತ್ಯಾಜ್ಯ ಮುಕ್ತ ಕಾರ್ಖಾನೆಯಾಗಿದ್ದು, ಘಟಕದ ಮೇಲ್ಛಾವಣಿಯಲಿ ಉಪಕರಣಗಳನ್ನು ಜೋಡಿಸಿ 232 ಕೆವಿ ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನೆ ಮಾಡಲಿದೆ. ಈ ವಿದ್ಯುತ್‌ನ್ನು ಕಾರ್ಖಾನೆಗೆ ಬಳಕೆ ಮಾಡಿಕೊಳ್ಳಲಾಗುತ್ತದೆ. ಮಳೆ ಕೊಯ್ಲು, 25 ಸಾವಿರ ಮರ ಬೆಳೆಸುವುದು ಮುಂತಾದ ಪರಿಸರ ಸ್ನೇಹಿ ಕಾರ್ಯಗಳನ್ನೂ ಕೂಡ ಕೈಗೊಂಡಿದೆ.

ಮೂಲಭೂತ ಸೌಕರ್ಯ: ರೈಲ್ವೆ ವಿಕಾಸ್ ನಿಗಮ ನಿಯಮಿತವು ಸ್ಥಾವರದ ಕಾರ್ಯನಿರ್ವಹಣಾ ಏಜೆನ್ಸಿಯಾಗಿದ್ದು, ಕಾಮಗಾರಿಯನ್ನು ಮೆ.ಟಾಟಾ ಪ್ರಾಜೆಕ್ಟ್ ನಿಯಮಿತ ವಹಿಸಿಕೊಂಡಿದೆ. 150 ಎಕರೆ ಪ್ರದೇಶದಲ್ಲಿ ಕಾರ್ಖಾನೆ ವಿಸ್ತರಿಸಿದ್ದು, ಸುತ್ತ ಬೇಲಿ ಒಳಗೊಂಡ ಕಾಪೌಂಡ್ ನಿರ್ಮಿಸಲಾಗಿದೆ. ಹಾಗೆಯೇ ರಸ್ತೆ, ಸಿಬ್ಬಂದಿಯ ವಸತಿ ಗೃಹ, ನೀರಿನ ಸೌಕರ್ಯ, ಒಳಚರಂಡಿ ವ್ಯವಸ್ಥೆ ಮಾಡಲಾಗಿದೆ. ಇನ್ನು ಕೈತೋಟದಿಂದ ಕೂಡಿರುವ ಹಸಿರು, ಕಾರ್ಖಾನೆಯ ಅಂದವನ್ನು ಹೆಚ್ಚಿಸಿದೆ. ಕಾರ್ಖಾನೆಯ ಕೆಳಕಂಡ ಮಾದರಿ ಉಪಕ್ರಮಗಳ ಮೂಲಕ ಹಸಿರು ಮತ್ತು ಪರಿಸರ ಸ್ನೇಹಿ ವಿಧಾನಗಳನ್ನು ಪ್ರದರ್ಶಿಸಿದೆ.

ಕಾರ್ಖಾನೆಯು ಯಾದಗಿರಿ ಜಿಲ್ಲಾ ಕೇಂದ್ರದಿಂದ 40 ಕಿ.ಮೀ. ದೂರದಲ್ಲಿದ್ದು, ನೆರೆಯ ರಾಯಚೂರು ಕೂಡ 40 ಕಿ.ಮೀ. ದೂರದಲ್ಲಿದೆ. ಇನ್ನು ಸೈದಾಪುರ ರೈಲ್ವೆ ನಿಲ್ದಾಣ 10 ಕಿ.ಮೀ. ಸಮೀಪದಲ್ಲಿದೆ. ಒಟ್ಟಿನಲ್ಲಿ ಈ ಭಾಗದ ಪ್ರಮುಖ ಕಾರ್ಖಾನೆ ಇದಾಗಿದ್ದು, ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ ನೂರಾರು ಸ್ಥಳೀಯರಿಗೆ ಉದ್ಯೋಗ ಪ್ರಾಪ್ತಿಯಾಗಲಿದೆ. ಈ ಮೂಲಕ ಸಂಸದ ಡಾ. ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಅಚ್ಚಳಿಯಲಿದೆ ಉಳಿಯಲಿದೆ.

ಈ ಕಾರ್ಖಾನೆಯ ಲೋಕಾರ್ಪಣೆ ಸಂದರ್ಭದಲ್ಲಿ ಸಂಸದರಾ ಡಾ. ಮಲ್ಲಿಕಾರ್ಜುನ ಖರ್ಗೆ ಅವರು "ರೈಲ್ವೆ ಬೋಗಿ ತಯಾರಿಕಾ ಕಾರ್ಖಾನೆ ಸ್ಥಾಪಿಸಬೇಕೆಂಬ ಹಿಂದಿನ ಯುಪಿಎ ಸರ್ಕಾರದ ಕನಸು ನನಸಾಗಿದೆ. ಈ ಮೂಲಕ ನಾವು ನುಡಿದಂತೆ ನಡೆದಿದ್ದೇವೆ. ಇದರಿಂದ ನನಗೂ ಸಂತಸವಾಗಿದೆ" ಎಂದರೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ವಿಧಾನಸಭಾ ಸದಸ್ಯರಾದ ಬಾಬುರಾವ್ ಚಿಂಚಿಸನೂರ ಅವರು "ಸಂಸದ ಡಾ. ಮಲ್ಲಿಕಾರ್ಜುನ ಖರ್ಗೆ ಅವರ ಪ್ರಯತ್ನದ ಫಲವಾಗಿ ಸ್ಥಾಪನೆಯಾಗಿರುವ ಈ ಕಾರ್ಖಾನೆಯಿಂದ ಸ್ಥಳೀಯರಿಗೆ ಉದ್ಯೋಗ ಅವಕಾಶ ಸಿಗಲಿದೆ" ಎಂದು ಅಭಿಪ್ರಾಯಪಟ್ಟರು.



# ಕೆರೆ ತುಂಬಿಸಲಿರುವ ಬೆಂಗಳೂರು ತ್ಯಾಜ್ಯ ಸಂಸ್ಕರಿಸಿದ ನೀರು



ಸಿ. ವಿ. ವೇದಾವತಿ

**ಬೆಂ**ಗಳೂರು– ಸದಾಕಾಲ ಹರಿಯುವ ಯಾವ ನದಿ ನಾಲೆಗಳ ಆಸರೆ ಇಲ್ಲದ ಮಹಾನಗರ. ಅಂದಾಜು 480 ವರ್ಷಗಳ ಹಿಂದೆ ಕೆಂಪೇಗೌಡರಿಂದ ರೂಪುಗೊಂಡ ಬೆಂಗಳೂರಿಗೆ ಆರಂಭದಿಂದಲೂ ಕೆರೆ–ಕುಂಟೆ ಕಲ್ಯಾಣಿಗಳೇ ನೀರಿಗೆ ಆಧಾರ. ಸರಿ ಸುಮಾರು ಒಂದು ಕೋಟಿ ಜನಸಂಖ್ಯೆಯನ್ನು ತನ್ನಲ್ಲಿಟ್ಟುಕೊಂಡ ಬೆಂಗಳೂರಿನ ನಾಗರಿಕರಿಗೆ ಕುಡಿಯುವ ನೀರು ಪೂರೈಸುವ ವ್ಯವಸ್ಥೆ ಹೆಸರುಘಟ್ಟ, ತಿಪ್ಪಗೊಂಡನಹಳ್ಳಿ ಕೆರೆಗಳಿಂದ ಶುರುವಾದರೂ ಈಗ ನೀರುಣಿಸುತ್ತಿರುವುದು ಕಾವೇರಿ ನದಿ.

ಬೆಂಗಳೂರಿನಂತೆ ಬೆಂಗಳೂರು ನಗರವನ್ನು ಸುತ್ತುವರೆದಿರುವ ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ನೀರಿನ ಅವಶ್ಯಕತೆಗಳನ್ನು ಹಿಂದಿನಿಂದಲೂ ಪೂರೈಸುತ್ತಿದ್ದುದ್ದು ನಂದಿಗಿರಿ ಶ್ರೇಣಿಯಿಂದ ಹರಿಯುವ ನದಿ ಮೂಲಗಳಿಂದ. ಈ ನದಿಗಳು ವರ್ಷದುದ್ದಕ್ಕೂ ಹರಿಯುವಂತಹುಗಳಲ್ಲ, ಈಗಿನ ವರ್ಷಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುತ್ತಿದೆ. ಜನಸಂಖ್ಯೆ ಹೆಚ್ಚುತ್ತಲೇ ಇದೆ. ಜೀವಜಲ ಕೊಡುವ ಕೆರೆಗಳು ಬತ್ತಿ ಬರಡಾಗಿವೆ. ಹನಿಹನಿ ನೀರಿಗೂ ಹಾಹಾಕಾರವಿದೆ. ವಿಶ್ವದಲ್ಲಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ನಗರಗಳಲ್ಲಿ ಒಂದೆಂಬ ಹೆಗ್ಗಳಿಕೆ ಪಡೆದಿರುವ ರಾಜಧಾನಿ ಬೆಂಗಳೂರಿನ ಜನಸಂಖ್ಯೆ ಹಾಗೂ ನೀರಿನ ಬೇಡಿಕೆ ಏರು ಮುಖದಲ್ಲಿಯೇ ಇದೆ. ಆದರೆ ಬೆಂಗಳೂರಿನ ತ್ಯಾಜ್ಯ ನೀರು ಮಾತ್ರ ಯಾವುದೇ ಉಪಯೋಗವಿಲ್ಲದೆ ಪೋಲಾಗುತ್ತಿದೆ. ಹೆಚ್ಚಿನ ಪ್ರಮಾಣದ ನೀರು ನೆರೆಯ ರಾಜ್ಯಗಳಿಗೆ ಹರಿದು ಹೋಗುತ್ತಲೇ ಇದೆ. ಬೇರೆ ದೇಶಗಳಲ್ಲಿ ತ್ಯಾಜ್ಯ ನೀರಿನ ಮರುಬಳಕೆ ಆರಂಭಗೊಂಡು ಬಹಳ ಕಾಲವೇ ಹೋಗಿದೆ. ಅನೇಕ ದ್ವೀಪ ರಾಷ್ಟ್ರಗಳು ಸಮುದ್ರನೀರನ್ನು ಸಂಸ್ಕರಿಸಿ ಕೃಷಿ ಹಾಗೂ ಕುಡಿಯುವುದಕ್ಕಾಗಿ ಉಪಯೋಗ ಮಾಡುತ್ತಿರುವುದು ಹಳೆಯ ವಿಚಾರ. ಸಿಂಗಾಪುರ ರಾಷ್ಟ್ರವಂತು ಸಮುದ್ರನೀರು – ಮಳೆಯ ನೀರು ಹಾಗೂ ನಗರದ ತ್ಯಾಜ್ಯನೀರು ಸಂಸ್ಕರಿಸುವ ನವೀನ ತಂತ್ರಜ್ಞಾನ ಅಭಿವೃದ್ಧಿಪಡಿಸಿ ಯಶಸ್ವಿಯಾಗಿ ನೀರು ಉಪಯೋಗಿಸುತ್ತಿದೆ. ಇದನ್ನೆಲ್ಲ ಅವಲೋಕಿಸಿರುವ ಕರ್ನಾಟಕ ಸರ್ಕಾರ ಬೆಂಗಳೂರು ನಗರದ ತ್ಯಾಜ್ಯ ನೀರು ಸಂಸ್ಕರಿಸಿ ಏತ ನೀರಾವರಿ ಯೋಜನೆಯ ಮೂಲಕ ನಗರ ಸುತ್ತಲಿನ 65 ಕೆರೆಗಳಿಗೆ ಪೂರೈಸುವ ಬೃಹತ್ ಕಾರ್ಯಕ್ರಮವನ್ನೀಗ ಕೈಗೆತ್ತಿಕೊಂಡಿದೆ.

ಕರ್ನಾಟಕ ಸರ್ಕಾರ ಈಗಾಗಲೇ ಚಲ್ಲಘಟ್ಟ ಕಣಿವೆಯಲ್ಲಿ ಸಂಗ್ರಹವಾಗುವ ತ್ಯಾಜ್ಯನೀರು ಸಂಸ್ಕರಿಸಿ ಕೋಲಾರದ ಕೆರೆಗಳಿಗೆ ಹರಿಸುವ ಕೆ.ಸಿ. ವ್ಯಾಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು ಇದೀಗ ಬೆಂಗಳೂರಿನ ಹೆಬ್ಬಾಳ–ನಾಗವಾರ ಕಣಿವೆಯ ನೀರು ಸಂಸ್ಕರಿಸಿ ಕೆರೆಗಳಿಗೆ ಹರಿಸುವ ಯೋಜನೆಗೆ ಚಾಲನೆ ಕೊಟ್ಟಿದೆ.ಕೆರೆಗಳಿಗೆ ನೀರು ತುಂಬುವುದರಿಂದ ಅಂತರ್ಜಲ ವೃದ್ಧಿಗೊಳ್ಳುವುದರ ಜೊತೆಗೆ ನೀರಿನ ಬವಣೆ ತಪ್ಪುತ್ತದೆ. ತ್ಯಾಜ್ಯ ನೀರು ಸುವ್ಯವಸ್ಥಿತ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಣೆಗೊಳ್ಳುವುದರಿಂದ ಬೇಸಾಯ ಬಳಕೆ. ಜಾನುವಾರು ಉಪಯೋಗಕ್ಕೆ ಯಾವ ಅಡ್ಡಿಯೂ ಇಲ್ಲವೆಂಬುದು ತಜ್ಞರ ಅಭಿಪ್ರಾಯವಾಗಿದ್ದು ಇದು ಅಂತರ್ಜಲಕ್ಕೂ ಯಾವುದೇ ಅಪಾಯ ತರುವುದಿಲ್ಲ.



ಬೆಂಗಳೂರಿನಲ್ಲಿ ಸಾಕಷ್ಟು ತ್ಯಾಜ್ಯ ನೀರು ಲಭ್ಯವಿದ್ದರೂ ಹೆಬ್ಬಾಳ – ನಾಗವಾರ ಕಣಿವೆ ಯೋಜನೆಯಲ್ಲಿ ಸಿಗುವ ನೀರು 2.70 ಟಿ.ಎಂ.ಸಿ. ಎರಡು ಹಂತಗಳಲ್ಲಿ ಸಂಸ್ಕರಣಗೊಳ್ಳುವ ನೀರು ಪಂಪ್‌ಹೌಸ್‌ಗಳಿಂದ ಕೆರೆಗಳಿಗೆ ಸಾಗಣೆಯಾಗುವುದು. ಮುಖ್ಯಮಂತ್ರಿ ಸಿದ್ಧರಾಮಯ್ಯನವರು ದೇಶದಲ್ಲಿಯೇ ಪ್ರಥಮ ಎನ್ನಲಾಗಿರುವ ಬೃಹತ್ ಏತ ನೀರಾವರಿ ಯೋಜನೆಗೆ ದೇವನಹಳ್ಳಿಯಲ್ಲಿ ಈಚೆಗೆ ಚಾಲನೆ ಕೊಟ್ಟರು. ಬೆಂಗಳೂರು ಉತ್ತರ ತಾಲ್ಲೂಕಿನ 12 ಕೆರೆಗಳು. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ 9 ಕೆರೆಗಳು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ 44 ಕೆರೆಗಳಿಗೆ ಸಂಸ್ಕರಿಸಿದ ಈ ನೀರು ಹರಿಯುವುದು. ಮುಂದಿನ ದಿನಗಳಲ್ಲಿ ವೃಷಭಾವತಿ ಕಣಿವೆಯಿಂದಲೂ ಇಂತಹದ್ದೊಂದು ಯೋಜನೆ ರೂಪಿಸಲು ಆಲೋಚಿಸಿದ್ದು ಇದರಿಂದ ನೆಲಮಂಗಲ–ಮಾಗಡಿ–ಬೆಂಗಳೂರು ಕೆರೆಗಳಿಗೂ ನೀರು ಪೂರೈಕೆ ಆಗಲಿದೆ.

ಇದಕ್ಕೆ ಪೂರಕವಾಗಿ ಸೆಪ್ಟೆಂಬರ್ 4 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೃಷಭಾವತಿ ವ್ಯಾಲಿ, ಕೆ. ಮತ್ತು ಸಿ ವ್ಯಾಲಿ, ಹೆಬ್ಬಾಳ ಮತ್ತು ದೊಡ್ಡಬೆಲೆಯಲ್ಲಿ ಒಟ್ಟು 440 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಶಂಕುಸ್ಥಾಪನೆಯನ್ನು ನೆರವೇರಿಸಿ ಮಾತನಾಡಿ ಬೆಂಗಳೂರು ನಗರಕ್ಕೆ ಒಳಚರಂಡಿಯಾಗಿ 95 ವರ್ಷಗಳಾಗಿವೆ, ಅಂದಿನಿಂದ ಇಂದಿನವರೆಗೆ ಒಳಚರಂಡಿಯನ್ನು ಗಂಭೀರವಾಗಿ ಪರಿಗಣಿಸದಿರುವುದು, ತ್ಯಾಜ್ಯ ನೀರಿನ ಸಂಸ್ಕರಣೆ ಮಾಡದಿರುವುದು ಇಂದಿನ ಈ ಪರಿಸ್ಥಿತಿಗೆ ಕಾರಣವಾಗಿದೆ ಅವರು ಅಭಿಪ್ರಾಯಪಟ್ಟರು.

ಈ ಕಾಮಗಾರಿಯು 2020ರಲ್ಲಿ ಪೂರ್ಣಗೊಳ್ಳಲಿದ್ದು, ಸಂಸ್ಕರಣವಾದ ನೀರನ್ನು ಬೆಂಗಳೂರು ಅಕ್ಕಪಕ್ಕದ ಜಿಲ್ಲೆಗಳಾದ ಕೋಲಾರ, ಚಿಕ್ಕ ಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಕೆರೆಗಳಿಗೆ ತುಂಬಿಸಲು ಯೋಜಿಸಲಾಗಿದೆ ಎಂದರು. ಹೆಬ್ಬಾಳ – ನಾಗವಾರ ಕಣಿವೆಯಲ್ಲಿ ಈಗ ಶುರು ಮಾಡಿರುವ ಮೂರು ಸಂಸ್ಕರಣಾ ಘಟಕಗಳಿಂದ ಪ್ರತಿನಿತ್ಯ 210 ದಶಲಕ್ಷ ಲೀಟರ್ ನೀರು ಸಂಸ್ಕರಣಗೊಂಡ ಕೆರೆಗಳನ್ನು ಸೇರಲಿದ್ದು ಒಟ್ಟಾರೆ 5 ಪಂಪ್‌ಹೌಸ್‌ಗಳು ನೀರು ಪೂರೈಸುವ ಕೆಲಸ ಮಾಡಲಿವೆ.

ಸತತ ಮಳೆ ವೈಫಲ್ಯದಿಂದ ಬಯಲು ಸೀಮೆಯ ಜಿಲ್ಲೆಗಳಲ್ಲಿ ನೀರಿನ ಕೊರತೆ ಕಾಡಲು ಶುರುವಾಗಿ ದಶಕಗಳೇ ಕಳೆದಿವೆ. ಕೆರೆ–ತೆರೆದ ಬಾವಿಗಳು ಹಾಗೂ ಕೊಳವೆ ಬಾವಿಗಳ ಮೇಲಿನ ಒತ್ತಡ ಹೆಚ್ಚುತ್ತಲೇ ಇದ್ದು 1500 ಅಡಿ ಕೊರೆದರೂ ನೀರು ಸಿಗದ ಪರಿಸ್ಥಿತಿ ತಲೆದೋರಿದ್ದು ಆಳದಲ್ಲಿ ಸಿಕ್ಕ ನೀರಿನಲ್ಲಿ ವಿಷಯುಕ್ತ ಫ್ಲೋರೆಡ್ ಅಂಶಗಳು ತುಂಬಿರುವುದು ಬೆಳಕಿಗೆ ಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಕೆರೆಗಳಿಗೆ ಪೂರೈಸುತ್ತಿರುವುದು ಅಂತರ್ಜಲ ಮರುಪೂರಣಕ್ಕೆ ಅವಕಾಶ ಸಿಗಲಿದೆ.

ಬರಗಾಲದಿಂದ ನೀರಿಗೆ ಬವಣೆ ಪಡುತ್ತಿರುವ ಈ ಮೂರು ಬಯಲು ಸೀಮೆ ಜಿಲ್ಲೆಗಳಿಗೆ ತ್ಯಾಜ್ಯ ನೀರು ಶುದ್ಧೀಕರಿಸಿ ಕೆರೆಗಳಿಗೆ ಪೂರೈಸುತ್ತಿರುವ ಎಚ್.ಎನ್. (ಹೆಬ್ಬಾಲ – ನಾಗವಾರ) ಕಣಿವೆ ಏತನೀರಾವರಿ ಯೋಜನೆ 'ಬರ' ಮುಕ್ತಗೊಳಿಸುವ ಆಶಯದ ಯೋಜನೆ.

**ತ್ಯಾಜ್ಯ ನೀರು ಸಂಸ್ಕರಣ ಘಟಕಗಳ ತಾಂತ್ರಿಕ ಮಾಹಿತಿ:**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾವೇರಿ ನದಿಯಿಂದ ಸುಮಾರು 1400 ಎಂ.ಎಲ್.ಡಿ. ನೀರನ್ನು ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ ಪೂರೈಸುತ್ತಿದೆ. ಸುಮಾರು 440 ಎಂ.ಎಲ್.ಡಿ ನೀರನ್ನು ಕೊಳವೆಬಾವಿಗಳಿಂದ ಪಡೆಯಲಾಗುತ್ತಿದೆ ಎಂದು ಅಂದಾಜಿಸಲಾಗಿದೆ. ಒಟ್ಟು 1800 ಎಂ.ಎಲ್.ಡಿ. ನೀರನ್ನು ಉಪಯೋಗಿಸುತ್ತಿದ್ದು, ಅದರಲ್ಲಿ 80% ರಷ್ಟು ನೀರು ತ್ಯಾಜ್ಯ ನೀರಾಗಿ ಪರಿವರ್ತಿತಗೊಳ್ಳುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 800 ಚ.ಕಿ.ಮೀ ಗಳಷ್ಟು ವಿಸ್ತಾರವಾಗಿದ್ದು, ಅದರಲ್ಲಿ ಕೇಂದ್ರ ಭಾಗವು 245 ಚ.ಕಿ.ಮೀ. ಹಿಂದಿನ ಸಿ.ಎಂ.ಸಿ./ಟಿ.ಎಂ.ಸಿ. ಪ್ರದೇಶವು 330 ಚ.ಕಿ.ಮೀ. ಹಾಗೂ 110 ಹಳ್ಳಿಗಳ ಪ್ರದೇಶವು 225 ಚ.ಕಿ.ಮೀ. ಗಳಷ್ಟಿದೆ. ಕೇಂದ್ರ ಭಾಗಕ್ಕೆ 3300 ಕಿ.ಮೀ. ಗಳಷ್ಟು ಒಳಚರಂಡಿ ಜಾಲವನ್ನು ಹಾಗೂ 300 ಕಿ.ಮೀ. ಗಳಷ್ಟು ಉದ್ದದ ಸಬ್‌ಬೈನ್ ಅನ್ನು ಒದಗಿಸಲಾಗಿದೆ. ಹಿಂದಿನ ಸಿ.ಎಂ.ಸಿ./ಟಿ.ಎಂ.ಸಿ. ಪ್ರದೇಶಗಳಿಗೆ ಕೆ.ಎಂ.ಆರ್.ಪಿ. ಯೋಜನೆಯಡಿ 2409 ಕಿ.ಮಿಗಳಷ್ಟು ಉದ್ದದ ಒಳಚರಂಡಿ ಜಾಲವನ್ನು ಸುಮಾರು 1190 ಕೋಟಿ. ವೆಚ್ಚನ ಕಲ್ಪಿಸಲಾಗಿದೆ.

ಸದ್ಯ ಬೆಂಗಳೂರಿನಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ಒಟ್ಟು 726 ಎಂ.ಎಲ್.ಡಿ. ಸಾಮರ್ಥ್ಯದ 15 ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸಿ ಕಾರ್ಯಾಚರಣೆಗೊಳಿಸಿ ನಿರ್ವಹಿಸಲಾಗುತ್ತಿದೆ. ಕಾವೇರಿ ನೀರು ಸರಬರಾಜು ಯೋಜನೆಯು 4 ನೆ ಹಂತದ 2 ನೇ ಘಟಕದಡಿಯಲ್ಲಿ ಸುಮಾರು 500 ಎಂ.ಎಲ್.ಸಿ. ಹೆಚ್ಚುವರಿ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಅದರಿಂದ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ನೀರನ್ನು ಸಂಸ್ಕರಿಸಲು 336 ಎಂ.ಎಲ್.ಡಿ. ಸಾಮರ್ಥ್ಯದ 10ಹೊಸ ಘಟಕಗಳನ್ನು ನಿರ್ಮಿಸಲಾಗುತ್ತಿದೆ.

ಇತ್ತೀಚೆಗೆ ಕೆ & ಸಿ ಕಣಿವೆಯಲ್ಲಿ 60 ಎಂ.ಎಲ್.ಡಿ. ಸಾಮರ್ಥ್ಯದ, ಚಿಕ್ಕಬಾಣಾವರ, ನಾಗಸಂದ್ರ, ರಾಜಾಕೆನಾಲ್‌ನಲ್ಲಿ ಒಟ್ಟು 65 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ಮುಖ್ಯಮಂತ್ರಿಗಳು ಲೋಕಾರ್ಪಣೆಗೊಳಿಸಿದರು. ಇದರಿಂದ ಪ್ರಸ್ತುತ 851 ಎಂ.ಎಲ್.ಡಿ. ಸಾಮರ್ಥ್ಯದದಲ್ಲಿ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಲಾಗುತ್ತಿದೆ. ಉಳಿದ 211 ಎಂ.ಎಲ್.ಸಿ. ತ್ಯಾಜ್ಯ ನೀರು ಸಂಸ್ಕರಿಸುವ ಘಟಕಗಳ ಕಾಮಗಾರಿಯು ಭರದಿಂದ ಸಾಗುತ್ತಿದ್ದು, ಈ ವರ್ಷಾಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ಒಟ್ಟು 1062 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರನ್ನು ಸಂಸ್ಕರಿಸದಂತಾಗುತ್ತದೆ. ಮುಂದುವರೆದಂತೆ ಈಗಿರುವ ಶುದ್ಧೀಕರಣ ಘಟಕಗಳ ಜೊತೆಗೆ ವಿ. ವ್ಯಾಲಿ, ಕೆ & ಸಿ ವ್ಯಾಲಿ, ಹೆಬ್ಬಾಳ, ದೊಡ್ಡಬೆಲೆಯಲ್ಲಿ 440 ಎಂ.ಎಲ್.ಡಿ. ಸಾಮರ್ಥ್ಯದ 4 ಹೊಸ ಎಸ್.ಟಿ.ಪಿ.ಗಳನ್ನು ರಾಜ್ಯ ಸರ್ಕಾರದಡಿ ಸುಮಾರು ರು. 1565 ಕೋಟಿ ಮೊತ್ತದಲ್ಲಿ ವಿನ್ಯಾಸಗೊಳಿಸಿ ನಿರ್ಮಿಸಿ 10 ವರ್ಷಗಳ ಅವಧಿಗೆ ಕಾರ್ಯಾಚರಣೆಗೊಳಿಸುವ ಮತ್ತು ನಿರ್ವಹಿಸುವ ಯೋಜನೆಯನ್ನು ರೂಪಿಸಲಾಗಿದೆ.

ವಿ. ವ್ಯಾಲಿಯಲ್ಲಿ 150 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ: ಬೆಂಗಳೂರಿನ ಪಶ್ಚಿಮ ಭಾಗದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು Activated sludge process ಆಧಾರಿತ ವಿದ್ಯುತ್ ಉತ್ಪಾದನೆ ಹಾಗು ಜೈವಿಕ ಪೋಷಕಾಂಶಗಳನ್ನು ತೆಗೆದುಹಾಕುವ ತಂತ್ರಜ್ಞಾನದೊಂದಿಗೆ ವಿ. ವ್ಯಾಲಿ ನಾಯಂಡಹಳ್ಳಿಯಲ್ಲಿ 150 ಎಂ.ಎಲ್.ಡಿ. ಸಾಮರ್ಥ್ಯದ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡಿದ್ದು 10 ವರ್ಷಗಳ ಅವಧಿಗೆ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ ಸೇರಿದಂತೆ ಕಾಮಗಾರಿಯನ್ನು M/s SUEZ India Pvt. Ltd., ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ.



ಕೆ & ಸಿ ವ್ಯಾಲಿಯಲ್ಲಿ 150 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ: ಬೆಂಗಳೂರಿನ ಕೆ & ಸಿ ವ್ಯಾಲಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು Activated sludge process ಆಧಾರಿತ ವಿದ್ಯುತ್ ಉತ್ಪಾದನೆ ಹಾಗೂ ಜೈವಿಕ ಪೋಷಕಾಂಶಗಳನ್ನು ತೆಗೆದು ಹಾಕುವ ತಂತ್ರಜ್ಞಾನದೊಂದಿಗೆ ಕೆ & ಸಿ ವ್ಯಾಲಿ ಬಿ. ನಾಗಸಂದ್ರದಲ್ಲಿ 150 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡಿದ್ದು.
10 ವರ್ಷಗಳ ಅವಧಿಗೆ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ ಸೇರಿದಂತೆ ಕಾಮಗಾರಿಯನ್ನು M/s VA Tech wabag Ltd ಸಂಸ್ಥೆಗೆ ಗುತ್ತಿಗೆಗೆ ನೀಡಲಾಗಿದೆ. ಈ ಕಾಮಗಾರಿಯನ್ನು 2020 ರೊಳಗಹೆ ಮುಕ್ತಾಯಗೊಳಿಸಲು ಯೋಜಿಸಿದ್ದು 36 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.

ಹೆಬ್ಬಾಳದಲ್ಲಿ 100 ಎಲ್.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ: ಬೆಂಗಳೂರಿನ ಹೆಬ್ಬಾಳ ಕಣಿವೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು Sequencing Batch Reactor ಆಧಾರಿತ ಜೈವಿಕ ಪೋಷಕಾಂಶಗಳನ್ನು ತೆಗೆದುಹಾಕುವ ತಂತ್ರಜ್ಞಾನದೊಂದಿಗೆ ಹೆಬ್ಬಾಳದಲ್ಲಿ 100 ಎಲ್.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡಿದ್ದು 10 ವರ್ಷಗಳ ಅವಧಿಗೆ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ ಸೇರಿದಂತೆ ಕಾಮಗಾರಿಯನ್ನು M/s Enviro Control Associates (I) Pvt Ltd., ಸಂಸ್ಥೆಗೆ ನೀಡಲಾಗಿದೆ. ಈ ಕಾಮಗಾರಿಯನ್ನು 2020 ರೊಳಗೆ ಮುಕ್ತಾಯಗೊಳಿಸಲು ಯೋಜಿಸಿದ್ದು 36 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.

ದೊಡ್ಡಬೆಲೆ 40, ಎಂಎಲ್‌ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ: ಬೆಂಗಳೂರಿನ ದೊಡ್ಡಬೆಲೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು Sequencing Batch Reactor ಆಧಾರಿತ ಜೈವಿಕ ಪೋಷಕಾಂಶಗಳನ್ನು ತೆಗೆದುಹಾಕುವ ತಂತ್ರಜ್ಞಾನದೊಂದಿಗೆ ದೊಡ್ಡಬೆಲೆಯಲ್ಲಿ 40 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡಿದ್ದು, 10 ವರ್ಷಗಳ ಅವಧಿಗೆ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ ಸೇರಿದಂತೆ ಕಾಮಗಾರಿಯನ್ನು M/s Triveni Engineering and Industries Limited ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. ಈ ಕಾಮಗಾರಿಯನ್ನು 2019 ರೊಳಗೆ ಮುಕ್ತಾಯಗೊಳಿಸಲು ಯೋಜಿಸಿದ್ದು. 36 ತಿಂಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದೆ.

ಈ ಎಲ್ಲಾ 4 ಘಟಕಗಳು ಪರಿಸರ ಸ್ನೇಹಿ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶಿಸಿರುವ ಮಾನದಂಡಗಳ ಆಧಾರದಲ್ಲಿ ವಿನ್ಯಾಸಗೊಳಿಸಿ ನಿರ್ಮಿಸಲಾಗುತ್ತಿದೆ. ಹಾಗೂ ಈ ಘಟಕಗಳು ಕಾರ್ಯಾಚರಣೆಗೊಂಡ ನಂತರ ತ್ಯಾಜ್ಯ ನೀರಿನ ಸಂಸ್ಕರಣೆ ಸಾಮರ್ಥ್ಯವನ್ನು 2020 ರ ಅವಧಿಗೆ ಎಂ,.ಎಲ್.ಡಿ. ಗೆ ಹೆಚ್ಚಿಸಿದಂತಾಗುತ್ತದೆ.




# ಬಯಲು ಮುಕ್ತ ವಿಜಯಪುರಕ್ಕಾಗಿ ಪುಟ್ಟ ಬಾಲಕಿಯ ಅಭಿಯಾನ

ಗುರುರಾಜ. ಬ. ಕನ್ನೂರ

**ಒಂ**ದು ದಿನ ರಾತ್ರಿ ಸಮಯದಲ್ಲಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಒಂದು ಪುಟ್ಟ ಹಳ್ಳಿಗೆ ಧಾರ್ಮಿಕ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ವಾಹನದಲ್ಲಿ ತೆರಳುತ್ತಿದ್ದ ವೇಳೆಯಲ್ಲಿ ಗ್ರಾಮದ ಹೊರವಲಯದಲ್ಲಿ ಹೆಣ್ಣು ಮಕ್ಕಳು ಹಾಗೂ ಪುರುಷರು ರಸ್ತೆ ಬದಿಯಲ್ಲಿ ಶೌಚಕ್ಕೆ ಕುಳಿತಾಗ ವಾಹನದ ಬೆಳಕು ಅವರತ್ತ ಬಿದ್ದ ಪರಿಣಾಮ ಅವರು ಕೂಡಲೇ ಮುಖ ಕೆಳಗೆ ಮಾಡಿ ನಿಲ್ಲುವುದನ್ನು ನೋಡಿದ ಆ ಪುಟ್ಟ ಬಾಲಕಿ ತನ್ನ ಅಮ್ಮನಿಗೆ "ಬರೀ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಶೌಚಗಳು ಇದ್ದರೆ ಸಾಕೇ?", ಪಾಪ ಇವರು ಏಕೆ ಶೌಚಾಲಯ ಕಟ್ಟಿಕೊಳ್ಳುವುದಿಲ್ಲ?" ಎಂದು ಪ್ರಶ್ನೆ ಮೇಲೆ ಪ್ರಶ್ನೆ ಹಾಕುತ್ತಾಳೆ. ಹೀಗೆ ಈ ವಿಚಾರವಾಗಿ ಅಮ್ಮನೊಟ್ಟಿಗೆ ನಡೆದ ಸಂಭಾಷಣೆಯಿಂದ ಪ್ರೇರೇಪಿತಳಾಗಿ ಹಳ್ಳಿ ಜನರಲ್ಲಿಗೆ ತೆರಳಿ ಈ ಕುರಿತು ಜಾಗೃತಿ ಮೂಡಿಸುತ್ತೇನೆ ಎಂದು ಹಟ ಹಿಡಿದಾಗಲೇ ಈಕೆಯ ಅಭಿಯಾನ ಪ್ರಾರಂಭವಾಗಲು ಕಾರಣವಾಯಿತು.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯ ಒಂಬತ್ತು ವರ್ಷದ ಪುಟ್ಟ ಬಾಲಕಿ ಪೃಥ್ವಿ ಚನ್ನಯ್ಯಸ್ವಾಮಿ ಹಿರೇಮಠ ಮೊದಲ ಬಾರಿಗೆ ಇಂಗಳೇಶ್ವರ ಎಂಬ ಗ್ರಾಮ ಪಂಚಾಯತ್ ಕೇಂದ್ರ ಸ್ಥಳದಲ್ಲಿ ಅಖಿಲ ಕರ್ನಾಟಕ ಬಸವ ಸಾಹಿತ್ಯ ಪರಿಷತ್, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ರೇಣುಕಾಚಾರ್ಯ ಪ್ರೌಢಶಾಲಾ ಆವರಣದಲ್ಲಿ ಬಯಲು ಶೌಚ ಮುಕ್ತ ಅಭಿಯಾನದಲ್ಲಿ ಬಯಲು ಶೌಚದ ಕುರಿತಾಗಿ ಮೈ ಜುಮ್ಮೆನ್ನುವ ಹಾಗೆ ಉಪನ್ಯಾಸ ಮಂಡಿಸಿದಳು.

ಈ ಹಿನ್ನಲೆಯಲ್ಲಿ ಪ್ರಸ್ತುತ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 255 ವೈಯಕ್ತಿಕ ಶೌಚಾಲಯಗಳನ್ನು ಸಾರ್ವಜನಿಕರು ತಾವಾಗಿಯೇ ಮುಂದಾಗಿ ನಿರ್ಮಿಸಿಕೊಳ್ಳುವುದಾಗಿ ಪಿಡಿಓ ಹತ್ತಿರ ಅರ್ಜಿ ಸಲ್ಲಿಸಿದ್ದಾರೆ. ಈಗಾಗಲೇ 22 ಶೌಚಾಲಯಗಳು ಸಂಪೂರ್ಣವಾಗಿ ಮುಗಿಸಿ ಬಳಸುತ್ತಿದ್ದಾರೆ ಎಂದು ಪಿಡಿಓ ಎಸ್.ಟಿ ಪಾಟೀಲ ಹೇಳಿದ್ದಾರೆ.

ಅಭಿಯಾನದಲ್ಲಿ ಪ್ರಮುಖ ಭಾಷಣಗಾರ್ತಿಯಾಗಿ ಮಾತನಾಡುವ ಈ ಒಂಬತ್ತರ ಬಾಲೆ ಪೃಥ್ವಿ ಹಿರೇಮಠ ಸ್ವಚ್ಛತೆಯಲ್ಲಿ ದೇವರಿದ್ದಾನೆ. ಪ್ರಧಾನಿ ಅವರ ಆಶಯದಂತೆ ಪ್ರತಿಯೊಬ್ಬರು ವೈಯಕ್ತಿಕ ಶೌಚವನ್ನು ನಿರ್ಮಿಸಕೊಳ್ಳಬೇಕಾಗಿದೆ. ಗ್ರಾಮ ಉದ್ಧಾರವಾದಲ್ಲಿ ದೇಶದ ಉದ್ಧಾರ ಸಾಧ್ಯ. ವೈಯಕ್ತಿಕ ಶೌಚಾಲಯ ನಿರ್ಮಾಣದಿಂದ ಮಹಿಳೆಯರ ಘನತೆ, ಸುರಕ್ಷೆ, ಆರೋಗ್ಯ, ಸಮುದಾಯ ಉಳಿಯಲು ಸಾಧ್ಯ. ಬಯಲು ಶೌಚದಿಂದ ರಾಜ್ಯದಲ್ಲಿ ಸಾಕಷ್ಟು ದುರ್ಘಟನೆಗಳು



ಸಂಭವಿಸುವುದನ್ನು ಪ್ರಸ್ತುತ ಮಾಧ್ಯಮದಲ್ಲಿ ಕಾಣಬಹುದಾಗಿದೆ. ಇಂದು ಮಹಿಳೆಯರು ಸಾವಿರಗಟ್ಟಲೇ ಸೀರೆ, ಬಂಗಾರ ಸೇರಿದಂತೆ ವೈಭವಯುತ ಜೀವನಕ್ಕೆ ತಮ್ಮ ಗಂಡಂದಿರನ್ನು ಕಾಡಿ ಬೇಡಿ ತೆಗೆದುಕೊಳ್ಳುತ್ತೀರಿ. ಮಕ್ಕಳು ಸಹ ಅನಗತ್ಯವಾಗಿ ಖರ್ಚು ಮಾಡುತ್ತೀರಿ. ಆದರೆ ಮನೆಯಲ್ಲಿ ಶೌಚ ಕಟ್ಟಿಸಿಕೊಳ್ಳಲು ಹಿಂದೇಟು ಹಾಕುತ್ತಿರುವುದು ನಿಜಕ್ಕೂ ಶೋಚನೀಯ ಸಂಗತಿ ಎಂದು ಹೇಳುವಾಗ ನೆರೆದ ಜನರು ಚಪ್ಪಾಳೆ ಹೊಡೆಯುವ ಮೂಲಕ ಅಭಿಯಾನಕ್ಕೆ ತಮ್ಮ ಸಹಕಾರವನ್ನು ಸೂಚಿಸುತ್ತಾರೆ.

ಶಾಲೆಗೆ ಹೋಗುವ ಮಕ್ಕಳು ಮನೆಯಲ್ಲಿ ಶೌಚಾಲಯವನ್ನು ಕಟ್ಟಿಸಿಕೊಡಿ ಎಂದು ಪಾಲಕರೊಂದಿಗೆ ಹಟ ಮಾಡಿ. ಹೀಗೆ ಮಾಡಿದಲ್ಲಿ ಪ್ರತಿ ಮನೆಯಲ್ಲಿ ಶೌಚ ಗೃಹ ಕಾಣಬಹುದು ಎಂದು ತನ್ನ ವಯಸ್ಸಿನ ಮಕ್ಕಳಿಗೆ ಸಲಹೆ ನೀಡುತ್ತಾಳೆ.

ತನ್ನ ಅಭಿಯಾನವನ್ನು ಕೇವಲ ಉಪನ್ಯಾಸಕ್ಕೆ ಮಾತ್ರ ಸೀಮಿತಗೊಳಿಸದೆ, ಉಪನ್ಯಾಸದ ಕೊನೆಯಲ್ಲಿ ವೇದಿಕೆಯ ಮೇಲಿರುವ ಗಣ್ಯರು, ಜನಪ್ರತಿನಿಧಿಗಳು, ಸಾವಿರಾರು ಸಾರ್ವಜನಿಕರು, ಮಕ್ಕಳು ಮತ್ತು ಮಹಿಳೆಯರನ್ನು ಎದ್ದು ನಿಲ್ಲಿಸಿ ಇಂದೇ ವೈಯಕ್ತಿಕ ಶೌಚ ನಿರ್ಮಿಸಿಕೊಳ್ಳುವ ಮೂಲಕ ಬಯಲು ಶೌಚಕ್ಕೆ ನಾಂದಿ ಹಾಡುತ್ತೇನೆ ಎಂದು ಪ್ರಮಾಣ ಮಾಡಿಸಿಕೊಳ್ಳುತ್ತಾಳೆ.

ಜಿಲ್ಲಾ ಪಂಚಾಯತ್ ಅಧ್ಯಕ್ಷೆ ನೀಲಮ್ಮ ಮೇಟಿ ಅವರು ಪುಟ್ಟ ಬಾಲಕಿಯ ಬಯಲು ಮುಕ್ತ ಶೌಚದ ಅಭಿಯಾನ ನಿಜಕ್ಕೂ ಮೆಚ್ಚತಕ್ಕದ್ದು, ಮನಸ್ಸು ಮಾಡಿದರೆ ಇದೇ ಅ. 2 ರೊಳಗಾಗಿ ಬಯಲು ಮುಕ್ತ ಶೌಚ ಜಿಲ್ಲೆಯನ್ನಾಗಿ ಮಾಡಲು ಈ ಬಾಲಕಿಯ ಅಭಿಯಾನ ಬಹು ಮುಖ್ಯವಾಗಿ ಪರಿಣಾಮ ಬೀರುವುದರಲ್ಲಿ ಎರಡು ಮಾತಿಲ್ಲ ಎಂದಿದ್ದಾರೆ.

ಸಾರ್ವಜನಿಕರ ಸಹಕಾರದಿಂದ ಈ ಗ್ರಾಮದಲ್ಲಿ 1988 ಕುಟುಂಬಗಳಲ್ಲಿ ಕೇವಲ 300 ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳಿದ್ದು, ಸರ್ಕಾರದ ಅನುದಾನವನ್ನು ಅವಲಂಬಿಸದೇ ಕೂಡಲೇ ಶೌಚಾಲಯಗಳ ನಿರ್ಮಾಣಕ್ಕೆ ಮುಂದಾದಲ್ಲಿ, ಇದಕ್ಕೆ ಬೇಕಾದ ನೀರಿನ ಸರಬರಾಜು ವ್ಯವಸ್ಥೆ ಮಾಡುವುದಾಗಿ ಶಾಸಕ ಹಾಗೂ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಶಿವಾನಂದ ಪಾಟೀಲ ಅವರು ಭರವಸೆ ನೀಡಿದ್ದಾರೆ.







ಮುಂದಿನ ದಿನಗಳಲ್ಲಿ ಪ್ರತಿ 15 ದಿನಗಳಿಗೊಮ್ಮೆ ತಾಲೂಕಿನ ಪ್ರತಿ ಗ್ರಾಮ ಪಂಚಾಯತಿ ಸ್ಥಳದಲ್ಲಿ ಬಯಲು ಶೌಚ ಮುಕ್ತ ಅಭಿಯಾನ ಹಮ್ಮಿಕೊಂಡಿರುವ ಈ ಪುಟ್ಟ ಬಾಲೆ, ವಿಜಯಪುರ ಜಿಲ್ಲೆಯನ್ನು ಬಯಲು ಮುಕ್ತ ಜಿಲ್ಲೆಯನ್ನಾಗಿಸುವ ಕನಸು ಹೊಂದಿದ್ದಾಳೆ. ಈಗಾಗಲೇ ಕಳೆದ 4 ವರ್ಷಗಳಿಂದ ರಾಜ್ಯದ ಅನೇಕ ಸಭೆ ಸಮಾರಂಭಗಳಲ್ಲಿ ಧಾರ್ಮಿಕ ಹಾಗೂ ಮಹಾತ್ಮರ ತತ್ವಾದರ್ಶಗಳ ಕುರಿತಾಗಿ 600 ಕ್ಕೂ ಅಧಿಕ ಕಡೆ ಭಾಷಣ ಮಾಡಿ ಗಮನಸೆಳೆದ ಈಕೆಯ ಯಶೋಗಾಥೆಯನ್ನು ಗಮನಿಸಿ ಸಂಘ ಸಂಸ್ಥೆಗಳು, ಸರ್ಕಾರ ಸೇರಿದಂತೆ ನೂರಕ್ಕೂ ಅಧಿಕ ಸನ್ಮಾನ ಹಾಗೂ ಪ್ರಶಸ್ತಿಗಳು ಲಭಿಸಿವೆ. ಈ ಬಾಲೆಯ ಅಭಿಯಾನವನ್ನು ಗಮನಿಸಿದ ವಿಜಯಪುರ ಜಿಲ್ಲಾಡಳಿತದ ವತಿಯಿಂದ ಇದೇ ಆಗಸ್ಟ 15 ಸ್ವಾತಂತ್ರ್ಯೋತ್ಸವ ದಿನದಂದು ಜಿಪಂ ಅಧ್ಯಕ್ಷೆ ನೀಲಮ್ಮ ಮೇಟಿ, ಸಚಿವರಾದ ರಮೇಶ ಜಿಗಜಣಗಿ, ಎಂ.ಬಿ ಪಾಟೀಲ ಅವರು ಸನ್ಮಾನಿಸಿದರು. ■





# ಉಪವಾಸ ಮಾಡಿ ಶೌಚಾಲಯ ಕಟ್ಟಿಸಿಕೊಂಡ ಶಾಲಾ ವಿದ್ಯಾರ್ಥಿನಿಯರು

**ತುಕಾರಾಂರಾವ್ ಬಿ.ವಿ**

**ಶೌ**ಚಾಲಯಕ್ಕಾಗಿ ಉಪವಾಸ ಕುಳಿತು, ಶೌಚಾಲಯ ಕಟ್ಟಿಸಿಕೊಳ್ಳುವ ಮೂಲಕ ಕೊಪ್ಪಳ ಜಿಲ್ಲೆಯ ಡಣಾಪುರದ ಮಲ್ಲಮ್ಮಳ ಸಾಧನೆ ಬಗ್ಗೆ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ನಲ್ಲಿ ಪ್ರಸ್ತಾಪಿಸುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿದ್ದಳು. ಇದೀಗ ಶೌಚಾಲಯಕ್ಕಾಗಿ ದೇವರ ಮೇಲೆ ಪ್ರಮಾಣ ಹಾಗೂ ಉಪವಾಸ ಮಾಡುವ ತಂತ್ರದ ಮೂಲಕ ಕೊಪ್ಪಳ ತಾಲೂಕು ಕಾಮನೂರು ಗ್ರಾಮದ ಮೂವರು ವಿದ್ಯಾರ್ಥಿನಿಯರು ಶೌಚಾಲಯ ಕಟ್ಟಿಸುವ ಹಠ ಸಾಧಿಸಿ ಕೊಪ್ಪಳ ಜಿಲ್ಲೆಯತ್ತ ಎಲ್ಲರ ಗಮನ ಸೆಳೆಯುವಂತೆ ಮಾಡಿದ್ದಾರೆ.

ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಜಿಲ್ಲೆಯನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿಸಲು ಜಿಲ್ಲಾ ಪಂಚಾಯತಿ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ಮಿಷನ್ 200 ಅಭಿಯಾನ ಅಂದರೆ 200 ಗಂಟೆಗಳಲ್ಲಿ 20 ಸಾವಿರ ಶೌಚಾಲಯ ನಿರ್ಮಿಸಿ ಗುರಿ ಸಾಧಿಸುವ ಅಭಿಯಾನ ಹಮ್ಮಿಕೊಂಡಿದ್ದು, ಅಭಿಯಾನದ ಪ್ರಗತಿ ವರದಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ತಾಲೂಕಿನ ಕಾಮನೂರ ಗ್ರಾಮಕ್ಕೆ ವಿಶೇಷ ಮಾಧ್ಯಮ ಪ್ರವಾಸ ಆಯೋಜಿಸಿದ ಸಂದರ್ಭದಲ್ಲಿ ಈ ಪ್ರಕರಣ ಬೆಳಕಿಗೆ ಬಂದಿದೆ.

**ದೇವರ ಮೇಲೆ ಪ್ರಮಾಣ ಮತ್ತು ಉಪವಾಸ :** ಕಾಮನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಪ್ರಾರ್ಥನೆ ವೇಳೆ ಶಿಕ್ಷಕರು ಶೌಚಾಲಯ ಹೊಂದದೇ ಇರುವವರು ತಪ್ಪದೆ ಶೌಚಾಲಯ ನಿರ್ಮಾಣ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸುವ ಕಾರ್ಯ ನಡೆದಿದ್ದು, ಇದಕ್ಕಾಗಿ ವಿದ್ಯಾರ್ಥಿಗಳಿಂದ ಪ್ರತಿಜ್ಞಾ ವಿಧಿ ಸ್ವೀಕಾರವೂ ನಡೆಯುತ್ತಿದೆ. ಈ ಪ್ರತಿಜ್ಞಾ ವಿಧಿ ಸ್ವೀಕಾರ ವೇಳೆಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳುವುದಾಗಿ ದುರ್ಗಾದೇವಿ ದೇವರ ಮೇಲೆ ಆಣೆ ಮಾಡಿದ್ದ 06 ನೇ ತರಗತಿ ವಿದ್ಯಾರ್ಥಿನಿ ಸಂಗೀತ ಸಿದ್ದಪ್ಪ ಸಂಗಟಿ, ಆಣೆ ತಪ್ಪುವುದು ಸರಿಯಲ್ಲ, ಶೌಚಾಲಯವನ್ನು ನಿರ್ಮಿಸಲೇ ಬೇಕು ಎಂದು ಪಾಲಕರಿಗೆ ನಿತ್ಯ ಒತ್ತಾಯಿಸಿದ್ದಾಳೆ. ಶೌಚಾಲಯಕ್ಕೆ ಜಾಗವಿಲ್ಲ ಎಂದು ಸಬೂಬು ಹೇಳುತ್ತಿದ್ದ ಪಾಲಕರು, ಕೊನೆಗೆ ಮನೆಯ ಮುಂಭಾಗದ ಕಟ್ಟೆಯನ್ನು ತೆರವುಗೊಳಿಸಿ, ಅಲ್ಲಿಯೇ ಶೌಚಾಲಯ ನಿರ್ಮಿಸಲು ಗುಂಡಿಯನ್ನು ತೋಡಿಸಿದ್ದಾರೆ. ಹೀಗೆ ಸಂಗೀತ ಶೌಚಾಲಯ ಕಟ್ಟಿಸಿಕೊಳ್ಳಬೇಕೆಂಬ ಹಠವನ್ನು ಸಾಧಿಸಿದ್ದಾಳೆ. 6 ನೇ ತರಗತಿಯ ಇನ್ನೋರ್ವ ವಿದ್ಯಾರ್ಥಿನಿ ವಿದ್ಯಾ ಹನುಮಪ್ಪ ಮತ್ತು 8 ನೇ ತರಗತಿ ವಿದ್ಯಾರ್ಥಿನಿ ಅಕ್ಷತಾ ಭರಮಪ್ಪ ಹುಳ್ಳಿ ಶೌಚಾಲಯಕ್ಕಾಗಿ ನಿತ್ಯ ನಾವು ಶಾಲೆಯಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸುತ್ತಿದ್ದೇವೆ. ದೇವರ ಮೇಲೆ ಪ್ರಮಾಣ ಮಾಡುತ್ತಿದ್ದೇವೆ. ಹೀಗಾಗಿ ಶೌಚಾಲಯ ಕಟ್ಟಿಸಿಕೊಳ್ಳದಿದ್ದರೆ, ಪ್ರತಿಜ್ಞೆಯನ್ನು ಉಲ್ಲಂಘಿಸಿದಂತಾಗಲಿದೆ ಎಂದು ಪಾಲಕರ ಮೇಲೆ ಒತ್ತಡ ಹೇರಿದ್ದಾರೆ. ಇದಕ್ಕೆ ತಲೆಕೆಡಿಸಿಕೊಳ್ಳದ ಪಾಲಕರು, ಕೊನೆಗೆ ಶೌಚಾಲಯಕ್ಕಾಗಿ ವಿದ್ಯಾರ್ಥಿನಿಯರು ಎರಡು ದಿನ ಉಪವಾಸ ಕೈಗೊಂಡ ಬಳಿಕ, ಹಠಕ್ಕೆ ಮಣಿದು, ಶೌಚಾಲಯ ನಿರ್ಮಿಸಿಕೊಳ್ಳಲು ಮುಂದಾಗಿದ್ದಾರೆ. ಈ ಕುರಿತು ವಿದ್ಯಾರ್ಥಿನಿಯರ ಪಾಲಕರನ್ನು ವಿಚಾರಿಸಿದಾಗ, ಇವೆಲ್ಲ ಅಂಶಗಳು ಬೆಳಕಿಗೆ ಬಂದಿದ್ದು, ವಿದ್ಯಾರ್ಥಿನಿಯರು ಮಾಧ್ಯಮಗಳ ಮುಂದೆ ಈ ವಿಷಯವನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅಲ್ಲದೆ ಶೌಚಾಲಯ ಪ್ರತಿಯೊಂದು ಕುಟುಂಬಕ್ಕೂ ಅಗತ್ಯವಾಗಿದ್ದು, ಮುಂದೆಯೂ ಶೌಚಾಲಯ ಜಾಗೃತಿಗಾಗಿ ಇತರೆ ವಿದ್ಯಾರ್ಥಿಗಳಲ್ಲಿಯೂ ಅರಿವು ಮೂಡಿಸಲು ಯತ್ನ ಮಾಡುವುದಾಗಿ ಹೇಳಿದರು.

**ಜಾಗೃತಿಯಲ್ಲಿ ಖ್ಯಾತಿ :** ಕೊಪ್ಪಳ ಜಿಲ್ಲೆ ಶೌಚಾಲಯ ಜಾಗೃತಿಗಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಲವು ಪ್ರಕರಣಗಳಿಗಾಗಿ ಗಮನ ಸೆಳೆದಿದೆ. ಶೌಚಾಲಯ ಕಟ್ಟಿಸಿಕೊಳ್ಳುವಂತೆ ಜಿಲ್ಲಾ ಪಂಚಾಯತಿ ಅಧ್ಯಕ್ಷರು, ವಿವಿಧ ಜನಪ್ರತಿನಿಧಿಗಳು ಬಯಲು ಬಹಿರ್ದೆಸೆಗೆ ತೆರಳುವವರ ಕಾಲಿಗೆ ಬಿದ್ದು, ಮನವಿ ಮಾಡಿಕೊಂಡ ಪ್ರಕರಣಗಳು, ವಿಸಲ್ ಅಭಿಯಾನದ ಮೂಲಕ ನಸುಕಿನಲ್ಲಿ ಬಯಲು ಬಹಿರ್ದೆಸೆಗೆ ತೆರಳುವವರಿಗೆ ಜಾಗೃತಿ ಮೂಡಿಸಿದ್ದು, ಶೌಚಾಲಯಕ್ಕಾಗಿ ಮಲ್ಲಮ್ಮ ಎಂಬ ವಿದ್ಯಾರ್ಥಿನಿ ಉಪವಾಸ ಕುಳಿತು ಹಠ ಸಾಧಿಸಿದ್ದು, ಸುಮಾರು 10 ಸಾವಿರ ವಿದ್ಯಾರ್ಥಿಗಳಿಂದ ಬೃಹತ್ ಮಾನವ ಸರಪಳಿ ಹೀಗೆ ವಿವಿಧ ಬಗೆಯ ಜಾಗೃತಿಗಳಿಗೆ ಕೊಪ್ಪಳ ಜಿಲ್ಲೆ ರಾಜ್ಯವಷ್ಟೇ ಅಲ್ಲ ಇಡೀ ದೇಶದ ಗಮನ ಸೆಳೆದಿತ್ತು. ಜಿಲ್ಲೆಯ ಸಾಧನೆ ಕೇವಲ ಜಾಗೃತಿಗೆ ಮಾತ್ರ ಸೀಮಿತವಾಗದೆ, ಶೌಚಾಲಯ ನಿರ್ಮಾಣದಲ್ಲೂ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ. ಈಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಎಂದು ಘೋಷಿಸಲು ಇನ್ನು 48 ಸಾವಿರ





ಶೌಚಾಲಯಗಳ ನಿರ್ಮಾಣ ಬಾಕಿ ಇದೆ. ಸೆ.08 ರಿಂದ 16 ರವರೆಗೆ 200 ಗಂಟೆಗಳಲ್ಲಿ ಜಿಲ್ಲೆಯಾದ್ಯಂತ 20,000 ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮಾಡುವ ಸಂಕಲ್ಪದೊಂದಿಗೆ ಜಿಲ್ಲೆಯಲ್ಲಿ ಮಿಷನ್ 200 ಅಭಿಯಾನ ಪ್ರಾರಂಭಿಸಲಾಗಿದ್ದು, ಜಿಲ್ಲೆಯಲ್ಲಿ ಸಮರೋಪಾದಿಯಲ್ಲಿ ಜನರು ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವ ಮೂಲಕ ಅಭಿಯಾನಕ್ಕೆ ಸಾಥ್ ನೀಡುತ್ತಿದ್ದಾರೆ.

**ಕಾಮನೂರು ಮಾದರಿ ಗ್ರಾಮ :** ಲೇಬಗೇರಿ ಗ್ರಾ.ಪಂ. ವ್ಯಾಪ್ತಿಯ ಕಾಮನೂರು ಗ್ರಾಮ 351 ಕುಟುಂಬಗಳನ್ನು ಹೊಂದಿದ್ದು, 194 ಕುಟುಂಬಗಳು ಶೌಚಾಲಯ ಹೊಂದಿವೆ. ಬಾಕಿ 157 ಕುಟುಂಬಗಳು ಸದ್ಯ ಶೌಚಾಲಯ ನಿರ್ಮಿಸಿಕೊಳ್ಳಲು ಮುಂದಾಗಿವೆ. ಅಲ್ಲದೆ ಈ ಗ್ರಾಮವು ಮದ್ಯಪಾನ ಮುಕ್ತ, ಗುಟಕಾ ಮುಕ್ತ, ತಂಬಾಕು ಮುಕ್ತ ಗ್ರಾಮವಾಗಿದ್ದು ಮಾದರಿ ಗ್ರಾಮ ಎನಿಸಿಕೊಂಡಿದೆ.

ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಜಿಲ್ಲೆಯನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರಲ್ಲಿ ಮಿಷನ್ 200 ಅಭಿಯಾನ ಕೂಡ ಒಂದಾಗಿದ್ದು, ಇದರಲ್ಲಿ 200 ಗಂಟೆಗಳಲ್ಲಿ ಜಿಲ್ಲೆಯಾದ್ಯಂತ 20 ಸಾವಿರ ಶೌಚಾಲಯ ನಿರ್ಮಿಸುವ ಗುರಿ ಇದೆ. ಈಗಾಗಲೆ ಜಿಲ್ಲೆಯಲ್ಲಿ ಮಿಷನ್ ಪ್ರಾರಂಭವಾದ ಬಳಿಕ ಈವರೆಗೆ ಸುಮಾರು 10 ಸಾವಿರ ಶೌಚಾಲಯ ನಿರ್ಮಾಣವಾಗಿದ್ದು, ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರು, ಜನಪ್ರತಿನಿಧಿಗಳೂ, ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಸೆ. 16 ರೊಳಗೆ ಉಳಿದ 10 ಸಾವಿರ ಶೌಚಾಲಯ ನಿರ್ಮಾಣವಾಗುವ ಆಶಯ ಹೊಂದಲಾಗಿದ್ದು, ಮಿಷನ್ 200 ಯಶಸ್ವಿಗೊಳ್ಳುವ ವಿಶ್ವಾಸವಿದೆ ಎನ್ನುತ್ತಾರೆ ಕೊಪ್ಪಳ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟರಾಜಾ ಅವರು.

ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ಎನ್.ಕೆ. ತೊರವಿ, ಯೋಜನಾ ನಿರ್ದೇಶಕ ರವಿ ಬಸರಿಹಳ್ಳಿ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಮೂರ್ತಿ ಸೇರಿದಂತೆ ಲೇಬಗೇರಿ ಗ್ರಾಮ ಪಂಚಾಯತಿ ಪಿಡಿಓ ಅವರು ಈ ಸಂದರ್ಭದಲ್ಲಿ ಪಾಲ್ಗೊಂಡು ಸಾರ್ವಜನಿಕರಿಗೆ ಶೌಚಾಲಯದ ಮಹತ್ವವನ್ನು ವಿವರಿಸಿದರು.




ಖಗೋಳ ಕೌತುಕ ಪರಿಚಯಿಸುವ

# ಸಂಚಾರಿ ತಾರಾಲಯ

ಪೃಥ್ವಿ .ವಿ.ಜೆ

ಆಗಸದಲ್ಲಿರುವ ನಕ್ಷತ್ರಗಳು, ಗ್ರಹಗಳು, ಆಕಾಶ ಕಾಯಗಳು ಯಾವಾಗಲೂ ಕೌತುಕವೇ. ಸದಾ ಅಚ್ಚರಿಗಳನ್ನು ಸೃಷ್ಟಿಸುತ್ತಲೇ ಇರುವ ಖಗೋಳವನ್ನು ಅರಿತುಕೊಳ್ಳಲು ಮಾನವ ಬಹು ಹಿಂದಿನಿಂದಲೂ ಕೈಗೊಳ್ಳುತ್ತಿರುವ ಪ್ರಯತ್ನಗಳು ಪ್ರಯೋಗಗಳು ಒಂದೆರಡಲ್ಲ. ಅದರವು ನಿರಂತರ.

ವ್ಯಕ್ತಿಗಳಿಂದ ಆರಂಭಗೊಂಡ ಖಗೋಳ ರಹಸ್ಯವನ್ನು ತಿಳಿದುಕೊಳ್ಳುವ ಯತ್ನಗಳಲ್ಲಿ ಅನೇಕ ಉತ್ತರಗಳು ಸಿಕ್ಕಿದೆಯಾದರೂ ಅವುಗಳಿಗೆ ಹೊಸ ಸೇರ್ಪಡೆಗಳು ಈಗಲೂ ನಿಂತಿಲ್ಲ. ಅವು ನಿಲ್ಲುವುದೂ ಇಲ್ಲ.

ವಿಜ್ಞಾನದ ಬೆಳವಣಿಗೆಯನ್ನು ಮಕ್ಕಳಿಗೆ ತಿಳಿಹೇಳುವ ಹಲವು ವಿಧಾನಗಳಲ್ಲಿ 'ತಾರಾಲಯ' ಗಳೂ ಒಂದು. ಇಂತಹ ತಾರಾಲಯಗಳು ನಗರ–ಪಟ್ಟಣಗಳಿಗೆ ಸೀಮಿತವಾಗಿರುವ ಈ ಕಾಲಘಟ್ಟದಲ್ಲಿ ತಾರಾಲಯಗಳನ್ನು ಶಾಲೆಗಳಿಗೇ ಕೊಂಡೊಯ್ಯುವ ನವೀನ ವ್ಯವಸ್ಥೆಯೊಂದಕ್ಕೆ ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕೈಹಾಕಿದೆ. 'ಶಾಲಾ ಅಂಗಳಕ್ಕೆ ತಾರಾಲಯ' ಯೋಜನೆಯಡಿ ಕಾರ್ಯಗತಗೊಂಡಿರುವ ಈ ಕಾರ್ಯಕ್ರಮ ಶಾಲಾ ಮಕ್ಕಳಿಗೆ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳನ್ನು ಹೆಚ್ಚಾಗಿ ಗುರಿ ಇಟ್ಟುಕೊಂಡಿದ್ದು ರಾಜ್ಯದ ಎಲ್ಲಾ ನಾಲ್ಕು ವಿಭಾಗಗಳಲ್ಲೂ ನಿಯಮಿತವಾಗಿ ಸಂಚಾರಿ ತಾರಾಲಯಗಳು ಸಂಚಾರ ಶುರು ಮಾಡಲಿವೆ.



ನಾಲ್ಕು ವಿಭಾಗಗಳ ಮೂವತ್ತು ಜಿಲ್ಲೆಗಳ ಶಾಲೆಗಳಿಗೆ ಐದು ತಾರಾಲಯ ವಾಹನಗಳನ್ನು ಕೊಂಡೊಯ್ಯುವ ಹೊಣೆ ಹೊತ್ತುಕೊಂಡಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ 'ತಾರಾಲಯ' ಸೌಲಭ್ಯ ಒದಗಿಸಲಿದ್ದು, ಇದು ಹಂತ ಹಂತವಾಗಿ ಅನುಷ್ಠಾನಗೊಳಿಸಲು ವ್ಯವಸ್ಥಿತ ಕಾರ್ಯಕ್ರಮ ರೂಪಿಸಲಾಗಿದೆ ಎಂದರು. ಸಂಚಾರಿ ತಾರಾಲಯಗಳಿಗೆ ಚಾಲನೆಕೊಟ್ಟ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಮ್.

ವಿಜ್ಞಾನ ಪಠ್ಯದಲ್ಲಿನ ವಿಷಯಗಳನ್ನು ಆಧರಿಸಿದ ದೃಶ್ಯಗಳನ್ನು ಪ್ರದರ್ಶಿಸಲಾಗುವ ಈ ತಾರಾಲಯಗಳಲ್ಲಿ ಗಾಳಿ ತುಂಬುವುದರ ಮೂಲಕ ರೂಪುಗೊಳ್ಳುವ ಗೋಳಾಕಾರದ ಗುಮ್ಮಟಗಳಲ್ಲಿ ಮಕ್ಕಳನ್ನು ಕೂಡಿಸಿ ಕಾರ್ಯಕ್ರಮ ನಿರೂಪಿಸುವ ವ್ಯವಸ್ಥೆ ಇದೆ. ಒಮ್ಮೆ ಒಂದು ವಾಹನದಲ್ಲಿ 40 ಮಕ್ಕಳು ಕೂಡುವ ಅವಕಾಶವಿದ್ದು ಒಂದು ವರ್ಷದಲ್ಲಿ ನಾಲ್ಕು ಲಕ್ಷ ಮಕ್ಕಳನ್ನು ತಲುಪುವ ಗುರಿ ಇದೆ ಎನ್ನುವ ಸಚಿವ ಸೀತಾರಾಮ್ ಅವರು ಮುಂದಿನ ವರ್ಷದಿಂದ ಶೈಕ್ಷಣಿಕ ವರ್ಷದ ಪ್ರಾರಂಭದಿಂದಲೇ ಸಂಚಾರಿ ತಾರಾಲಯಗಳು ವೀಕ್ಷಣೆಗೆ ಲಭ್ಯವಾಗಲಿವೆ ಎಂದಿದ್ದಾರೆ.

ಮೂಢನಂಬಿಕೆ ತೊಡೆದು ಹಾಕುವ ಪ್ರಯತ್ನದ ಜೊತೆಗೆ ಸೂರ್ಯ, ಚಂದ್ರ, ಗ್ರಹಣ ಮೊದಲಾದವುಗಳ ಬಗೆಗಿನ ವೈಜ್ಞಾನಿಕ ಸತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿ ಹೇಳುವುದೇ ಅಲ್ಲದೆ ಶಾಲಾ ಪಠ್ಯದ ಕಲಿಕೆಗೂ ಸಂಚಾರಿ ತಾರಾಲಯ ಚಟುವಟಿಕೆಗಳು ನೆರವಾಗುತ್ತವೆ.

ಖಗೋಳ, ವಿಜ್ಞಾನ, ತಂತ್ರಜ್ಞಾನ, ಗಣಿತ, ಇಂಜಿನಿಯರಿಂಗ್ ವಿಷಯಗಳಿಗೆ ಸಂಬಂಧಿಸಿದ ವಿಡಿಯೋಗಳನ್ನು ಅತ್ಯಾಧುನಿಕ ಪ್ರೊಜೆಕ್ಟರ್ ನೆರವಿನಿಂದ ವಿಶೇಷ ಗೊಮ್ಮಟದಲ್ಲಿ ಪ್ರದರ್ಶನ ಮಾಡಲಾಗುವುದು. ಇದು ಮನೋರಂಜನೆ ಮೂಲಕ ವೈಜ್ಞಾನಿಕ ವಿಷಯಗಳನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡುವ ಕೆಲಸ.

ಪ್ರಸ್ತುತ 8 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಅವರ ಪಠ್ಯಕ್ಕೆ ತಕ್ಕಂತೆ 'ನೋಡಿ ತಿಳಿ' ಪರಿಕಲ್ಪನೆಯಡಿ ಪ್ರದರ್ಶನಗಳು ಸಿದ್ಧಗೊಂಡಿವೆ. ಈ ಕಾರ್ಯಕ್ರಮಗಳು ಆಗಿಂದಾಗ್ಗೆ ಬದಲಾಗುತ್ತವೆ. ವಿಶೇಷ ವಿಷಯಗಳಿಗೆ ಒತ್ತುಕೊಟ್ಟು ಕಾರ್ಯಕ್ರಮ ತಯಾರು ಮಾಡುತ್ತಿದ್ದು ಅದರಲ್ಲಿ ತಲಾ ಅರ್ಧ ಗಂಟೆ ಕಾಲಾವಧಿಯ ಆಕಾಶಗಂಗೆ, ಬ್ರಹ್ಮಾಂಡ, ಕ್ಷೀರಪಥ ಕಾರ್ಯಕ್ರಮಗಳು ಒಳಗೊಂಡಿವೆ.

ರೈಲುಬೋಗಿಗಳಲ್ಲಿ ವಿಜ್ಞಾನ ವಿಶ್ವವನ್ನು ಪರಿಚಯಿಸುವ ಯೋಜನೆ ಈಗ ನಮ್ಮ ದೇಶದಲ್ಲಿ ಜಾರಿಯಲ್ಲಿದೆ. ಇವು ಕೂಡ ನಗರಗಳಿಗೆ ತಲುಪುತ್ತಿದ್ದು ಹಳ್ಳಿಗಾಡಿನ ಮಕ್ಕಳಿಗೆ ವೈಜ್ಞಾನಿಕ ಸಾಧನೆಗಳನ್ನು ನೋಡುವ ಪರಿಚಯ ಮಾಡಿಕೊಳ್ಳುವ ಪ್ರಯತ್ನವಾಗಿ ಆರಂಭಗೊಂಡ ಸಂಚಾರಿ ತಾರಾಲಯ ಆರಂಭದಲ್ಲಿ ಪ್ರಾಯೋಗಿಕವಾಗಿ ಗ್ರಾಮೀಣ ಭಾಗದ 33 ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರದರ್ಶನ ಏರ್ಪಡಿಸಲಾಗಿತ್ತು.

ವಿಜ್ಞಾನದ ವಿವಿಧ ಕೌತುಕಗಳನ್ನು ಪರಿಚಯಿಸುವ ತಾರಾಲಯಗಳು ಈಗ ವಿದ್ಯಾರ್ಥಿಗಳಿಗೆ ಮಾತ್ರ ವೀಕ್ಷಿಸಲು ಲಭ್ಯ. ಪರೀಕ್ಷಾ ಸಮಯ, ಬೇಸಿಗೆ ರಜೆ ಕಾಲದಲ್ಲಿ ಜನಸಾಮಾನ್ಯರಿಗೂ ಸಂಚಾರಿ ತಾರಾಲಯ ವೀಕ್ಷಣಾ ಸೌಲಭ್ಯ ಒದಗಿಸುವ ಬಗೆಗೂ ಸರ್ಕಾರ ಚಿಂತನೆ ನಡೆಸಿದೆ.

ಆಕಾಶ ನೋಡಿ ನಕ್ಷತ್ರಗಳನ್ನು ಲೆಕ್ಕ ಹಾಕುತ್ತಿದ್ದ ಎಳೆಯರು ತಮ್ಮೂರಿಗೆ ತಮ್ಮ ಶಾಲಾ ಅಂಗಳಕ್ಕೆ ಬರುವ ಸಂಚಾರಿ ತಾರಾಲಯಗಳಲ್ಲಿ ಕುಳಿತು ಬ್ರಹ್ಮಾಂಡದ ವಿಸ್ಮಯವನ್ನು ನೋಡಬಹುದಾದ ಅವಕಾಶವನ್ನು ಸರ್ಕಾರ ಒದಗಿಸಿಕೊಟ್ಟಿದೆ.

# ಪರಿಸರಸ್ನೇಹಿ ದೀಪಾವಳಿ ಆಚರಿಸೋಣ ಬನ್ನಿ



**ದೀಪಾವಳಿ ಬೆಳಕಿನ ಹಬ್ಬ. ಹಿರಿಯರಿಗಿಂತ ಹೆಚ್ಚಾಗಿ ಮಕ್ಕಳು ಸಂಭ್ರಮಿಸುವ ಹಬ್ಬ. ಆನೆ ಪಟಾಕಿ ಸಿಡಿಸುತ್ತಾ, ಪಟ್ ಎನ್ನುವ ಸದ್ದಿಗೆ ಹಾರಿ ಬಿದ್ದು, ಠುಸ್ ಎನ್ನುವ ಸದ್ದಿಗೆ ಫಳಕ್ಕನೆ ನಕ್ಕು; ಪಿಸ್ತೂಲ್ ಹಿಡಿದು ಕೆಲದಿನಗಳ ಮಟ್ಟಿಗೆ ಜೇಮ್ಸ್ ಬಾಂಡ್‌ಗಳಾಗಿ ಮೆರೆಯುವ, ಮಕ್ಕಳ ಮೊಗದಲ್ಲಿ. ಸಂಭ್ರಮ ಉಕ್ಕಿಸುವ ಹಬ್ಬವಿದು.**

ಸಿ. ರೂಪ



ವರ್ಷಕ್ಕೊಮ್ಮೆ ಬಂದು ಹಿರಿ–ಕಿರಿಯರಲ್ಲಿ ಸಂತಸದ ಹೊನಲು ಹರಿಸುವ ಬೆಳಕಿನ ಹಬ್ಬ ದೀಪಾವಳಿ ಇತ್ತೀಚಿಗಿನ ದಿನಗಳಲ್ಲಿ ಪರಿಸರಾಸಕ್ತರ ಮುತುವರ್ಜಿಯಿಂದ ಸ್ವಲ್ಪ ಭಿನ್ನ ರೂಪ ಪಡೆಯುತ್ತಿದೆ. 'ಗಣೇಶ ಹಬ್ಬದಲ್ಲಿ ಹೇಗೆ ಬಣ್ಣದ ಗಣಪನನ್ನು ತ್ಯಜಿಸಿ ಮಣ್ಣಿನ ಮೂರ್ತಿಯನ್ನು ಪೂಜಿಸಿ– ನಿಸರ್ಗಸ್ನೇಹಿಗಳಾಗಿ' ಎನ್ನುವ ಪ್ರಜ್ಞಾವಂತಿಕೆ ಮೂಡುತ್ತಿದೆಯೋ ಹಾಗೆಯೇ ಈಗ ಪಟಾಕಿಗಳು ಉಂಟು ಮಾಡುವ ಶಬ್ದಮಾಲಿನ್ಯ, ವಾಯುಮಾಲಿನ್ಯದ ವಿರುದ್ಧವೂ ದನಿಯೆದ್ದಿದೆ.

ಢಂ ಢಂ ಪಟಾಕಿ ಕಿವಿಗೆ ಚಂದವೆ..? ಕೇಳಲು ಹಿತವೆ..? ಪಟಾಕಿ ಸುಟ್ಟಾಗ ಅದರಿಂದ ಹೊರ ಹೊಮ್ಮುವ ಕಪ್ಪನೆಯ ಹೊಗೆ ಶ್ವಾಸಕೋಶಕ್ಕೆ ಹಿತವೆ? ಒಮ್ಮೆ ಯೋಚಿಸಿ. 125 ಡೆಸಿಬಲ್‌ಗಳಿಗೂ ಹೆಚ್ಚಿನ ಶಬ್ದದ ಪ್ರಮಾಣವಿರುವ ಪಟಾಕಿಗಳ ಸಿಡಿತವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಷೇಧಿಸಿದೆ.

**ಕಳೆದ ವರ್ಷ ಬೆಂಗಳೂರು ನಗರದ ಕೆಲವೆಡೆ ದೀಪಾವಳಿಗೂ ಮುನ್ನ ಹಾಗೂ ಆನಂತರದ ಶಬ್ದ ಮಾಪನದ ಮಾಹಿತಿ**

| | | |
|---|---|---|
| ವಿಜಯನಗರ | 70.2 | 78.8 |
| ಯಲಹಂಕ | 70.2 | 77.7 |
| ಜಯನಗರ | 65.7 | 71.2 |
| ಬಿಟಿಎಂ ಲೇಔಟ್ | 65.8 | 68.5 |
| ನಿಸರ್ಗ ಭವನ | 63.8 | 70.6 |
| ವೈಟ್ ಫೀಲ್ಡ್ | 67.0 | 64.5 |
| ಯಶವಂತಪುರ | 71.8 | 71.4 |
| ಆಸ್ಪತ್ರೆಯ ವಲಯಗಳಲ್ಲಿ | | |
| ಆರ್ ವಿ ಸಿ ಇ | 61.1 | 57.6 |
| ನಿಮ್ಹಾನ್ಸ್ | 59.9 | 61.0 |
| ಇಎಸ್ಐ | 67.1 | 68.9 |

ಪಟಾಕಿ ಸದ್ದಿಗೆ ಮನೆಯ ಮೂಲೆ ಸೇರುವ ನಾಯಿ, ಬೆಕ್ಕಿನಂಥ ಮುದ್ದಿನ ಪ್ರಾಣಿಗಳು ಪಟಾಕಿ ಸದ್ದಿಗೆ ಬೆಚ್ಚಿ ಆಚೆ ಬರುವುದೇ ಇಲ್ಲ. ಮನೆಯ ಮೂಲೆಯಲ್ಲಿ ಮಂಕಾಗಿ ಮುದುಡಿ ಕುಳಿತು ಬಿಡುತ್ತವೆ. ಮನೆಯ ಮುಂದಿನ ಮರಗಳ ಮೇಲೆ ಪುಟಪುಟನೆ ಹರಿದಾಡುವ ಅಳಿಲು, ಬಣ್ಣ ಬಣ್ಣದ ಚಿಟ್ಟೆಗಳು ದೀಪಾವಳಿ ನಂತರ ಕಾಣಸಿಗುವುದೇ ಇಲ್ಲ. ಕಣ್ಣಿಗೆ ಕಾಣದೆ ಕಣ್ಮರೆಯಾಗುವ ಪಕ್ಷಿ ಸಂಕುಲಗಳು ಇನ್ನೆಷ್ಟೋ. ಮನೆಯಲ್ಲಿ ಅಸ್ವಸ್ಥರು, ವೃದ್ಧರು, ಹೃದ್ರೋಗಿಗಳು, ಗರ್ಭಿಣಿ ಅಥವಾ ಬಾಣಂತಿಯರು ಇದ್ದಲ್ಲಿ ಪಟಾಕಿ ಉಂಟು ಮಾಡುವ ಶಬ್ದ ಮಾಲಿನ್ಯ, ಹೊಗೆ ಮಾಲಿನ್ಯಕ್ಕೆ ಅವರು ಅನುಭವಿಸುವ ಕಿರಿಕಿರಿಗಳೂ ಕಡಿಮೆಯೇನಲ್ಲ.

ಪಟಾಕಿ ಸುಡುವ ವೇಳೆ ಸಂಭವಿಸುವ ಅವಘಡಗಳೂ ಕಡಿಮೆಯೇನಿಲ್ಲ. ಪಟಾಕಿ ಸುಡುವ ಸಂಭ್ರಮದಲ್ಲಿ ಮುನ್ನೆಚ್ಚರಿಕೆ ವಹಿಸದೆ ಶಾಶ್ವತವಾಗಿ ಕಣ್ಣುಗಳನ್ನು ಕಳೆದುಕೊಳ್ಳುವ ಮಕ್ಕಳು, ಹಿರಿಯರು. ಹಠಾತ್ತನೆ ಸಂಭವಿಸುವ ಬೆಂಕಿ ಅವಘಡಗಳು ದೀಪಾವಳಿಯ ಸಂಭ್ರಮವನ್ನು ಕಳೆದು ಬೇಸರ ಮೂಡಿಸುತ್ತವೆ. ಸಂಭ್ರಮ ಕಳೆದು ನೋವನ್ನು ತರುವ ದೀಪಾವಳಿ ಬೇಕೆ? ಅಥವಾ ಸುರಕ್ಷಿತ ದೀಪಾವಳಿ ಬೇಕೆ? ತೀರ್ಮಾನ ನಿಮ್ಮದು.







ಶಬ್ದ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಲವು ಮಾನದಂಡಗಳನ್ನು ರೂಪಿಸಿದೆ. ಶಬ್ದ ಮಿತಿಯ ಪ್ರಮಾಣ ವಸತಿ ಪ್ರದೇಶದಲ್ಲಿ ಹಗಲಿನ ವೇಳೆ 55 ಡೆಸಿಬಲ್ ರಾತ್ರಿ ವೇಳೆ 45 ಡೆಸಿಬಲ್ ಇರಬೇಕು. ವಾಣಿಜ್ಯ ಪ್ರದೇಶಗಳಲ್ಲಿ ಹಗಲು 65 ಡಿಬಿ, ರಾತ್ರಿ 55 ಡಿಬಿ; ಕೈಗಾರಿಕಾ ಪ್ರದೇಶಗಳಲ್ಲಿ ಈ ಮಿತಿಯು ಹಗಲು 75 ಡಿಬಿ, ರಾತ್ರಿ 70 ಡಿಬಿ ಇರಬೇಕು ರಾತ್ರಿ 10 ಗಂಟೆಯಿಂದ ಬೆಳಗಿನ 6 ಗಂಟೆಯವರೆಗೆ ಸಾರ್ವಜನಿಕ ಪ್ರದೇಶದಲ್ಲಿ ಧ್ವನಿ ಯಂತ್ರಗಳನ್ನು ಬಳಸಬಾರದು.

ದೀಪಾವಳಿ ಬೆಳಕಿನ ಹಬ್ಬ. ಬಣ್ಣ ಬಣ್ಣದ ಆಕಾಶಬುಟ್ಟಿಗಳು ಮನೆಯನ್ನು ಅಲಂಕರಿಸುವ, ಮನೆ ಮನೆಯಲ್ಲೂ ದೀಪಗಳು ಬೆಳಗಿ ಬೆಳಕು ಮೂಡಿಸುವ ಹಬ್ಬ ದೀಪಾವಳಿ. ಈ ಬೆಳಕಿನ ಹಬ್ಬ ಶಬ್ದ ರಹಿತ, ಮಾಲಿನ್ಯ ರಹಿತವಾದರೆ ಇನ್ನಷ್ಟು ಅರ್ಥಪೂರ್ಣವಾಗುತ್ತದೆ. ಪಟಾಕಿ ರಹಿತ ಪರಿಸರ ಸ್ನೇಹಿ ದೀಪಾವಳಿ ಆಚರಿಸಿದರೆ ಪರಿಸರವೂ ಉತ್ತಮ. ಗಿಡಮರ , ಪ್ರಾಣಿ– ಪಕ್ಷಿ ಸಂಕುಲಗಳೂ ಸುರಕ್ಷಿತ. ಆದ್ದರಿಂದ ಪಟಾಕಿ ಸಿಡಿಸುವ ಮುನ್ನ ಒಮ್ಮೆ ಯೋಚಿಸಿ.

# ಫಕೀರವ್ವ ಕುಟುಂಬದ ಭಾಗ್ಯದ ಬಾಗಿಲು ತೆರೆದ

ಪಶುಭಾಗ್ಯ
ಜಾನುವಾರು ಕಾಳಜಿ

ತುಕಾರಾಂರಾವ್ ಬಿ.ವಿ



ಮೀನುಗಾರಿಕೆ ವೃತ್ತಿಯನ್ನೇ ನಂಬಿಕೊಂಡು, ಬದುಕು ಸಾಗಿಸುತ್ತಿದ್ದ ಕುಟುಂಬಕ್ಕೆ, ಸತತವಾಗಿ ಬಂದೆರಗಿದ ಬರ ಪರಿಸ್ಥಿತಿ, ಸಂಕಷ್ಟದ ಸರಮಾಲೆಯನ್ನೇ ತಂದೊಡ್ಡಿತ್ತು. ಜೀವನದ ದೋಣಿ ಸಾಗಿಸುವುದೇ ದುಸ್ತರವೆನಿಸಿದ್ದಾಗ, ರೈತ ಮಹಿಳೆಯ ಜೊತೆಗೆ ಇಡೀ ಕುಟುಂಬವನ್ನೇ ಅಭಿವೃದ್ಧಿಯ ದಡದತ್ತ ಕೊಂಡೊಯ್ಯುವಂತೆ ಮಾಡಿದ್ದು, ರಾಜ್ಯ ಸರ್ಕಾರದ ಪಶುಭಾಗ್ಯ ಯೋಜನೆ ಎಂದರೆ ಅತಿಯಶಯೋಕ್ತಿ ಎನಿಸಲಾರದು.

ಕೊಪ್ಪಳ ತಾಲೂಕು ಕರ್ಕಿಹಳ್ಳಿ ಗ್ರಾಮ ತುಂಗಭದ್ರಾ ನದಿಯ ಹಿನ್ನೀರಿನ ದಡದಿಂದ ಸುಮಾರು ಐದಾರು ಕಿ.ಮೀ. ದೂರದಲ್ಲಿ ನೆಲೆಯೂರಿದೆ. ಈ ಗ್ರಾಮದಲ್ಲಿ ಬಹಳಷ್ಟು ಕುಟುಂಬಗಳು ಮೀನುಗಾರಿಕೆ ವೃತ್ತಿಯನ್ನೇ ನೆಚ್ಚಿಕೊಂಡಿವೆ. ಇಂತಹ ಕುಟುಂಬಗಳ ಪೈಕಿ ಫಕೀರವ್ವ ಮರಿಯಪ್ಪ ಸೊಂಟಿ ರೈತ ಮಹಿಳೆಯ ಕುಟುಂಬವೂ ಒಂದು. ಪರಿಶಿಷ್ಟ ಜಾತಿಗೆ ಸೇರಿರುವ ಫಕೀರವ್ವ, ಮರಿಯಪ್ಪ ಸೊಂಟಿ ದಂಪತಿಗಳಿಗೆ ನಾಲ್ಕು ಜನ ಮಕ್ಕಳು, ಮನೆಯ ಎಲ್ಲ ಸದಸ್ಯರೂ ಒಟ್ಟಾಗಿದ್ದು, ಒಟ್ಟಾಗಿ ದುಡಿದು, ಬಂದ ಹಣದಲ್ಲೇ ಸಂಸಾರ ನಡೆಸುತ್ತಿದ್ದಾರೆ. ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಕುಟುಂಬ, ಎಷ್ಟೇ ದುಡಿದರೂ ತಿಂಗಳಿಗೆ 6 ರಿಂದ 7 ಸಾವಿರ ರೂ. ಗಳಷ್ಟು ಮಾತ್ರ ಹಣ ಕೈಸೇರಲು ಸಾಧ್ಯವಾಗುತ್ತಿತ್ತು. ಮೀನುಗಾರಿಕೆ ನಡೆಸುವವರ ಸಂಖ್ಯೆ ಹೆಚ್ಚಳ





ಹಾಗೂ, ಸತತ ಬರ ಪರಿಸ್ಥಿತಿ ಫಕೀರವ್ವ ಕುಟುಂಬಕ್ಕೆ ತೀವ್ರ ಸಂಕಷ್ಟವನ್ನು ತಂದೊಡ್ಡಿತು. ಮಳೆಯ ಕೊರತೆಯಿಂದಾಗಿ ಕಳೆದ ಎರಡ್ಮೂರು ವರ್ಷಗಳಿಂದ ಜಲಾಶಯ ಭರ್ತಿಯಾಗಲಿಲ್ಲ. ಹೀಗಾಗಿ ಮೀನುಗಾರಿಕೆಯನ್ನೇ ನೆಚ್ಚಿಕೊಂಡು ಬದುಕು ಕಂಡುಕೊಂಡಿದ್ದ ಕುಟುಂಬಕ್ಕೆ ಮುಂದೇನು ಎಂಬ ಪ್ರಶ್ನೆ ಉದ್ಭವಿಸಿತು. ಮಳೆಯ ಕೊರತೆಯಿಂದಾಗಿ ಇದ್ದ 5 ಎಕರೆ ಜಮೀನಿನಲ್ಲಿಯೂ ಹೇಳಿಕೊಳ್ಳುವ ರೀತಿಯಲ್ಲಿ ಯಾವುದೇ ಆದಾಯಕರ ಬೆಳೆ ಬರಲಿಲ್ಲ. ಇಂತಹ ಸಂಕಷ್ಟಕ್ಕೆ ಸಿಲುಕಿದ್ದ ಕುಟುಂಬಕ್ಕೆ ಸರ್ಕಾರ ಜಾರಿಗೊಳಿಸಿದ ಪಶುಭಾಗ್ಯ ಯೋಜನೆ ಭರವಸೆಯ ಆಶಾಕಿರಣ ಮೂಡಿಸಿದೆ. ಪಶುಭಾಗ್ಯ ಯೋಜನೆಯಡಿ 02 ಆಕಳನ್ನು ಪಡೆದ ಕುಟುಂಬ, ಕಷ್ಟಪಟ್ಟು ದುಡಿದ ಫಲಶ್ರುತಿಯಿಂದಾಗಿ ಇದೀಗ 09 ಉತ್ತಮ ತಳಿಯ ಆಕಳುಗಳು ಇವರ ಕೊಟ್ಟಿಗೆಯಲ್ಲಿ ಹಾಲಿನ ಹೊಳೆ ಹರಿಸಿವೆ. ಹೈನುಗಾರಿಕೆ ಉದ್ಯೋಗವನ್ನು ಅಭಿವೃದ್ಧಿಪಡಿಸಿಕೊಂಡು, ತಿಂಗಳಿಗೆ ಕನಿಷ್ಟವೆಂದರೂ 30 ರಿಂದ 35 ಸಾವಿರ ರೂ. ಆದಾಯಗಳಿಸುತ್ತ, ಸುಖೀ ಸಂಸಾರ ನಡೆಸುತ್ತಿದೆ ಫಕೀರವ್ವ ಅವರ ಕುಟುಂಬ.

**ವರವಾಗಿ ಬಂತು ಪಶುಭಾಗ್ಯ :** ಪಶುಸಂಗೋಪನೆ ಇಲಾಖೆ ಮೂಲಕ ಸರ್ಕಾರ ಜಾರಿಗೊಳಿಸಿದ ಪಶುಭಾಗ್ಯ ಯೋಜನೆಯಡಿ, ರೈತ ಮಹಿಳೆ ಫಕೀರವ್ವ ಮರಿಯಪ್ಪ 2015–16 ನೇ ಸಾಲಿನಲ್ಲಿ 1. 20 ಲಕ್ಷ ರೂ. ವೆಚ್ಚದಲ್ಲಿ ಹೆಚ್ಚು ಹಾಲು ನೀಡುವ 02 ಆಕಳನ್ನು ಸರ್ಕಾರದಿಂದ ಪಡೆದುಕೊಂಡರು, ಇದರಲ್ಲಿ 60 ಸಾವಿರ ರೂ. ಸಬ್ಸಿಡಿಯಿದ್ದರೆ, ಉಳಿದ 60 ಸಾವಿರ ರೂ. ಬ್ಯಾಂಕ್‌ನಿಂದ ಸಾಲ. ಚಿಕ್ಕಬಳ್ಳಾಪುರದಿಂದ ಖರೀದಿಸಿಕೊಂಡು ಬಂದ 02 ಆಕಳುಗಳು ಈ ಕುಟುಂಬಕ್ಕೆ ಅದೃಷ್ಟವನ್ನೇ ತಂದಿದೆ.

**ಗಂಗಾ ಕಲ್ಯಾಣದಲ್ಲಿ ಬಂದ ಗಂಗೆ :** ಸಣ್ಣ ರೈತರಿಗಾಗಿ ಸರ್ಕಾರ ಜಾರಿಗೊಳಿಸಿರುವ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿ ಸೌಲಭ್ಯ ಪಡೆದಿದ್ದು, ಬೋರ್‌ವೆಲ್‌ನಲ್ಲಿ 2 ಇಂಚಿನಷ್ಟು ನೀರು ಬಂದಿದೆ. ಗಂಗಾ ಕಲ್ಯಾಣ ಯೋಜನೆಯಡಿ ಗಂಗೆಯೇ ಈ ಕುಟುಂಬಕ್ಕೆ ದೊರೆತಂತಾಗಿದೆ. ತಮಗಿರುವ 05 ಎಕರೆ ಜಮೀನಿನಲ್ಲಿ, 1.5 ಎಕರೆಯಷ್ಟು ಆಕಳುಗಳಿಗೆ ಮೇವು ಬೆಳೆಯಲಾಗುತ್ತಿದ್ದು, ತಾವು ಸಾಕುತ್ತಿರುವ ಆಕಳುಗಳಿಗೆ, ತಾವೇ ಬೆಳೆಯುವ ಉತ್ತಮ ಹಸಿರು ಮೇವನ್ನು ನೀಡುತ್ತಿದ್ದಾರೆ. 01 ಎಕರೆಯಲ್ಲಿ ಮೆಣಸಿನಕಾಯಿ, ಟೊಮೆಟೊ, ಈರೇಕಾಯಿ ನಂತಹ ತರಕಾರಿಯನ್ನು ಹಾಗೂ ಉಳಿದ ಭೂಮಿಯಲ್ಲಿ ಮನೆಗೆ ಬೇಕಾದ ಆಹಾರಧಾನ್ಯ ಬೆಳೆಯಲಾಗುತ್ತಿದೆ. ತರಕಾರಿ ಬೆಳೆಯಿಂದಾಗಿ ಮನೆಯ ದೈನಂದಿನ ಖರ್ಚಿಗೆ ಅಲ್ಪ–ಸ್ವಲ್ಪ ಆದಾಯ ಬರುತ್ತಿದೆ.





**ಹಾಲಿನ ಹೊಳೆ :** ಪಶುಭಾಗ್ಯ ಯೋಜನೆಯಡಿ 02 ಆಕಳನ್ನು ಪಡೆದು, ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದ್ದು, ಶ್ರಮವಹಿಸಿ ದುಡಿದ ಪರಿಣಾಮವಾಗಿ ಒಂದೂವರೆ ವರ್ಷದೊಳಗಾಗಿ ಇದೀಗ ಉತ್ತಮ ಹಾಲು ಹಿಂಡುವ 09 ಆಕಳುಗಳು ಕೊಟ್ಟಿಗೆಯಲ್ಲಿವೆ. ಎಲ್ಲ ಆಕಳುಗಳನ್ನು ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತುಮಕೂರು ಕಡೆಗಳಿಂದ ತರಲಾಗಿದೆ. ಆಕಳುಗಳಿಗೆ ತಾವೇ ಬೆಳೆದ ಹಸಿರು ಹುಲ್ಲು ನೀಡುತ್ತಿದ್ದು, ಭತ್ತದ ಹುಲ್ಲು ಹಾಗೂ ಆಕಳುಗಳಿಗೆ ನೀರು ಕುಡಿಸುವಾಗ ನೀಡಲೆಂದೇ ಗೋಧಿ ಭೂಸಾ ವನ್ನು ಮಾತ್ರ ಹಣ ಕೊಟ್ಟು ಖರೀದಿಸಿ ತಂದು ಹಾಕಲಾಗುತ್ತದೆ. 09 ಆಕಳುಗಳು ಇದೀಗ ನಿತ್ಯ ಬೆಳಿಗ್ಗೆ ಹಾಗೂ ಸಂಜೆ ಸೇರಿದಂತೆ ಸುಮಾರು 80 ರಿಂದ 85 ಲೀ. ಹಾಲು ನೀಡುತ್ತಿವೆ. ಕರುಗಳಿಗೆ ಹಾಗೂ ಮನೆಗೆ ಸುಮಾರು 06 ಲೀಟರ್ ಹಾಲು ಉಳಿಸಿಕೊಂಡು, ಉಳಿದಂತೆ ನಿತ್ಯ ಸುಮಾರು 70 ರಿಂದ 75 ಲೀ. ಹಾಲನ್ನು ಡೈರಿಗೆ ಹಾಕಲಾಗುತ್ತಿದೆ. ಡೈರಿಯವರು ಪ್ರತಿ ಲೀ. ಹಾಲಿಗೆ 25 ರೂ. ನೀಡಿ ಖರೀದಿಸುತ್ತಿದ್ದಾರೆ. ಮೀನುಗಾರಿಕೆ ಮಾಡಿಕೊಂಡು ಎಷ್ಟೇ ಕಷ್ಟಪಟ್ಟು ದುಡಿದರೂ ತಿಂಗಳಿಗೆ ಕೇವಲ 6 ರಿಂದ 7 ಸಾವಿರ ಹಣ ಗಳಿಸುತ್ತಿದ್ದ ಕುಟುಂಬವೀಗ, ಪಶುಭಾಗ್ಯ ಯೋಜನೆಯ ಸವಲತ್ತು ಪಡೆದು, ಶ್ರಮವಹಿಸಿ ದುಡಿದ ಪರಿಣಾಮವಾಗಿ ತಿಂಗಳಿಗೆ ಖರ್ಚನ್ನೆಲ್ಲಾ ಕಳೆದು ಸುಮಾರು 30 ರಿಂದ 35 ಸಾವಿರ ರೂ. ಆದಾಯವನ್ನು ಪಡೆಯಲು ಸಾಧ್ಯವಾಗಿದೆ.



**ಜೀವನದ ದೋಣಿ ಸಾಗಿಸುವುದೇ ದುಸ್ತರವೆನಿಸಿದ್ದಾಗ, ರೈತ ಮಹಿಳೆಯ ಜೊತೆಗೆ ಇಡೀ ಕುಟುಂಬವನ್ನೇ ಅಭಿವೃದ್ಧಿಯ ದಡದತ್ತ ಕೊಂಡೊಯ್ಯುವಂತೆ ಮಾಡಿದ್ದು, ರಾಜ್ಯ ಸರ್ಕಾರದ ಪಶುಭಾಗ್ಯ ಯೋಜನೆ**



## ಕೃಷಿ ಕಾರ್ಮಿಕನ ಕುಟುಂಬಕ್ಕೆ ಬದುಕು ಕಟ್ಟಿಕೊಟ್ಟ ಪಶುಭಾಗ್ಯ

ಕೃಷಿ ಕಾರ್ಮಿಕರಾಗಿ ದುಡಿದು ಅಲ್ಪ ಆದಾಯದಲ್ಲಿ ಜೀವನ ಸಾಗಿಸುತ್ತಿದ್ದ ಯಲಬುರ್ಗಾ ತಾಲೂಕು ತಳಕಲ್ ಗ್ರಾಮದ ಕುಟುಂಬವೊಂದು, ರಾಜ್ಯ ಸರ್ಕಾರದ ಪಶು ಭಾಗ್ಯ ಯೋಜನೆಯಿಂದಾಗಿ ಹೈನುಗಾರಿಕೆ ಕೈಗೊಂಡು ನಿತ್ಯ ಆದಾಯ ಗಳಿಸುತ್ತಿದ್ದು, ಫಕೀರವ್ವ ಕುಟುಂಬದಂತೆ ಇವರು ಕೂಡ ಸುಖೀ ಜೀವನದ ಬದುಕು ಕಟ್ಟಿಕೊಳ್ಳಲು ನೆರವಾಗಿದೆ.

ಕೃಷಿ ಕಾರ್ಮಿಕರಾಗಿ ದುಡಿಮೆ ಮಾಡಿಕೊಂಡಿದ್ದ, ಯಲಬುರ್ಗಾ ತಾಲೂಕು ತಳಕಲ್ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ದುರುಗಪ್ಪ ತಾಯಮ್ಮನವರ ಎಂಬುವವರು, ಆಯಾ ದಿನದ ದುಡಿಮೆಯಿಂದ ಬರುವ ಆದಾಯದಲ್ಲಿ ತಮ್ಮ ಕುಟುಂಬದ ನಿರ್ವಹಣೆ ಮಾಡುತ್ತಿದ್ದರು. ಕೃಷಿ ಕಾರ್ಮಿಕ ವೃತ್ತಿಯಲ್ಲಿ ಬರುವ ಆದಾಯದಲ್ಲಿ ತಮ್ಮ ಕುಟುಂಬದ ನಿರ್ವಹಣೆಯ ಜೊತೆಗೆ ಮೂವರು ಮಕ್ಕಳ ವಿದ್ಯಾಭ್ಯಾಸ ಕೊಡಿಸುವುದು ಕಷ್ಟಕರವಾಗಿತ್ತು. ಪಶುಸಂಗೋಪನಾ ಇಲಾಖೆಯ ಮೂಲಕ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಶುಭಾಗ್ಯ ಯೋಜನೆ, ಇದೀಗ ಈ ಕುಟುಂಬದ ನೆಮ್ಮದಿಯ ಬದುಕಿಗೆ ಆಧಾರವಾಗಿದೆ. ದುರುಗಪ್ಪ ಅವರಿಗೆ ಪಶುಸಂಗೋಪನಾ ಇಲಾಖೆಯು ವಿಶೇಷ ಘಟಕ ಕಾರ್ಯಕ್ರಮದಲ್ಲಿ ಪಶು ಭಾಗ್ಯ ಯೋಜನೆಯಡಿ ಮಿಶ್ರತಳಿ ಆಕಳು ಕೊಡಿಸಿದೆ. ಈ ಯೋಜನೆಯಡಿ ಫಲಾನುಭವಿಗೆ 60 ಸಾವಿರ ರೂ. ಸಹಾಯಧನ ಮತ್ತು 60 ಸಾವಿರ ರೂ. ಬ್ಯಾಂಕ್ ಸಾಲ ಸೇರಿದಂತೆ ಒಟ್ಟು 1. 20 ಲಕ್ಷ ರೂ. ಘಟಕ ವೆಚ್ಚವಾಗಿರುತ್ತದೆ. ಈ ಯೋಜನೆಯಡಿ ದುರುಗಪ್ಪ ಅವರಿಗೆ ಸದ್ಯ ಒಂದು ಮಿಶ್ರತಳಿ ಆಕಳು ಕೊಡಿಸಲಾಗಿದ್ದು, ಪಶು ವೈದ್ಯರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಮಿಶ್ರತಳಿ ಆಕಳನ್ನು ಉತ್ತಮವಾಗಿ ಪಾಲನೆ ಮತ್ತು ಪೋಷಣೆ ಮಾಡಲಾಗುತ್ತಿದೆ. ಈ ಆಕಳು ಒಂದು ಹೆಣ್ಣು ಕರು ಹಾಕಿರುವುದರಿಂದ, ದುರುಗಪ್ಪ ಕುಟುಂಬದ ಸಂತೋಷ ಇಮ್ಮಡಿಗೊಳಿಸಿದೆ. ಸದ್ಯ ಆಕಳು ನಿತ್ಯ 08 ಲೀಟರ್ ಹಾಲು ಕೊಡುತ್ತಿದ್ದು, ಮನೆಯಲ್ಲಿ ಈ ಕುಟುಂಬ ಹಾಲು, ಮೊಸರಿನ ಸವಿ ಕಾಣಲು ಸಾಧ್ಯವಾಗಿದೆ. ಮನೆಯ ಉಪಯೋಗಕ್ಕೆ ನಿತ್ಯ ಒಂದು ಲೀಟರ್ ಹಾಲು ಹಾಗೂ ಕರುವಿಗೆ 01 ಲೀಟರ್ ಬಿಟ್ಟು ಉಳಿದ 06 ಲೀಟರ್ ಹಾಲನ್ನು ಫಲಾನುಭವಿ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಮಕ್ಕಳಿಗೆ ಉತ್ತಮ ವಿಧ್ಯಾಭ್ಯಾಸ ಕೊಡಿಸಲು ಸಾಧ್ಯವಾಗಿದೆ ಅಲ್ಲದೆ, ಮನೆಯ ಆರ್ಥಿಕ ಸ್ಥಿತಿ–ಗತಿ ಸುಧಾರಣೆ ಕಂಡಿದೆ. ಮಕ್ಕಳಿಗೂ ಮನೆಯಲ್ಲಿ ಪೌಷ್ಠಿಕ ಆಹಾರ ದೊರೆಯುವಂತಾಗಿದ್ದು, ದುರುಗಪ್ಪ ಅವರ ಕುಟುಂಬ ಸ್ವಾವಲಂಬಿ ಜೀವನ ನಡೆಸುವುದರ ಜೊತೆಗೆ ಸುಖೀ ಜೀವನ ನಡೆಸುವಂತಾಗಿದೆ.

ಪಶುಭಾಗ್ಯ ಯೋಜನೆ ನಿಜಕ್ಕೂ ಕೃಷಿ ಕಾರ್ಮಿಕರ ಕುಟುಂಬಗಳಿಗೆ ವರದಾನವಾಗಿದ್ದು ಆರ್ಥಿಕ ಸುಧಾರಣೆಯ ಜೊತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ ಎಂದರೆ ತಪ್ಪಾಗಲಾರದು.

**ಉದ್ಯೋಗಖಾತ್ರಿಯಡಿ ಕೊಟ್ಟಿಗೆ :** ಆಕಳುಗಳನ್ನು ಸುರಕ್ಷಿತವಾಗಿರಿಸಲು ಕೊಟ್ಟಿಗೆ ನಿರ್ಮಿಸಬೇಕೆಂಬ ಕನಸನ್ನು ನನಸಾಗಿಸಲು ಕುಟುಂಬಕ್ಕೆ ನೆರವಾಗಿದ್ದು, ಸರ್ಕಾರದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗಖಾತ್ರಿ ಯೋಜನೆ. ಈ ಯೋಜನೆಯಡಿ 35 ಸಾವಿರ ರೂ. ಕೂಲಿ ಮೊತ್ತವನ್ನು ಯೋಜನೆಯಡಿ ಪಡೆದ ಕುಟುಂಬ, ಯೋಜನೆಯ 60 :40 ಅನುಪಾತದಲ್ಲಿ ಸುಮಾರು 01 ಲಕ್ಷ ರೂ. ವೆಚ್ಚದ ಜೊತೆಗೆ ಸ್ವಲ್ಪ ಸಾಲದ ಹಣವನ್ನೂ ಸೇರಿಸಿ, ಉತ್ತಮ ಶೆಡ್ ಸಹಿತ ಕೊಟ್ಟಿಗೆಯನ್ನು ನಿರ್ಮಾಣ ಮಾಡಿಕೊಳ್ಳಲಾಗಿದೆ.

**ಆಕಳುಗಳಿಗೆ ಇನ್ಸೂರೆನ್ಸ್ :** ರೈತ ಮಹಿಳೆ ಫಕೀರವ್ವ ಮರಿಯಪ್ಪ ಅವರು, ತಮ್ಮ ಆಕಳುಗಳಿಗೆ ಇನ್ಸೂರೆನ್ಸ್ ಮಾಡಿಸಿದ್ದು, ಗಿಣಿಗೇರಾದ ಎಸ್‌ಬಿಐ ಬ್ಯಾಂಕ್‌ನಲ್ಲಿ ಆಕಳು ವಿಮೆ ಮಾಡಿಸಿದ್ದಾರೆ. ಪ್ರತಿ ಆಕಳಿಗೆ ವರ್ಷಕ್ಕೆ 2300 ರೂ. ಪ್ರೀಮಿಯಂ ಪಾವತಿಸುತ್ತಿದ್ದು, ಆಕಸ್ಮಿಕವಾಗಿ ಅಥವಾ ಇನ್ನಾವುದೇ ಕಾರಣಕ್ಕೆ ಒಂದು ವೇಳೆ ಆಕಳು ಮೃತಪಟ್ಟರೆ, ಆಕಳು ಜೀವವಿಮೆ ನೆರವಿಗೆ ಬರುತ್ತದೆ ಎನ್ನುವುದು ಇವರ ಆಶಯ.

**ಮೊಬೈಲ್ ತಂತ್ರಜ್ಞಾನ ಬಳಕೆ :** ಫಕೀರವ್ವ ಮರಿಯಪ್ಪ ಅವರ ಮಗ ಹನುಮಂತಪ್ಪ ಅವರೇ, ಹೈನುಗಾರಿಕೆಯ ಬಹಳಷ್ಟು ಹೊಣೆಯನ್ನು ಹೊತ್ತಿದ್ದು, ಹೆಚ್ಚೇನು ವಿದ್ಯಾಭ್ಯಾಸ ಹೊಂದಿಲ್ಲದಿದ್ದರೂ, ತಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಡೈರಿ ಆಪ್ ಬಳಸುತ್ತಿದ್ದಾರೆ. ಈ ಮೊಬೈಲ್ ಆಪ್‌ನಲ್ಲಿ ಕನ್ನಡ ಭಾಷೆಯಲ್ಲಿಯೇ ಮಾಹಿತಿ ಲಭ್ಯವಾಗುವುದರಿಂದ, ಆಕಳುಗಳ ತಳಿ, ಆಹಾರ ಪದ್ಧತಿ, ಮೇವು ನಿರ್ವಹಣೆ, ರೋಗಗಳ ನಿರ್ವಹಣೆ, ಕಾಲಕಾಲಕ್ಕೆ ಯಾವ ಲಸಿಕೆ ಹಾಕಬೇಕು ಎನ್ನುವುದರ ಮಾಹಿತಿಯೂ ಸೇರಿದಂತೆ ಹೈನುಗಾರಿಕೆಗೆ ಅತ್ಯುಪಯುಕ್ತ ಮಾಹಿತಿಯ ಸದುಪಯೋಗವನ್ನು ಈ ಆ್ಯಪ್ ಮೂಲಕವೇ ಪಡೆಯುತ್ತಿರುವುದು ನಿಜಕ್ಕೂ ಇತರರಿಗೆ ಅನುಕರಣೀಯವಾಗಿದೆ.

ಪಶುಭಾಗ್ಯ ಯೋಜನೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವ ರೈತ ಮಹಿಳೆ ಫಕೀರವ್ವ ಮರಿಯಪ್ಪ ಅವರು, ಮೀನುಗಾರಿಕೆ ಮಾಡುತ್ತ ತಮ್ಮ ಕುಟುಂಬ ದುಡಿಯುತ್ತಿದ್ದರೆ, ಊಟಕ್ಕೆ, ಬಟ್ಟೆಗೆ ಸರಿಯಾಗುತ್ತಿತ್ತು. ಕುಟುಂಬದಲ್ಲಿನ ಮದುವೆ ಮತ್ತಿತರ ಶುಭಕಾರ್ಯಗಳಿಗೆ ಮತ್ತೆ ನಾವು ಸಾಲ ಮಾಡಬೇಕಾಗುತ್ತಿತ್ತು. ಪಶುಭಾಗ್ಯ ಯೋಜನೆ ನಮ್ಮ ಕುಟುಂಬಕ್ಕೆ ನಿಜಕ್ಕೂ ಭಾಗ್ಯದ ವರವನ್ನೇ ಸರ್ಕಾರ ಕೊಟ್ಟಂತಾಗಿದೆ ಎನ್ನುತ್ತಾರೆ.

ಹೀಗಾಗಿ ಇದೀಗ ನಾವೂ ಅಲ್ಪ–ಸ್ವಲ್ಪ ಆರ್ಥಿಕ ಲಾಭ ಕಾಣುತ್ತಿದ್ದೇವೆ. ಇಂತಹ ಯೋಜನೆಗಳು ನಮ್ಮಂತಹ ಅನೇಕ ಬಡ ಕುಟುಂಬಗಳ ಪಾಲಿಗೆ ಆಶಾಕಿರಣವಾಗಿದೆ. ಶ್ರಮವಹಿಸಿ ಶ್ರದ್ಧೆಯಿಂದ ದುಡಿದರೆ, ಸರ್ಕಾರದ ಯೋಜನೆಗಳು, ಅಂತಹವರ ಕೈಹಿಡಿಯುವುದರಲ್ಲಿ ಅನುಮಾನವಿಲ್ಲ ಎಂದರು.

ಹೆಚ್ಚಿನ ವಿವರಗಳಿಗೆ ಹನುಮಂತಪ್ಪ ಮರಿಯಪ್ಪ– 8970842282 ಸಂಪರ್ಕಿಸಬಹುದು.



# ಡೋಂಗ್ರಿ ಜನರ ಬದುಕಿನಾಸರೆ 'ತೂಗುಸೇತುವೆ'

ಹಿಮಂತರಾಜು ಜಿ.

'ನಾವು ರೈತಾಪಿ ಜನ. ನಮ್ಮ ತಂದೆ ಕಲಿತವರಲ್ಲ, ನದಿ ದಾಟಿ ಹೋಗಿ ಶಾಲೆ ಕಲಿಯಲು ಸಾಧ್ಯವಾಗದೆ ನಮ್ಮ ಓದು ಅರ್ಧಕ್ಕೆ ನಿಂತು ಹೋಯಿತು. ನಮ್ಮ ಮಕ್ಕಳಾದರೂ ಶಾಲೆ ಕಲಿತಾರೂ ಎಂಬ ಮಹದಾಸೆಯಿಂದ ಬಹುಕಾಲದಿಂದ ಇಲ್ಲೊಂದು ಸೇತುವೆ ಆಗಬೇಕೆಂದು ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದೆವು. ಕೊನೆಗೂ ಒಂದು ತೂಗು ಸೇತುವೆ ಆಗಿದೆ. ಇದು ಕೇವಲ ಸೇತುವೆ ಅಷ್ಟೆ ಅಲ್ಲ, ನಮ್ಮ ಬದುಕು ಸಾರ್...' ಎಂದು ಮುಗುಳ್ನಕ್ಕು ಹೇಳುವ ಹೊತ್ತಿಗೆ ಡೋಂಗ್ರಿಯ ರಾಜು ಕೆ.ನಾಯ್ಕ್ ಅವರು ತಮ್ಮ ಕನ್ನಡಕ ತೆಗೆದು ಕಣ್ಣೊರೆಸಿಕೊಂಡರು.

ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲೂಕು ಡೋಂಗ್ರಿ ಗ್ರಾಮ ಪಂಚಾಯ್ತಿ ಜಿಲ್ಲಾ ಕೇಂದ್ರದಿಂದ ಸರಿಸುಮಾರು 90 ಕಿಲೋ ಮೀಟರ್ ದೂರದಲ್ಲಿದೆ. ಡೋಂಗ್ರಿ, ಹೆಗ್ಗರಣಿ, ಬಿದರಹಳ್ಳಿ, ಮಳಲಿಗಾಂವ್ ಗ್ರಾಮಗಳ ಸುಮಾರು 600 ಕುಟುಂಬಗಳು ಈ ಪ್ರದೇಶದಲ್ಲಿದ್ದು, ಬಹುತೇಕ ಎಲ್ಲರೂ ಕೃಷಿ ಅವಲಂಭಿತರಾಗಿದ್ದಾರೆ. ಅವರ ಬದುಕಿನ ಅಗತ್ಯದ ವಸ್ತುಗಳನ್ನು ಕೊಳ್ಳಲು ಅವರು ಅಂಕೋಲ-ಹುಬ್ಬಳ್ಳಿ ಹೆದ್ದಾರಿಯಲ್ಲಿರುವ ಸುಂಕಸಾಳವನ್ನು ಅವಲಂಬಿಸಿದ್ದು ಅದಕ್ಕಾಗಿ ಅವರು ಸಣ್ಣ ದೋಣಿಯ ಮೂಲಕ ಅಲ್ಲಿ ಹರಿಯುವ ಗಂಗಾವಳಿ ನದಿ ದಾಟಿ ಸುಂಕಸಾಳಕ್ಕೆ ಬರಬೇಕು. ಇಲ್ಲವಾದರೆ ರಸ್ತೆ ಮೂಲಕ ಸುಂಕಸಾಳ ತಲುಪಲು ಹೊಸಕಂಬಿ, ಮಾಸ್ತಿಕಟ್ಟೆ ಮೂಲಕ 25 ಕಿಲೋ ಮೀಟರ್ ಕ್ರಮಿಸಿ ಬಳಸಿಕೊಂಡು ಬರಬೇಕಿತ್ತು. ಇದೀಗ ಸರ್ಕಾರದಿಂದ ಗಂಗಾವಳಿ ನದಿಗೆ ಅಡ್ಡಲಾಗಿ ತೂಗುಸೇತುವೆಯೊಂದನ್ನು ನಿರ್ಮಿಸಿದ್ದರಿಂದ ಸುಮಾರು 20 ಕಿಲೋ ಮೀಟರ್ ಅಂತರ ಕಡಿಮೆಯಾಗಿದೆ. ಈ ಮೂಲಕ ಆ ಭಾಗದ ಜನರ ಬಹುದಿನಗಳ ಕನಸು ನನಸಾಗಿ, ಅವರ ಮುಖ ಅರಳುವಂತೆ ಮಾಡಿದೆ.

ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ರೂ.1.65 ಕೋಟಿ ಅನುದಾನದಲ್ಲಿ ಜಿಲ್ಲಾ ನಿರ್ಮಿತಿ ಕೇಂದ್ರ ಖ್ಯಾತ ತೂಗುಸೇತುವೆ ವಿನ್ಯಾಸಕ ಗಿರೀಶ್ ಭಾರಧ್ವಾಜ್ ಅವರ ತಂತ್ರಜ್ಞಾನ ಬಳಸಿ 135 ಮೀಟರ್ ಉದ್ದ 1.2 ಮೀಟರ್ ಅಗಲದ ತೂಗುಸೇತುವೆಯನ್ನು ಇತ್ತೀಚೆಗೆ ಉದ್ಘಾಟಿಸಲಾಯಿತು. ಇದರಿಂದಾಗಿ ಆ ಭಾಗದ ಜನರು ಕಾಲ್ನಡಿಗೆಯಲ್ಲಿ ಅಥವಾ ಮೋಟಾರ್ ಬೈಕ್ ಸಹಾಯದಿಂದ ತೂಗುಸೇತುವೆ ಮೇಲೆ ಸಂಚರಿಸಿ ತಮ್ಮ ಬದುಕಿನ ಬೇಡಿಕೆಯನ್ನೂ ಈಡೇರಿಸಿಕೊಳ್ಳುವಂತಾಗಿದೆ.

ಡೋಂಗ್ರಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ (1ರಿಂದ 5ನೇ ತರಗತಿ) ಮಾತ್ರ ಇದ್ದು ಮಾಧ್ಯಮಿಕ ಮತ್ತು ಪ್ರೌಢಶಾಲೆಗೆ ಆ ಭಾಗದ ಜನರು ಅಲ್ಲಿಂದ ಮೂರ್‍ನಾಲ್ಕು ಕಿಲೋ ಮೀಟರ್ ದೂರವಿರುವ ಸುಂಕಸಾಳಕ್ಕೆ ಬರಬೇಕಿದೆ. ಅಲ್ಲದೆ ಈ ಗ್ರಾಮಗಳಿಗಾಗಿ ಸದ್ಯ ಸಂಚಾರಿ ಆರೋಗ್ಯ ಕೇಂದ್ರವಿದ್ದು ವಾರಕ್ಕೊಮ್ಮೆ ಇಲ್ಲಿನ ಜನರ ಆರೋಗ್ಯ ಶುಶ್ರೂಷೆ ನೋಡಿಕೊಳ್ಳಲಾಗುತ್ತಿದೆ.

ತಮ್ಮ ವೈಯಕ್ತಿಕ ಕೆಲಸಗಳಿಗಾಗಿ ಅಂಕೋಲದಂತಹ ಪೇಟೆಗೆ ಹೋಗಿ ಮರಳಿ ಬರುವಾಗ ಭಾರೀಮಳೆಗೆ ಗಂಗಾವಳಿ ನದಿ ಉಕ್ಕಿ ದೋಣಿಯಿಂದ ದಾಟಲು ಸಾಧ್ಯವಾಗುತ್ತಿರಲಿಲ್ಲ. ಸುಂಕಸಾಳದ ಪರಿಚಯಸ್ಥರ ಮನೆಯಂಗಳದಲ್ಲಿ ಉಳಿದು ಮರುದಿನ ಊರಿಗೆ ಹೋದ ಉದಾಹರಣೆಗಳಿವೆ. ಇನ್ನು ನಮ್ಮೂರಿನ ಜನರು ಅನಾರೋಗ್ಯಪೀಡಿತರಾದರೆ  ಆಸ್ಪತ್ರೆಗೆ ಹೋಗಲು ಹರಸಾಹಸಪಡುತಿದ್ದೆವು ಎನ್ನುತ್ತಾರೆ ಡೋಂಗ್ರಿಯ ಗೋಪಾಲ್ ನಾಯ್ಕ್.

ನಮ್ಮೂರಿನ ಹಿರಿಯರು ಶಾಲೆ ಕಲಿಯದೆ ಅನಕ್ಷರಸ್ತರಾದರು. ಇದೀಗ ನಮ್ಮ ಪೀಳಿಗೆಯ ಜನ ನಾವು ಓದು ಮುಂದುವರಿಸಿದ್ದೇವೆ. ಸುಂಕಸಾಳದಲ್ಲಿ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆ ಕಲಿತಿದ್ದೇವೆ. ನಮ್ಮ ಸಹೋದರ ಪೊಲೀಸ್ ಇಲಾಖೆಯಲ್ಲಿ ನೌಕರಿ ಸೇರಿದ್ದಾನೆ. ನಮ್ಮೂರಿನ ಮಕ್ಕಳು ಸುಲಭವಾಗಿ ಶಾಲೆಗೆ ಹೋಗಲು ಈ ತೂಗುಸೇತುವೆ ಅನುಕೂಲವಾಗಿದೆ ಎಂದು ಡೋಂಗ್ರಿಯ ಯುವಕ ರಾಘವೇಂದ್ರ ಸಂತಸದಿಂದ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ಹೀಗೆ ಸರ್ಕಾರದಿಂದ ನಿರ್ಮಾಣವಾದ ಈ ತೂಗುಸೇತುವೆ ಡೋಂಗ್ರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳ ಜನರ ಬದುಕಿಗೆ ಆಸರೆಯಾಗಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050